ರಂಜನೆ ಬೋಧನೆ ಪ್ರಚೋದನೆ


# ಲಂಕೇಶ್


ಆಗಸ್ಟ್ 11, 2010 ರೂ. 12/-

ದೇಶಕಾಲ
ಎಚ್.ಎಸ್.ವಿ
ಪ್ರತಿಕ್ರಿಯೆ



## ಸಿದ್ದು ಮಿಸೈಲ್





## ಚಿತ್ರದುರ್ಗ ತಹಶೀಲ್ದಾರ್ ಕುಮಾರಸ್ವಾಮಿಯ ಸ್ವಾಹಾ ಪುರಾಣ

## ಲೂಸ್ ಮಾದ ಟೈಟಾದ




# ಜೋಕರ್!

## ಪೇಜಾವರ ಶ್ರೀಯವರ ಒಂದು ಭಾಷಣ!

# ಸರ್ವಾಧಿಕಾರದ ವರಸೆಗಳು

**ಅಸ್ತಿತ್ವಕ್ಕೆ ಬಂದ ಪ್ರಾರಂಭದಿಂದಲೂ ಒಂದಾದ ನಂತರ ಒಂದು ಬಿಕ್ಕಟ್ಟು ಎದುರಿಸುತ್ತಿರುವ ರಾಜ್ಯ ಸರ್ಕಾರ, ತನ್ನ ಪಾಪಕೃತ್ಯಗಳನ್ನು ಮರೆಮಾಚಲು ಜನರ ಭಾವನೆಗಳನ್ನು ಕೆರಳಿಸುವ ಗೋಹತ್ಯೆಯ ವಿಷಯವನ್ನು ಕೈಗೆತ್ತಿಕೊಂಡಿದೆ.**

• ಜಿ.ರಾಜಶೇಖರ



ರಾಜ್ಯ ಸರ್ಕಾರದ ಪ್ರಸ್ತಾಪಿತ ಜಾನುವಾರು ಹತ್ಯೆ ನಿಷೇಧ ಕಾಯ್ದೆಯನ್ನು ಸ್ವಾಗತಿಸುವ ಸಲುವಾಗಿ ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡುತ್ತ ಪೇಜಾವರ ಶ್ರೀಗಳು, "ಗಾಂಧೀಜಿ ಬಗ್ಗೆ ಕಾಂಗ್ರೆಸ್ಸಿಗರಿಗೆ ಹಾಗೂ ಅಂಬೇಡ್ಕರ್ ಬಗ್ಗೆ ದಲಿತರಿಗೆ ಗೌರವವಿದ್ದರೆ, ಈ ಕಾಯ್ದೆಗೆ ವಿರೋಧ ವ್ಯಕ್ತಪಡಿಸಬಾರದು" ಎಂದು ಹೇಳಿದ್ದಾರೆ. ಗಾಂಧೀಜಿಯವರನ್ನು ಗೌರವಿಸುವವರು ಕಾಂಗ್ರೆಸ್ಸಿಗರು ಮಾತ್ರವಲ್ಲ; ಹಾಗೆಯೇ ದಲಿತರು ಮಾತ್ರ ಅಂಬೇಡ್ಕರ್ ಗೌರವಿಸುವುದೂ ಅಲ್ಲ, ಮತಾಂಧರೂ ಜಾತಿ ಜಡರೂ ಆದ ಕೆಲವರನ್ನು ಹೊರತುಪಡಿಸಿ, ಎಲ್ಲ ಭಾರತೀಯರಿಗೂ ಗಾಂಧೀಜಿ ಮತ್ತು ಅಂಬೇಡ್ಕರ್ ಆದರ್ಶ ಪುರುಷರು. ನಾವು ಗೌರವಿಸುವವರ ಜೊತೆ ನಮಗೆ ಯಾವ ಭಿನ್ನಮತವೂ ಇರಕೂಡದು; ಅವರು ಹೇಳುವುದೆಲ್ಲವೂ ವೇದವಾಕ್ಯ ಎಂಬ ಆಗ್ರಹ ಪೇಜಾವರ ಶ್ರೀಗಳ ಮಾತಿನಲ್ಲಿ ವ್ಯಕ್ತವಾಗಿದೆ.

ಇಂತಹ ವಿಧೇಯತೆಯನ್ನು ಮಠಗಳ ಒಳಗೆ ಮಾತ್ರ ಬಯಸಬಹುದು. ಪ್ರಜಾಪ್ರಭುತ್ವದಲ್ಲಿ ಇದು ಸಲ್ಲುವುದಿಲ್ಲ. ಗಾಂಧೀಜಿಯವರ ಬಗ್ಗೆ ಗೌರವವಿರಿಸಿಕೊಂಡೇ, ಅವರ ಜೊತೆ ತೀವ್ರ ಭಿನ್ನಮತ ಹೊಂದಿದ್ದ ಚಿಂತಕರು ಸ್ವಾತಂತ್ರ್ಯ ಚಳವಳಿಯ ದಿನಗಳಲ್ಲೇ ದೊಡ್ಡ ಸಂಖ್ಯೆಯಲ್ಲಿದ್ದರು. ಅವರಲ್ಲಿ ಅನೇಕರು ಗಾಂಧೀಜಿಯವರಿಗೆ ಅನ್ಯೋನ್ಯವಾಗಿಯೂ ಇದ್ದರು. ಕಾಂಗ್ರೆಸ್ಸಿಗನಾಗಿ ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲುಗೊಂಡು, ನಂತರ ಕಮ್ಯುನಿಸ್ಟ್ ಪಕ್ಷ ಸೇರಿದ ಇಎಂಎಸ್ ನಂಬೂದಿರಿಪಾದ್, ಗಾಂಧೀವಾದವನ್ನು ತಿರಸ್ಕರಿಸುವ ತನ್ನ ಕೃತಿ "ಗಾಂಧಿ ಮತ್ತು ಅವರ ಇಸಂ"ನ್ನು ಗಾಂಧೀಜಿ ಬಗ್ಗೆ ಗೌರವವಿರಿಸಿಕೊಂಡೇ ಬರೆದರು.

ಅಂಬೇಡ್ಕರ್ ಅಭಿಮಾನಿಗಳಲ್ಲೂ ಅವರ ಜೊತೆ ಭಿನ್ನಾಭಿಪ್ರಾಯ ಹೊಂದಿದವರಿದ್ದರು. ತನ್ನ ಸಮಕಾಲೀನ ರಾಜಕಾರಣಿಗಳು ಮತ್ತು ಚಿಂತಕರ ಜೊತೆ ಅಂಬೇಡ್ಕರ್ ನಡೆಸಿದ ವಾಗ್ವಾದವೇ, ಒಂದು ಸಾಹಿತ್ಯ ಪ್ರಕಾರವೆನ್ನಿಸುವಷ್ಟು ದೊಡ್ಡದಾಗಿದೆ. ಈಗಲೂ ಅಂಬೇಡ್ಕರ್ ಅಭಿಮಾನಿಗಳಲ್ಲಿ ಎಲ್ಲರೂ ಒಂದೇ ಅಭಿಪ್ರಾಯದವರಲ್ಲ. ಉದಾ: ಜಾಗತೀಕರಣ ಮತ್ತು ಬಂಡವಾಳಶಾಹಿಗಳನ್ನು ಎಡಪಂಥೀಯ ನೆಲೆಯಲ್ಲಿ ವಿರೋಧಿಸುವ ಆನಂದ್ ತೇಲ್ತುಂಬ್ಡೆ ಮತ್ತು ಜಾಗತೀಕರಣದಿಂದಲೇ ದಲಿತರ ವಿಮೋಚನೆ ಎಂಬಂತೆ ವಾದಿಸುವ ಚಂದ್ರಭಾನ್ ಪ್ರಸಾದ್-ಇಬ್ಬರು ಚಿಂತಕರೂ ಅಂಬೇಡ್ಕರ್ ಅಭಿಮಾನಿಗಳೇ ಆದರೂ ಅವರ ನಡುವೆ ಒಮ್ಮತವಿಲ್ಲ. ಅಭಿಪ್ರಾಯ ಭೇದವಾಗಲೀ, ತಪ್ಪು ಅಭಿಪ್ರಾಯವಾಗಲೀ, ಪ್ರಜಾಪ್ರಭುತ್ವದಲ್ಲಿ ಅಪರಾಧವಲ್ಲ. ಆದರೆ ಪೇಜಾವರ ಶ್ರೀಗಳು ಈ ಸಾಧ್ಯತೆಯನ್ನೇ ಅಲ್ಲಗಳೆಯುತ್ತಿದ್ದಾರೆ.

ಸರ್ವಾಧಿಕಾರದ ಈ ವರಸೆ ಹಾಗಿರಲಿ ಗಾಂಧೀಜಿ ಮತ್ತು ಅಂಬೇಡ್ಕರ್ ಜಾನುವಾರು ಹತ್ಯೆ ನಿಷೇಧವಾಗಬೇಕು ಎಂದು ಎಲ್ಲಿ ಹೇಳಿದ್ದಾರೆ? ವೈಯಕ್ತಿಕವಾಗಿ ಗಾಂಧೀಜಿ ಗೋಹತ್ಯೆಯನ್ನು ವಿರೋಧಿಸಿದ್ದರು; ಗೋಮಾಂಸ ಭಕ್ಷಣೆಯನ್ನು ವೈದ್ಯಕೀಯ ಕಾರಣಗಳಿಗೆ ಸಹ ಅವರು ಒಪ್ಪುತ್ತಿರಲಿಲ್ಲ. ಮುಸ್ಲಿಮರು ಸ್ವಇಚ್ಛೆಯಿಂದ ಗೋಮಾಂಸ ತ್ಯಜಿಸಬೇಕು ಎಂಬುದು ಅವರ ಬಯಕೆಯಾಗಿತ್ತು, ಆದರೆ ಗೋಮಾಂಸ ಸೇವನೆಯನ್ನು ಸರ್ಕಾರ ಕಡ್ಡಾಯವಾಗಿ ನಿಷೇಧಿಸುವುದನ್ನೂ ತಾನು ವಿರೋಧಿಸುತ್ತೇನೆ ಎಂದು ಗಾಂಧೀಜಿ ಸ್ಪಷ್ಟಪಡಿಸಿದ್ದರು. ಗೋಹತ್ಯೆ ಪಾಪ ಎಂದು ವೈಯಕ್ತಿಕವಾಗಿ ನಂಬುವುದಕ್ಕೂ, ಆಹಾರಕ್ಕಾಗಿ ಮಾಡುವ ಜಾನುವಾರು ಹತ್ಯೆಯನ್ನು ಸರ್ಕಾರ ಕಾನೂನು ಮುಖಾಂತರ ನಿಷೇಧಿಸುವುದಕ್ಕೂ ಅಂತರವಿದೆ. ಪೇಜಾವರ ಶ್ರೀಗಳು ಅದನ್ನು ಅಲ್ಲಗಳೆಯುತ್ತಿದ್ದಾರೆ. ಹಾಗೆಯೇ ಮತಾಂತರವನ್ನು ವೈಯಕ್ತಿಕವಾಗಿ ವಿರೋಧಿಸುವುದಕ್ಕೂ, ಸರ್ಕಾರ ಅದನ್ನು ನಿಷೇಧಿಸಬೇಕು ಎಂದು ಒತ್ತಾಯಪಡಿಸುವುದಕ್ಕೂ, ವ್ಯತ್ಯಾಸವಿದೆ. ಪೇಜಾವರ ಶ್ರೀಗಳು ಅದನ್ನೂ ಅಲ್ಲಗಳೆಯುತ್ತಿದ್ದಾರೆ.

ಪ್ರಜೆಗಳು ಏನನ್ನು ತಿನ್ನಬೇಕು, ತಿನ್ನಬಾರದು ಎಂದು ನಿರ್ಧರಿಸುವುದು ಸರ್ಕಾರದ ಕೆಲಸವಲ್ಲ; ಅವರ ನಂಬಿಕೆ ಹೇಗಿರಬೇಕು ಎಂದು ನಿರ್ಧರಿಸುವುದು ಸರ್ಕಾರದ ಹಕ್ಕಲ್ಲ. ಆದರೆ ಪ್ರಜೆಗಳ ಮನಸ್ಸು, ಹೃದಯ, ದೇಹ ಮತ್ತು ದೇಹದ ಒಳಗಿನ ಅಂಗಾಂಗಗಳು ಎಲ್ಲದರ ಮೇಲೂ ಸರ್ಕಾರ ಕಣ್ಣಿಡಬೇಕು ಎಂದು ಪೇಜಾವರ ಶ್ರೀಗಳು ಅಪೇಕ್ಷಿಸುತ್ತಿದ್ದಾರೆ. ಶ್ರೀಗಳ ಅಪೇಕ್ಷೆ ಈಡೇರುವುದರಲ್ಲಿದೆ. ಜಾನುವಾರು ಹತ್ಯಾ ನಿಷೇಧ ಕಾಯ್ದೆಗೆ ರಾಜ್ಯಪಾಲರ ಸಹಿ ಬೀಳುವುದು ಮಾತ್ರ ಬಾಕಿ ಇದೆ; ಮತಾಂತರ ನಿಷೇಧ ಕಾಯ್ದೆ ಸರ್ಕಾರದ ಅಜೆಂಡಾದಲ್ಲಿದೆ. ಆದರೆ ರಾಜ್ಯದಲ್ಲಿ ಪ್ರಜಾಪ್ರಭುತ್ವದ ಗತಿ ಏನು?

ಜಾನುವಾರು ಹತ್ಯಾ ನಿಷೇಧದ ಕುರಿತು ತನ್ನ ಒತ್ತಾಯಕ್ಕೆ ಸಮರ್ಥನೆಯಾಗಿ ಪೇಜಾವರ ಶ್ರೀಗಳು ಅಂಬೇಡ್ಕರ್ ಅವರ ಹೆಸರನ್ನು ಸಹ ಪ್ರಸ್ತಾಪಿಸಿದ್ದಾರೆ. ಗೋಮಾಂಸ ಸೇವನೆಯನ್ನು ಯಾವತ್ತೂ ಅಂಬೇಡ್ಕರ್ ವಿರೋಧಿಸಿದ್ದಿಲ್ಲ; ಅವರು ಸಂಪೂರ್ಣ ಜಾನುವಾರು ಹತ್ಯಾ ನಿಷೇಧವನ್ನೂ ಪ್ರತಿಪಾದಿಸಿಲ್ಲ. ಅವರ ಹಿರಿತನದಲ್ಲಿ ರೂಪಿತವಾದ ಭಾರತ ಸಂವಿಧಾನ ಕೂಡ ಜಾನುವಾರು ಹತ್ಯಾ ನಿಷೇಧವನ್ನೂ ಕಡ್ಡಾಯಗೊಳಿಸಿಲ್ಲ. ಸಂವಿಧಾನದ ನಿರ್ದೇಶಕ ತತ್ವಗಳಲ್ಲಿ ಜಾನುವಾರು ತಳಿಗ ಸಂರಕ್ಷಣೆ, ಮತ್ತು ಕೃಷಿಯ ನಿರ್ವಹಣೆಗೋಸುಗ, ಜಾನುವಾರುಗಳ ಹತ್ಯೆಯನ್ ನಿಯಂತ್ರಿಸಬೇಕು ಎಂದು ಮಾತ್ರ ಹೇಳಲಾಗಿದೆ.

ಕರ್ನಾಟಕದಲ್ಲಿ ಈಗ ಜಾರಿಯಲ್ಲಿರುವ "ಗೋಹತ್ಯೆ ತಡೆಗಟ್ಟುವ ಮತ್ ಗೋಸಂರಕ್ಷಣೆಯ ಕಾನೂನು 1964 (1966 ಮತ್ತು 1975 ರ ತಿದ್ದುಪಡಿಗಳೊಂದಿಗೆ)" ಸಂವಿಧಾನದ ಈ ನಿರ್ದೇಶಕ ತತ್ವಕ್ಕೆ ಅನುಗುಣವಾಗಿಯ ಇದೆ. ಈ ಕಾನೂನಿನಲ್ಲೂ ಗೋಹತ್ಯೆಯನ್ನು ಕೆಲವು ವಿನಾಯಿತಿಗಳೊಂದಿ ನಿಷೇಧಿಸಲಾಗಿದೆ. ಹಾಗಿರುತ್ತ ಎಮ್ಮೆ ಕೋಣಗಳೂ ಸೇರಿದಂತೆ ಎಲ ಜಾನುವಾರುಗಳ ಹತ್ಯೆಯನ್ನು ಸಂಪೂರ್ಣವಾಗಿ ನಿಷೇಧಿಸುವುದು ಮಾತ್ರವಲ್ ಜಾನುವಾರು ಹತ್ಯೆಯ "ಅಪರಾಧ"ಕ್ಕೆ ಅತ್ಯಂತ ಕಠಿಣ ಶಿಕ್ಷೆ ವಿಧಿಸುವ ಹೊಸ ಕಾಯ್ದೆಯ ಉದ್ದೇಶವೇನು?

ಅಸ್ತಿತ್ವಕ್ಕೆ ಬಂದ ಪ್ರಾರಂಭದಿಂದಲೂ ಒಂದಾದ ನಂತರ ಒಂದು ಬಿಕ್ಕಟ್ಟು ಎದುರಿಸುತ್ತಿರುವ ರಾಜ್ಯ ಸರ್ಕಾರ, ತನ್ನ ಪಾಪಕೃತ್ಯಗಳನ್ನು ಮರೆಮಾಚಲು ಜನರ ಭಾವನೆಗಳನ್ನು ಕೆರಳಿಸುವ ಗೋಹತ್ಯೆಯ ವಿಷಯವನ್ನು ಕೈಗೆತ್ತಿಕೊಂಡಿದೆ ಬೆಂಗಳೂರಿನ ಸಭೆಯಲ್ಲಿ ಮಾಡಿದ ತನ್ನ ಭಾಷಣದಲ್ಲಿ ಪೇಜಾವರ ಶ್ರೀಗಳು "ಮುಸ್ಲಿಮ್ ತುಷ್ಟೀಕರಣದ ದೃಷ್ಟಿಯಿಂದ ಜಾನುವಾರು ಹತ್ಯೆ ನಿಷೇಧವನ್ ವಿರೋಧಿಸಕೂಡದು" ಎಂದು ಹೇಳಿದ್ದಾರೆ! ಈ ಮಾತು ಕೂಡ ಮತೀಯ ದ್ವೇಷ ಕೆರಳಿಸುವ ಸರ್ಕಾರದ ಹೀನ ರಾಜಕೀಯವನ್ನು ಬೆಂಬಲಿಸುವಂತಹದ್ದಾಗಿದೆ

ಸರ್ಕಾರದ ಪ್ರಸ್ತಾಪಿತ ಕಾಯ್ದೆಗೆ ಮುಸ್ಲಿಮರ ಜೊತೆಗೆ ಸಾಕಷ್ಟು ದೊಡ್ ಸಂಖ್ಯೆಯ ಹಿಂದೂಗಳಿಂದ ವಿರೋಧ ವ್ಯಕ್ತವಾಗಿರುವುದನ್ನು ಪೇಜಾವರ ಶ್ರೀಗಳು ಲೆಕ್ಕಕ್ಕೇ ತೆಗೆದುಕೊಳ್ಳುವುದಿಲ್ಲ, ಅಂತಹ ವಿರೋಧವನ್ನು ಅವರು ಸಹಿಸುವುದೂ ಇಲ್ಲ. ತಮ್ಮ ಈ ಅಸಹನೆಯಿಂದಾಗಿ ಪೇಜಾವರ ಶ್ರೀಗಳು ಪ್ರಸ್ತಾಪಿತ ಕಾಯ್ದೆಯಿಂದ ಕಷ್ಟನಷ್ಟಗಳಿಗೆ ಒಳಗಾಗುವ ಬಡ ಹಿಂದೂ ರೈತರು, ಹಾಲಿನ ವ್ಯವಸಾಯಿಗಳು ಮತ್ತು ಜಾನುವಾರು ದಲ್ಲಾಳಿಗಳನ್ನು ಗಮನಿಸುವುದಿಲ್ಲ. ಸರ್ಕಾರ ಜಾರಿಗೆ ತರಲು ಉದ್ದೇಶಿಸಿರುವ ಕಾಯ್ದೆಯಲ್ಲಿ ಮುದಿ ಹಾಗೂ ಗೊಡ್ಡು ಜಾನುವಾರುಗಳು, ಅನಗತ್ಯವಾದ ಗಂಡು ಕರುಗಳು, ಅಂಗಾಂಗ ಊನವಾಗಿರುವ, ರೋಗಿಷ್ಠ ಹಾಗೂ ಅವಲಕ್ಷಣದ ರಾಸುಗಳನ್ನು ಅವು ಸಾಯುವವರೆಗೂ ಸಾಕಬೇಕಾದ ರೈತರಿಗೆ ಸೂಕ್ತ ಪರಿಹಾರದ ಯಾವ ಪ್ರಸ್ತಾಪವೂ ಇಲ್ಲ. ಜಾನುವಾರು ವ್ಯಾಪಾರಿಗಳು ಮತ್ತು ಮಾಂಸ ಮಾರಾಟಗಾರರಂತೂ ಸರ್ಕಾರದ ಮಟ್ಟಿಗೆ ಅಸ್ತಿತ್ವದಲ್ಲೇ ಇಲ್ಲ.

ರಾಜ್ಯ ಪಶು ಸಂಗೋಪನಾ ಸಚಿವ ರೇವೂ ನಾಯಕ ಬೆಳಮಗಿಯವರನ್ ಪತ್ರಕರ್ತರು ಈ ಕುರಿತು ಪ್ರಶ್ನಿಸಿದಾಗ ಅವರು ತಬ್ಬಿಬ್ಬಾದರಂತೆ. ಈ ಕಾಯ ಜಾರಿಗೆ ಬಂದ ಮೇಲೆ, ರಾಜ್ಯದಲ್ಲಿ ಇರುವ 79 ಗೋಶಾಲೆಗಳ ಜೊತ ಹೊಸದಾಗಿ 176 ಗೋಶಾಲೆಗಳನ್ನು ತೆರೆಯುವುದಾಗಿ ಸಚಿವರು ಹೇಳಿದ್ದಾರೆ ಆದರೆ ಇದಕ್ಕೆ ತಗಲುವ ವೆಚ್ಚವೆಷ್ಟು? ಈ ಗೋಶಾಲೆಗಳಿಗೆ ತಮ್ಮ ರಾಸುಗಳನ್ ಒಯ್ಯಲಾರದ ರಾಜ್ಯದ ಸಾವಿರಾರು ಹಳ್ಳಿಗಳ ರೈತರಿಗೆ ಏನು ಪರಿಹಾರ? ಈ ಪ್ರಶ್ನೆಗಳಿಗೂ ಸಚಿವರ ಬಳಿ ಉತ್ತರವಿಲ್ಲ.

ಮುದಿ ಹಾಗೂ ನಿರುಪಯುಕ್ತ ಜಾನುವಾರುಗಳು ಹಾಕುವ ಸೆಗಣ ಗಂಜಲಗಳಿಂದಲೇ ಅವುಗಳನ್ನು ಸಾಕುವ ವೆಚ್ಚವನ್ನು ದುಡಿದುಕೊಳ್ಳಬಹುದು ಎಂಬ ಹಾಸ್ಯಾಸ್ಪದ ಸುಳ್ಳೊಂದನ್ನು ರಾಜ್ಯದಲ್ಲಿ ಸಂಘ ಪರಿವಾರ ಹಾಗೂ ಆದರ "ಕರಪತ್ರಿಕೆ"ಗಳು ಪ್ರಚಾರ ಮಾಡಿವೆ. ಮಾನ್ಯ ಪಶುಸಂಗೋಪನ ಸಚಿವರಿಗೂ, ಜಾನುವಾರುಗಳ ಬಗ್ಗೆ ಇರುವ ತಿಳಿವಳಿಕೆ ಇದೇ ಮಟ್ಟದ್ದಿರಬಹುದು ಇಂತಹ ಬುದ್ಧಿಗೇಡಿ ರಾಜಕಾರಣಿಗಳು ಪೇಜಾವರ ಶ್ರೀಗಳ ಬೆಂಬಲ ಆಶೀರ್ವಾದಗಳೊಂದಿಗೆ ಜಾರಿಗೆ ತರಲು ಹೊರಟಿರುವ ಜಾನುವಾರು ಹತ್ ನಿಷೇಧ ಕಾಯ್ದೆ ಬಡವರ ಹೊಟ್ಟೆಗೆ ಹೊಡೆಯುವಂತಹದ್ದು; ಜಾನುವಾರುಗಳಿಗೂ ಅದರಿಂದ ಉಪಯೋಗವಿಲ್ಲ. ರಾಜ್ಯಪಾಲರು ಈ ಕಾಯ್ದೆಗೆ ಸಹಿ ಹಾಕಕೂಡದು ಕಡೆಯ ಪಕ್ಷ ಸಹಿ ಹಾಕುವ ಮುನ್ನ, ಈ ಕಾಯ್ದೆಯಿಂದ ಸಂತ್ರಸ್ತರಾಗುವವರಿಗ ಸರ್ಕಾರ ಸೂಕ್ತ ಪರಿಹಾರದ ವ್ಯವಸ್ಥೆಯನ್ನಾದರೂ ಮಾಡಿದೆ ಎಂಬುದನ್ನಾದರೂ ಖಾತ್ರಿ ಪಡಿಸಿಕೊಳ್ಳಬೇಕು.

ಶಿವಸುಂದರ್ ಅವರ 'ಚಾರ್ವಾಕ' ಅಂಕಣ ಅನಿವಾರ್ಯ ಕಾರಣಗಳಿಂದ ಈ ವಾರ ಪ್ರಕಟಗೊಂಡಿಲ್ಲ. ಮುಂದಿನ ವಾರದಿಂದ ಯಥಾಪ್ರಕಾರವಾಗಿ ಅಂಕಣ ಮೂಡಿಬರಲಿದೆ. ಓದುಗರು ಸಹಕರಿಸಿ.


—ಸಂ

# ಕಡೂರು ಕೃಷ್ಣಮೂರ್ತಿ ಬಗ್ಗೆ ಇನ್ನೊಂದಿಷ್ಟು

'ಮಂತ್ರಿಯಾಗದೆ ಮರೆಯಾದ ಕೃಷ್ಣಮೂರ್ತಿ' ಲೇಖನದಲ್ಲಿ ನಮ್ಮ ಚಂದ್ರೇಗೌಡ್ರು 'ಕೆಎಂಕೆ' ಬಗ್ಗೆ ಅರ್ಥಪೂರ್ಣವಾಗಿ ಬರೆದಿದ್ದಾರೆ.

ಕಡೂರು ಮತ್ತು ತರೀಕೆರೆ ತಾಲ್ಲೂಕಿನಲ್ಲಿ ಯಾವುದೇ ಮದುವೆ ನಡೆಯಲಿ ಅಲ್ಲಿ ಕೃಷ್ಣಮೂರ್ತಿ ಹಾಜರಾಗುತ್ತಿದ್ದರು. ಅಂತಹ ಒಂದು ಸಂದರ್ಭದಲ್ಲಿ ಅಚಾನಕ್ ಆಗಿ ನನ್ನನ್ನು ಭೇಟಿಯಾಗಿ "ನಿಮ್ಮ ಗೌರಿ ಮೇಡಂ ಅವರನ್ನು ಕಡೂರಿಗೆ ಕರೆಸಬೇಕು. ಅದಕ್ಕೆ ನೀವು ಅರೇಂಜ್ ಮಾಡಿಕೊಡ್ತೀರಾ. ಅವರ ಹತ್ತಿರ ತುಂಬಾ ಮಾತಾಡಬೇಕು" ಎಂದರು. "ಓ ಯಸ್, ಆಗಬಹುದು" ಎಂದು ನಾನು ಜಾರಿಕೊಂಡೆ.

ನಮ್ಮ ಕ್ಯಾಪ್ಟನ್‌ಗೆ ರಾಜಕಾರಣಿಗಳು ಅಂದ್ರೆ ಒಂಥರಾ ಅಲರ್ಜಿ. ಇದೆಲ್ಲಾ ಆಗದ ಕೆಲಸ ಎಂದು ಈ ವಿಷಯವನ್ನು ಕ್ಯಾಪ್ಟನ್‌ಗೆ ಹೇಳಲೇ ಇಲ್ಲ. ಇನ್ನು ಅವರನ್ನು ಕರೆಸುವುದೆಂತು?



ಕೃಷ್ಣಮೂರ್ತಿಯವರ ಹೆಸರೇಳಿಕೊಂಡು ಅವರ ದೂರದ ಸಂಬಂಧಿಗಳು ಅವರಿಗೆ ಗೊತ್ತಾಗದಂತೆ ಅವರ ಹೆಸರಿಗೆ ಮಸಿ ಬಳಿಯುತ್ತಿದ್ದರು. ಕಡೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಓರ್ವ ಹಂಗಾಮಿ ಪ್ರಾಚಾರ್ಯನ ವಿಕೃತ ಮನಸ್ಸಿನಿಂದಾಗಿ ಕಡೂರು ಒಮ್ಮೆ ಹತ್ತಿ ಉರಿಯಿತು. ಬಿಜೆಪಿಗಳು ಇದನ್ನೇ ಅಸ್ತ್ರ ಮಾಡಿಕೊಂಡು ಲಾಭ ಮಾಡಿಕೊಂಡರು.

ಇದರ ಬಗ್ಗೆ ನಾನು ಕೃಷ್ಣಮೂರ್ತಿ ಅವರೊಂದಿಗೆ ಮಾತನಾಡಿದಾಗ ಅವರು "ನನಗೆ ಇದರ ಬಗ್ಗೆ ಏನೂ ಗೊತ್ತೇ ಇಲ್ಲ. ಆತ ಈ ರೀತಿ ಮಾಡಿದ್ದಾನ?" ಎಂದು ಆ ಪ್ರಾಚಾರ್ಯನ ಬಗ್ಗೆ ಅಸಹ್ಯ ಪಟ್ಟುಕೊಂಡರು. ಇನ್ನೊಮ್ಮೆ ಅತ್ಯಾಚಾರ ಪ್ರಕರಣದಲ್ಲಿ ಅವರ ಸಂಬಂಧಿ ಒಬ್ಬ ಸಿಕ್ಕಿಹಾಕಿಕೊಂಡು ಕಡೂರಿನ ಜನ ಆತನನ್ನು ಮೆರವಣಿಗೆ ಮಾಡುತ್ತಿದ್ದರೆ ಈ ಶಾಸಕ ಸಾರ್ವಜನಿಕರನ್ನು ಎದುರಿಸಲಾಗದೆ ಬೆಂಗಳೂರಿಗೆ ಪೇರಿ ಕಿತ್ತಿದ್ದರು.

ಈಗ ಕೃಷ್ಣಮೂರ್ತಿಯವರ ನಿಧನದ ನಂತರ ನಡೆಯಲಿರುವ ಮರುಚುನಾವಣೆಯಲ್ಲಿ ಅವರ ಪತ್ನಿ ಸುಜಾತ ಅವರನ್ನು ತಮ್ಮತ್ತ ಸೆಳೆದು ಅವರನ್ನು ಶಾಸಕಿಯನ್ನಾಗಿಸಲು ಬಿಜೆಪಿಗಳು ಹವಣಿಸುತ್ತಿವೆ. ಹಾಗೆಯೇ ಕಾಂಗ್ರೆಸ್‌ನವರು ಕೃಷ್ಣಮೂರ್ತಿಯವರ ಸಹೋದರ ಕೆಂಪರಾಜನಿಗೆ ಟಿಕೆಟ್ ನೀಡಿ ಆತನನ್ನು ಶಾಸಕನನ್ನಾಗಿ ಮಾಡಲು ತಯಾರಾಗುತ್ತಿದ್ದಾರೆ.

ವಿರೋಧಿಗಳೂ ಸಹ ಕೃಷ್ಣಮೂರ್ತಿಯವರ ಕಾರ್ಯವೈಖರಿಗೆ ದಂಗುಬಡಿದು ಹೋಗುತ್ತಿದ್ದರು. ತನ್ನದಲ್ಲದ ಸರ್ಕಾರವಿದ್ದರೂ ಸಹ ಅಪಾರವಾಗಿ ಸಂಪನ್ಮೂಲಗಳನ್ನು ತಂದು ಕಡೂರು ಕ್ಷೇತ್ರದ ಅಭಿವೃದ್ಧಿಗೆ ಹಗಲೂ-ರಾತ್ರಿ ಶ್ರಮಿಸುತ್ತಿದ್ದ ಕೃಷ್ಣಮೂರ್ತಿ ಇನ್ನೊಂದಿಷ್ಟು ದಿನ ಬದುಕಿರಬೇಕಿತ್ತು.

• ಶೂದ್ರ ಸಂತೋಷ್, ಅಜ್ಜಂಪುರ

# ಭಾರತೀಯ ಜೋಕರ್ಸ್ ಪಕ್ಷ!



## ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಬಿಜೆಪಿ ಅಂದರೆ ಈಗ ಭಾರತೀಯ ಜನತಾ ಅಲ್ಲ, ಬದಲಾಗಿ ಭಾರತೀಯ ಜೋಕರ್ಸ್ ಪಕ್ಷ! ಕ್ಕೆ ಇತ್ತೀಚಿನ ಉದಾಹರಣೆ ತನ್ನ ತಲೆ ಳಿಸಿಕೊಂಡು 'ಪ್ರತಿಭಟಿಸಿರುವ' ಶ್ರೀರಾಮುಲು. ನೊಂದು ಕಾಲದಲ್ಲಿ ಬಳ್ಳಾರಿಯ ಪುಡಿ ಪಡ್ಡೆ ವಕನಾಗಿದ್ದ ಶ್ರೀರಾಮುಲು ಇವತ್ತು ಟ್ಯಾಧಿಪತಿ ಆಗಿರಬಹುದು, ಸಚಿವನೂ ಬಹುದು ಆದರೆ ಈತನ ತಲೆ ಮಾತ್ರ ರ್ಣವಾಗಿ ಖಾಲಿ ಎಂಬುದು ಈ ಳು"ತನವೇ ಸಾಬೀತುಪಡಿಸುತ್ತಿದೆ.

ತೆಲುಗು ಸಿನಿಮಾಗಳ ಸಂಸ್ಕೃತಿ, ಆಂಧ್ರದ ಮಾಲೀಕರ ದರ್ಪ ಮತ್ತು ಸಿರಿತನದ ಗರ ಸಿಕೊಂಡಿರುವ ಶ್ರೀರಾಮುಲುಗೆ ಗ್ರೆಸ್ಸಿಗರ ಪಾದಯಾತ್ರೆಗೆ ತ್ತವಾದ ರಾಜಕೀಯ ಉತ್ತರ ಲಾಗಿಲ್ಲ. "ನಾನು ಚೆನ್ನಾಗಿ ಸಿಕೊಂಡರೆ ಬಳ್ಳಾರಿ ಮೇಲೆ ಬೀಳುತ್ತದೆ. ಅದಕ್ಕೆ ತಲೆ ಳಿಸಿಕೊಂಡಿದ್ದೇನೆ" ಎಂದು ಹೇಳಿದ್ದನ್ನು ನೋಡಿ ನಾವು ಟ್ಟೆ ತುಂಬ ನಕ್ಕೆವು. ಅಷ್ಟೇ "ನಾನು ಕಪ್ಪು ಬಟ್ಟೆ ಸುತ್ತೇನೆ. ಬರೀಕಾಲಲ್ಲಿ ಯುತ್ತೇನೆ, ನೆಲದ ಮೇಲೆ ಗುತ್ತೇನೆ. ಸಸ್ಯಾಹಾರ ತ್ತೇನೆ. ಮನೆಯಿಂದ ಪಸ್ಥಾನಕ್ಕೆ, ಪಕ್ಕದ ತಾಲ್ಲೂಕಿಗೆ ಯಾತ್ರೆ ಮಾಡುತ್ತೇನೆ" ದೆಲ್ಲ ಶ್ರೀರಾಮುಲು ವುದೋ ತೆಲುಗು ಸಿನಿಮಾದ ಜಿಡಿ ಹೀರೋ ತರಹ ಸುತ್ತಿದ್ದರೆ ನಮಗೆ ಅದೆಲ್ಲ ದ್ದ ಕಾಮಿಡಿಯಾಗಿ ಸುತ್ತಿತ್ತು, ಕೇಳಿಸುತ್ತಿತ್ತು.

ಈ ಹಿಂದೆ ಶ್ರೀರಾಮುಲುನ ತ್ರ' ತಾಯಿ ಸುಷ್ಮಾ ಸ್ವರಾಜ್ ತ ಇಂತಹದ್ದೇ ಡೈಲಾಗ್‌ಗಳನ್ನು ಡೆದು ಇಡೀ ದೇಶಕ್ಕೆ ರಂಜನೆ ನೀಡಿದ್ದರು. ಅಂದಿನ ಾವಣೆಯಲ್ಲಿ ಬಿಜೆಪಿ ತಿತ್ತಲ್ಲದೆ, ಇನ್ನೇನು ಕಾಂಗ್ರೆಸ್ ನಾಯಕಿ ನಿಯಾ ಗಾಂಧಿ ಪ್ರಧಾನಿ ಆಗುತ್ತಾರೆಂದು ಗೊಂಡ ಸುಷ್ಮಾ ಸ್ವರಾಜ್ "ಆಕೆ ಪ್ರಧಾನಿ ರೆ ಇನ್ನು ಮುಂದೆ ನಾನು ತಲೆ ೞಿಸಿಕೊಂಡು ವಿಧವೆ ತರ ಜೀವಿಸ್ತೀನಿ" ಎಂದು ? ನಗಪಾಟಲಿಗೀಡಾಗಿದ್ದರು. ಈಗ ಾಮುಲು ಕೂಡ ಆಕೆಯಂತೆಯೇ ಸುತ್ತಿದ್ದಾನೆ.

ಇದನ್ನು ಯಥಾ ತಾಯಿ, ತಥಾ ಪುತ್ರ ದೆನ್ನಬಹುದೇ?!

ಶ್ರೀರಾಮುಲುಗಿಂತ ಮುನ್ನ ಆತನ ಗೆಣೇಕಾರ ರ್ದನ ರೆಡ್ಡಿ ಕೂಡ ತನ್ನನ್ನು "ಅಪರಂಜಿ ಚಿನ್ನ" ದು ಬಣ್ಣಿಸಿಕೊಳ್ಳುವ ಮೂಲಕ ದೊಡ್ಡ ಜೋಕ್ ಡೆದಿದ್ದರು. ತಲೆಯಲ್ಲಿ ಗಣಿ ಧೂಳನ್ನು ತುಂಬಿಕೊಂಡವರು ಮಾತ್ರ ತನಗೆ ತಾನೇ ಇಂತಹ ಸರ್ಟಿಫಿಕೇಟ್ ಕೊಟ್ಟುಕೊಳ್ಳಲು ಸಾಧ್ಯ ಎಂದು ಜನ ಲೇವಡಿ ಮಾಡಿದ್ದರು.

ಈ ಬಳ್ಳಾರಿ ರೆಡ್ಡಿಗಳು ರಾಜಕೀಯ ಅಂದರೆ ಏನೆಂದುಕೊಂಡಿದ್ದಾರೆ? ತಾವು ಕದ್ದು ಇಟ್ಟುಕೊಂಡಿರುವ ಹಣದ ಮೂಲಕವೇ ಎಲ್ಲವನ್ನು ಖರೀದಿಸುವುದೇ ರಾಜಕಾರಣ; ತೋಳ್ಬಲದಿಂದ ಅಧಿಕಾರ ಚಲಾಯಿಸುವುದೇ ಜನಸೇವೆ ಎಂದು ಅವರು ಭಾವಿಸಿರುವುದು ಮುಠ್ಠಾಳತನ ಹೊರತು ಯಾವ ರೀತಿಯಲ್ಲೂ ಪ್ರಜಾತಂತ್ರದಲ್ಲಿ ರಾಜಕಾರಣವಾಗುವುದಿಲ್ಲ.

ಇನ್ನು ಪೆದ್ದ ಶಿಖಾಮಣಿಗಳಾದ ಈ ರೆಡ್ಡಿಗಳ



ಆಜ್ಞಾಪಾಲಕನಾಗಿರುವ ಮುಖ್ಯಮಂತ್ರಿ ಯಡಿಯೂರಪ್ಪನಂತೂ ಜೋಕರ್‌ಗಳ ಹೆಡ್‌ಮಾಸ್ಟರ್‌ನಂತಾಡುತ್ತಿದ್ದಾರೆ. ಒಂದು ದಿನ "ರೆಡ್ಡಿಗಳು 101% ಶುದ್ಧರು" ಎಂದು ಘೋಷಿಸುವ ಯಡ್ಡಿ ಇನ್ನೊಂದು ದಿನ "ಅದಿರು ರಫ್ತನ್ನು ನಿಷೇಧಿಸುತ್ತೇನೆ" ಎನ್ನುತ್ತಾರೆ.

"ಅಲ್ಲ ಮಾರಾಯ, ಬೇಲೇಕೇರಿ ಬಂದರಿನಿಂದ ಹಾಡುಹಗಲೇ 2,500 ಕೋಟಿ ರೂಪಾಯಿ ಬೆಲೆಬಾಳುವ ಅದಿರನ್ನು ಕದ್ದ ಕಳ್ಳರನ್ನು ಪತ್ತೆಹಚ್ಚು" ಅಂದರೆ ಈ ಯಡಿಯೂರಪ್ಪ ಆ ಕಳ್ಳತನಕ್ಕೆ ಸಂಬಂಧಿಸದೇ ಇರುವುದರ ಬಗ್ಗೆ ಬಾಯಿ ಬಡಿದುಕೊಳ್ಳುತ್ತಾರೆ.

ಪಾದಯಾತ್ರೆಗೆ ರೆಡ್ಡಿಗಳ ಉತ್ತರ ವ್ರತವಾದರೆ, ಕಳ್ಳತನಕ್ಕೆ ಯಡ್ಡಿಯ ಉತ್ತರ ರೈಲು ಬಿಡುವುದು!

ಇದು ರಾಜ್ಯಮಟ್ಟದ ಭಾರತೀಯ ಜೋಕರ್ಸ್‌ಗಳ ಕತೆಯಾದರೆ, ಆ ಪಕ್ಷದ ರಾಷ್ಟ್ರಾಧ್ಯಕ್ಷ ನಿತಿನ್ ಗಡ್ಕರಿ ಎಂಬುವವನಂತೂ ಅತಿ ದೊಡ್ಡ ಜೋಕರ್ ಆಗಿದ್ದಾನೆ. ಪಕ್ಷದ ಗಂಭೀರ ಸಭೆಯಲ್ಲಿ ಆರ್ಕೆಸ್ಟ್ರಾ ಹಾಡುಗಾರನಂತೆ ಹಿಂದಿ ಸಿನಿಮಾಗಳ ಹಾಡುಗಳನ್ನು ಹಾಡುವ ಗಡ್ಕರಿ, ಸಾರ್ವಜನಿಕ ಪ್ರತಿಭಟನಾ ಸಭೆಯಲ್ಲಿ ಗಾಳಿ ಕಳೆದುಕೊಂಡ ಬಲೂನಿನಂತೆ ಠುಸ್ ಎಂದು ಮೂರ್ಛೆ ಹೋಗುತ್ತಾನೆ. ಪ್ರತಿ ಪಕ್ಷದ ನಾಯಕರಿಗೆ ರಾಜಕೀಯವಾಗಿ ಉತ್ತರಿಸಲು /ಸವಾಲು ಹಾಕಲು ಬಾರದ ಗಡ್ಕರಿ 'ನಾಯಿ', 'ಕತ್ತೆ' ಎಂದೆಲ್ಲಾ ಅವರನ್ನು ಜರಿಯಲು ಯತ್ನಿಸಿ ಮುಖಕ್ಕೆ ಉಗಿಸಿಕೊಳ್ಳುತ್ತಾನೆ. ಇಂತಹ ಗಡ್ಕರಿ ಮೊನ್ನೆ ಹಲವು ಯಡವಟ್ಟು ಹೇಳಿಕೆಗಳನ್ನು ನೀಡಿದ್ದಾನೆ. "ಸಿಬಿಐ ಈಗ ಕಾಂಗ್ರೆಸ್ ಬ್ಯುರೋ ಆಫ್ ಇನ್‌ವೆಸ್ಟಿಗೇಷನ್ ಆಗಿದೆ" ಎಂದು ಗಡ್ಕರಿ ಹೇಳುವ ಮೂಲಕ ತನ್ನ ಅಜ್ಞಾನವನ್ನು ಪ್ರದರ್ಶಿಸಿದ್ದಾನಲ್ಲದೆ, ನೇರವಾಗಿ ಸುಪ್ರೀಂಕೋರ್ಟಿಗೆ ಅವಮಾನ ಮಾಡಿದ್ದಾನೆ.

ಇತ್ತೀಚೆಗೆ ಸೊಹ್ರಾಬುದ್ದೀನ್ ಎಂಬಾತನ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಗುಜರಾತಿನ ಮುಖ್ಯಮಂತ್ರಿ ನರೇಂದ್ರ ಮೋದಿಯ ಪರಮ ಭಂಟ ಮತ್ತು ಆ ರಾಜ್ಯದ ಗೃಹ ಸಚಿವನೂ ಆಗಿದ್ದ ಅಮಿತ್‌ಶಾನನ್ನು ಸಿಬಿಐ ಪೊಲೀಸರು ಬಂಧಿಸಿದ್ದಕ್ಕೆ ಗಡ್ಕರಿ ಈ ಪ್ರತಿಕ್ರಿಯೆಯನ್ನು ನೀಡುವ ಮೂಲಕ ಇದೊಂದು ಕಾಂಗ್ರೆಸ್ ಪಕ್ಷದ ಷಡ್ಯಂತ್ರ ಎಂದು ಬಿಂಬಿಸಲು ನೋಡಿದ್ದಾನೆ. ಆದರೆ ವಾಸ್ತವವಾಗಿ ಈ ಪ್ರಕರಣವನ್ನು ಸಿಬಿಐ ತನಿಖೆ ಮಾಡಬೇಕೆಂದು ಆದೇಶಿಸಿದ್ದು ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರವಲ್ಲ; ಬದಲಾಗಿ ಸುಪ್ರೀಮ್‌ಕೋರ್ಟ್! ಇಷ್ಟು ಅರಿವೂ ಬಿಜೆಪಿ ಅಧ್ಯಕ್ಷ ಗಡ್ಕರಿಗಿಲ್ಲ ಎಂದರೆ ಏನನ್ನಬೇಕು?

ಇದೇ ಗಡ್ಕರಿಯ ಇನ್ನೊಂದು ಹೇಳಿಕೆ ಆಘಾತಕಾರಿಯಾಗಿದೆ. ಸೊಹ್ರಾಬುದ್ದೀನ್ ಕೊಲೆ ಕುರಿತ ತನಿಖೆ ಬಗ್ಗೆ ಈ ಗಡ್ಕರಿ "ಎನ್‌ಕೌಂಟರ್‌ಗಳನ್ನು ಕುರಿತು ಇಂತಹ ತನಿಖೆಗಳನ್ನು ಪ್ರಾರಂಭಿಸಿದರೆ ಪೊಲೀಸರು ಕ್ರಿಮಿನಲ್‌ಗಳನ್ನು ಕೊಲ್ಲಲಾಗುತ್ತದೆಯೇ? ಭಯೋತ್ಪಾದನೆಯನ್ನು ತಡೆಯಲಾಗುತ್ತದೆಯೇ?" ಎಂದು ಪ್ರಶ್ನಿಸಿದ್ದಾರೆ.

ಅಂದರೆ ಈ ಅವಿವೇಕಿಯ ಪ್ರಕಾರ ಪೊಲೀಸರು ಪೊಲೀಸ್ ಕೆಲಸ ಮಾತ್ರ ಮಾಡಬಾರದು; ಅದರ ಜೊತೆಗೆ ನ್ಯಾಯಾಧೀಶರಾಗಿಯೂ, ಶಿಕ್ಷೆ ವಿಧಿಸುವವರಾಗಿಯೂ, ಗಲ್ಲಿಗೇರಿಸುವವರಾಗಿಯೂ ಕರ್ತವ್ಯ ಪಾಲಿಸಬೇಕು. ಅಷ್ಟೇ ಅಲ್ಲ, ಕ್ರಿಮಿನಲ್ ಒಬ್ಬನನ್ನು ಕಂಡಕೂಡಲೇ ಆತನನ್ನು ಬಂಧಿಸುವ ಬದಲಾಗಿ ಪೊಲೀಸರು ಆತನನ್ನು ಸ್ಥಳದಲ್ಲೇ ಕೊಂದು ಹಾಕಿಬಿಡಬೇಕು. ಇಂತಹ ಧೋರಣೆಯ ಗಡ್ಕರಿ ಭಾರತೀಯ ಜೋಕರ್ಸ್ ಪಕ್ಷದ ನಾಯಕನಾಗಿರುವುದಕ್ಕೆ ಅರ್ಹನಲ್ಲವೇ?

******

ಬಳ್ಳಾರಿಯ ಖದೀಮರ ಹುಂಬತನ ಎಂತಹದ್ದೆಂದರೆ ಕಾಂಗ್ರೆಸ್ಸಿನ 'ನಾಡ ರಕ್ಷಣೆಗೆ ನಡಿಗೆ'ಗೆ ಉತ್ತರವಾಗಿ ತಾವೇ ಬಳ್ಳಾರಿಯಿಂದ ಮೈಸೂರಿಗೆ ಪಾದಯಾತ್ರೆ ನಡೆಸುವುದಾಗಿ ಘೋಷಿಸಿದರು. ಆದರೆ ಕಾಂಗ್ರೆಸ್‌ನ ಪಾದಯಾತ್ರೆ ಆ ಪಕ್ಷದ ಕಾರ್ಯಕ್ರಮವಾದರೆ ಈ ರೆಡ್ಡಿಗಳದ್ದು ತಮ್ಮ ಗೂಂಡಾಪಡೆಯ ಕಾರ್ಯಕ್ರಮವಾಗಿರುತ್ತಿತ್ತು. ಈಗಾಗಲೇ ಈ ರೌಡಿ ರೆಡ್ಡಿಗಳ ದೆಸೆಯಿಂದ ಸಾಕಷ್ಟು ಮುಖಭಂಗ ಅನುಭವಿಸಿರುವ ಬಿಜೆಪಿಗೆ ಮತ್ತು ಅದಕ್ಕಿಂತ ಮುಖ್ಯವಾಗಿ ಬಿಜೆಪಿ ತರಹದ ಹಿಂದೂತ್ವವಾದಿ ಸಂಘಟನೆಗಳನ್ನು ನಿಯಂತ್ರಿಸುವ ಆರೆಸ್ಸೆಸಿಗೆ, ರೆಡ್ಡಿಗಳ ಈ ಸ್ವಯಂಪ್ರೇರಿತ ಪಾದಯಾತ್ರೆ ಯೋಜನೆಯನ್ನು ಸಹಿಸಲಾಗಲಿಲ್ಲ. ಅದಕ್ಕೆ ಚೆಡ್ಡಿಗಳು ರೆಡ್ಡಿಗಳಿಗೆ ತಡೆ ಒಡ್ಡಿದರು.

ಆದರೆ ಈ ರೆಡ್ಡಿ ಗ್ಯಾಂಗ್ ಅದೆಷ್ಟು ಅಹಂನಿಂದ ತುಂಬಿದೆ ಎಂದರೆ "ನೀವು ಬೇಡ ಅಂದರೆ ಕತ್ತೆಬಾಲ" ಎಂದು ನೇರವಾಗಿ ತಮ್ಮ 'ತಾಯಿ' ಸುಷ್ಮ ಸ್ವರಾಜಳನ್ನು ಸಂಪರ್ಕಿಸಿ ತಮ್ಮ ಈ ಯೋಜನೆಗೆ ದೆಹಲಿಯಿಂದಲೇ ಹಸಿರುನಿಶಾನೆ ಪಡೆಯಲು ಯತ್ನಿಸಿದರು. ಆದರೆ ಅವರ ದುರಾದೃಷ್ಟ ಎಂತಹದ್ದು ನೋಡಿ. ಸುಷ್ಮ ಸ್ವರಾಜ್ ಈ ಕಳ್ಳರಿಗೆ 'ತಾಯಿ' ಆಗುವ ಮುನ್ನ ಆರೆಸ್ಸೆಸಿಗರ 'ಮಗಳಾ'ಗಿದ್ದವಳಲ್ಲವೇ? ಆದ್ದರಿಂದ ಆಕೆ 'ಚೆಡ್ಡಿ'ಗಳ ಶಿಸ್ತಿಗೆ ತಲೆದೂಗಲೇಬೇಕಾಯಿತು. ಆಕೆ ಕೂಡ ರೆಡ್ಡಿಗಳ ಪಾದಯಾತ್ರೆಗೆ ಅನುಮತಿಯನ್ನು, ಆಶೀರ್ವಾದವನ್ನು ನಿರಾಕರಿಸಿದಳು.

ಇದೆಲ್ಲದರಿಂದ ತಲೆ ಕೆಟ್ಟ ರೆಡ್ಡಿಗಳು ಶ್ರೀರಾಮುಲುವಿನ ತಲೆ ಬೋಳಿಸಿ 'ಪ್ರತಿಭಟಿ'ಸಿದ್ದಾರೆ! ಅಂತೂ ಇಷ್ಟು ವರ್ಷಗಳ ಕಾಲ ರಾಜ್ಯದ ಸಂಪತ್ತನ್ನೇ ಬೋಳಿಸುತ್ತಿದ್ದ ರೆಡ್ಡಿ ಗ್ಯಾಂಗ್ ಈಗ ತಾನೇ ತಲೆ ಬೋಳಿಸಿಕೊಳ್ಳುವ ಹಂತಕ್ಕೆ ಬಂದಿರುವುದು ನೆಮ್ಮದಿಯ ಸಂಗತಿ ಅಲ್ಲವೆ? ●

## ಜುಲೈ 31 ಶನಿವಾರದಂದು ಪಾದಯಾತ್ರೆಯಲ್ಲಿ 'ಲಂಕೇಶ್' ತಂಡ

ರಾಜ್ಯ ಕಾಂಗ್ರೆಸ್ಸಿಗರು ಅಕ್ರಮ ಗಣಿಗಾರಿಕೆಯ ವಿರುದ್ಧ ಹಾಗೂ ಬಿಜೆಪಿಯ ಗಣಿ ಮಾಫಿಯಾಗಳ ವಿರುದ್ಧ ನಡೆಸುತ್ತಿರುವ 'ನಾಡ ರಕ್ಷಣೆಗೆ ನಡಿಗೆ'ಯನ್ನು 'ಲಂಕೇಶ್' ಬಳಗ ಬೆಂಬಲಿಸುತ್ತದೆ.

ಬಹಳ ಮುಖ್ಯವಾಗಿ ಬಳ್ಳಾರಿಯ ರೆಡ್ಡಿ ಗ್ಯಾಂಗ್ ನಡೆಸುತ್ತಿರುವ ಗೂಂಡಾಗಿರಿ ಹಾಗೂ ಅಕ್ರಮಗಳು, ಆಡುತ್ತಿರುವ ಮಾತು, ನಡವಳಿಕೆಗಳು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಎದುರಾಗಿರುವ ನೇರ ಬೆದರಿಕೆ ಎಂದು ಪತ್ರಿಕಾ ತಂಡ ಭಾವಿಸಿದೆ.

ಹಾಗಾಗಿ ಈ ಆಂದೋಲನಕ್ಕೆ ನೈತಿಕ ಬೆಂಬಲ ಸೂಚಿಸಲು 'ಲಂಕೇಶ್' ಬಳಗವು ದಿನಾಂಕ 31.7.2010 ಶನಿವಾರ ಬೆಳಗ್ಗೆ ಪಾದಯಾತ್ರೆಯಲ್ಲಿ ಕೆಲ ಕಾಲ ಭಾಗವಹಿಸಲಿದೆ.

ಸಮಾನ ಮನಸ್ಕ ಪತ್ರಿಕಾ ಬಳಗದ ಸ್ನೇಹಿತರು ನಮ್ಮನ್ನು ಜುಲೈ 31 ರ ಶನಿವಾರ ಬೆಳಗ್ಗೆ 10 ಗಂಟೆಗೆ ಬಿಡದಿ ಬಳಿ ನಲ್ಲಿ ಸೇರಿಕೊಳ್ಳಬಹುದು.

• ಲಂಕೇಶ್ ಬಳಗ

## ಗೋಹತ್ಯೆ ನಿಷೇಧ: ಜನಪರ ಹೋರಾಟಕ್ಕೆ ಆರಂಭಿಕ ಜಯ

ಈ ನೆಲದ ಬಹುತೇಕರ ಆಹಾರದ ಹಕ್ಕು ಕಸಿದುಕೊಳ್ಳುವ, ಸನಾತನವಾದಿಗಳನ್ನು ಓಲೈಸಿಕೊಳ್ಳುವ ಉದ್ದೇಶದಿಂದಲೇ ರಚನೆಯಾದದ್ದು ಗೋಹತ್ಯೆ ನಿಷೇಧ ವಿಧೇಯಕ. ಇದರ ಮೂಲಕವೇ ಏನೋ ಸಾಧಿಸಿದಂತೆ ಎಗರಾಡುತ್ತಿರುವ ಸರ್ಕಾರಕ್ಕೆ ಮುಖಭಂಗವಾಗಿದೆ. ಜನಪರ ಹೋರಾಟಗಳಿಗೆ ಆರಂಭಿಕ ಜಯ ಸಿಕ್ಕಿದೆ.

ಕಾರಣ; ರಾಜ್ಯಪಾಲ ಹಂಸರಾಜ್ ಭಾರದ್ವಾಜ್ ಈ ವಿಧೇಯಕಕ್ಕೆ ಏಕಾಏಕಿ ಒಪ್ಪಿಗೆ ನೀಡಲು ನಿರಾಕರಿಸಿ ಅದನ್ನು ರಾಷ್ಟ್ರಪತಿಗಳಿಗೆ ರವಾನಿಸಿದ್ದಾರೆ. ರಾಜ್ಯದ ಬಹುಜನರ ಮೂಲಭೂತ ಹಕ್ಕಿಗೆ ಮುಳುವಾಗುವಂಥ ಇದಕ್ಕೆ ನನ್ನ ಒಪ್ಪಿಗೆಯಿಲ್ಲ, ಆದುದರಿಂದಲೇ ರಾಷ್ಟ್ರಪತಿಯವರಿಗೆ ಕಳಿಸಿದ್ದೇನೆ ಅಂದಿದ್ದಾರೆ.


ಇದು ಜನವಿರೋಧಿ, ರೈತ ಬಡಜನರ ವಿರೋಧಿ ಯಡ್ಡಿ ಸರ್ಕಾರಕ್ಕಾದ ತೀವ್ರ ಮುಖಭಂಗ ಹಾಗೂ ಜನಪರ ಹೋರಾಟಕ್ಕೆ ಸಿಕ್ಕ ಜಯ.

# ಕಾರವಾರ ಬಂದರಿನಲ್ಲೂ ಜಪ್ತಾದ ಅದಿರು ರಫ್ತು ರಾದ್ಧಾಂತ!



ಕಾರವಾರ ಬಂದರಿಗೂ ಅದಿರು ಶನಿ ವಕ್ಕರಿಸಿ ಕೊಂಡಿದೆ! ಈ ಬಂದರಿನಿಂದಲೂ ಅದಿರು ಕಳ್ಳ ಸಾಗಾಣಿಕೆ ಆಗಿದೆ! ಕೋಟ್ಯಂತರ ರೂ.ಗಳ ಈ ಅದಿರು ಸ್ಮಗ್ಲಿಂಗ್ "ವಿಲಕ್ಷಣ ವಿಳಂಬ"ದ ಬಳಿಕ ಬಹಿರಂಗಗೊಂಡಿರುವುದು ಅನೇಕ ಅನುಮಾನ ಹುಟ್ಟುಹಾಕಿದೆ. ಬೇಲೇಕೇರಿಯಲ್ಲಿ ಲೋಕಾಯುಕ್ತ ನಿರ್ದೇಶಿತ ಅರಣ್ಯ ಅಧಿಕಾರಿಗಳು ಅಕ್ರಮ ಅದಿರು ಸೀಜ್ ಮಾಡಿದ ಹೊತ್ತಲ್ಲೇ ಕಾರವಾರ ಬಂದರಿನಲ್ಲೂ ಬರೋಬ್ಬರಿ 50 ಸಾವಿರ ಮೆಟ್ರಿಕ್ ಟನ್ ಕಳ್ಳ ಅದಿರನ್ನು ಜಪ್ತು ಮಾಡಿಕೊಂಡಿದ್ದರು. ಅದರಲ್ಲಿ ಈಗ 35,500 ಮೆಟ್ರಿಕ್ ಟನ್ ಅದಿರು ಮಂಗ ಮಾಯವಾಗಿ ಹೋಗಿದೆ.

ಬಂದರು ಮಂತ್ರಿ ಕೃಷ್ಣ ಪಾಲೇಮಾರ್‌ನ ಅಧಿಕ ಪ್ರಸಂಗದಿಂದ ಬೇಲೇಕೇರಿ ಬಂದರಿನ ಸೀಜ್ಡ್ ಅದಿರು ಕಳ್ಳ ಸಾಗಾಣಿಕೆ ಹಗರಣ ಹಠಾತ್ ಆಸ್ಫೋಟಿಸಿಬಿಟ್ಟಿತ್ತು! ಆ ಘಟಸ್ಫೋಟದ ಆರ್ಭಟದಲ್ಲಿ ಕಾರವಾರ ಬಂದರಿನಲ್ಲಾದ ಗೋಲ್‌ಮಾಲ್ ಗದ್ದಲ ಯಾರಿಗೂ ಕೇಳಿಸಲೇ ಇಲ್ಲ. ಬೇಲೇಕೇರಿ ಬಂದರಿನಲ್ಲಾದಂತೆ ಕಾರವಾರ ಬಂದರಲ್ಲೂ ಅದಿರು ಕಳ್ಳಸಾಗಾಣಿಕೆ ಬಂದರು ಅಧಿಕಾರಿಗಳ ಆಶೀರ್ವಾದದಿಂದಲೇ ನಡೆದಿದೆ ಎಂಬ ಗುಸುಗುಸು ಮಾತ್ರ ಹಬ್ಬಿತ್ತು. ಆಸಿಸ್ ಫರ್ನಾಂಡಿಸ್ ಎಂಬಾತ ಜಪ್ತಾದ ಅದಿರು ಗಪ್‌ಚುಪ್ ರಫ್ತು ಮಾಡಲಾಗಿದೆ ಎಂದು ಎಸ್ಪಿಗೇ ಕಂಪ್ಲೇಂಟೂ ಕೊಟ್ಟಿದ್ದರು.




ಆದರೆ ಈ ಅದಿರು ಅಕ್ರಮ ವ್ಯವಹಾರವನ್ನು ಅದ್ಯಾಕೋ ಡಿಸಿ ಎಫ್.ಆರ್. ಗೋಕುಲ್ ಎಂಬ ದಕ್ಷ-ನಿಷ್ಠೂರ ಪ್ರತೀತಿಯ ಅರಣ್ಯ ಅಧಿಕಾರಿಯಿಂದ ಹಿಡಿದು ಬಂದರು-ಪೊಲೀಸ್ ಅಧಿಕಾರಿಗಳೆಲ್ಲ ಅಷ್ಟು ಗಂಭೀರವಾಗಿ- ತುರ್ತಾಗಿ ಪರಿಗಣಿಸಲೇ ಇಲ್ಲ. ಈಗ ಇದ್ದಕ್ಕಿದ್ದಂತೆ ಈ ಸೀಜ್ಡ್ ಅದಿರಿನ ತನಿಖಾಧಿಕಾರಿ-ಕಾರವಾರ ಎಸಿಎಫ್ ಮೋಹನ ಕಣಗಿಲ್ ".... ಕಳ್ಳ.... ಕಳ್ಳ, ಕಾರ್ವಾರದಲ್ಲೂ ಕಳ್ಳ ಸಾಗಾಣೆ... ಅದಿರು ಮಾಯಾ....." ಎಂದು ಎದ್ದೆದ್ದು ಹಾರಾಡಹತ್ತಿದ್ದಾರೆ! ಕಳೆದ ಸೋಮವಾರ (ಜುಲೈ 26) ರಾತ್ರಿ ಕಾರವಾರ ಗ್ರಾಮೀಣ ಪೊಲೀಸ್ ಸ್ಟೇಷನ್‌ನಲ್ಲಿ ಅದಿರು ಕಳ್ಳತನದ ಕಂಪ್ಲೇಂಟನ್ನು ಕಣಗಿಲ್ ಕೊಟ್ಟು ಬಂದಿದ್ದಾರೆ.....

## ಮುಟ್ಟುಗೋಲು

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮೋಹನ್ ಕಣಗಿಲ್‌ನ ಅರಣ್ಯ ಇಲಾಖಾ ಪಡೆ ಮಾರ್ಚ್ 15 ರಂದು ಕಾರವಾರ ಬಂದರಿನಲ್ಲಿ ದಾಳಿ ನಡೆಸಿತ್ತು. ಆಗ ಅಕ್ರಮ ಎಂಬ ಕಾರಣಕ್ಕೆ 50 ಸಾವಿರ ಮೆಟ್ರಿಕ್ ಟನ್ ಕಬ್ಬಿಣದ ಅದಿರನ್ನು ಜಪ್ತು ಮಾಡಿತ್ತು. ಆ ಕಳ್ಳ ಅದಿರನ್ನು ನ್ಯಾಯಾಲಯದ ಆದೇಶದಂತೆ ಕಾರವಾರ ಬಂದರು ಸಂರಕ್ಷಣಾಧಿಕಾರಿ (ಪೋರ್ಟ್‌ಕನ್‌ಸರ್ವೇಟರ್) ಕ್ಯಾ. ಸ್ವಾಮಿ ಎಂಬಾತನ ವಶಕ್ಕೆ ಅರಣ್ಯ ಇಲಾಖಾಧಿಕಾರಿಗಳು ಕೊಟ್ಟಿದ್ದರು.

ಯಾವಾಗ ಬೇಲೇಕೇರಿ ಬಂದರಿನಲ್ಲಿ ಲೋಕಾಯುಕ್ತದವರು ಸೀಜ್ ಮಾಡಿದ್ದ ಅದಿರು ಕಳ್ಳ ಸಾಗಾಣಿಕೆ ಆಗಿದ್ದು ಜಗಜ್ಜಾಹೀರವಾಯ್ತೋ, ಆಗ ಕಾರವಾರದಲ್ಲೂ "ಅಂಥದ್ದು ಏನಾದರೂ" ನಡೆದಿದೆಯಾ ಎಂಬ ಗುಮಾನಿ ಸಹಜವಾಗೇ ಸೃಷ್ಟಿಯಾಗಿತ್ತು. ಈ ಸಂಶಯಗಳನ್ನೆಲ್ಲ ಸಮರ್ಥಿಸುವಂತಿತ್ತು ಸದ್ರಿ ಸೀಜ್ಡ್ ಅದಿರು ಸಂರಕ್ಷಿಸುವ ಹೊಣೆ ಹೊತ್ತಿದ್ದ ಬಂದರು ಕನ್‌ಸರ್ವೇಟರ್ ಕ್ಯಾಪ್ಟನ್ ಸ್ವಾಮಿಯ ಕಳ್ಳಾಟಗಳು! ಆಗ ಕಾರವಾರ ಬಂದರಿನಲ್ಲೂ ಅದಿರು ಕಳ್ಳಸಾಗಾಣಿಕೆ ನಡೆದಿದೆಯೆಂಬ ಕೂಗೆದ್ದಿತು.

ಮಾಯಾ.... ಎಲ್ಲಾ ಮಾಯಾ

ಡಿಸಿಎಫ್ ಆರ್. ಗೋಕುಲ್ ಗಡಿಬಿಡಿಗೆ ಬಿದ್ದರು. ಕಾರವಾರ ಬಂದರು ದಾಳಿ-ಅಕ್ರಮ ಅದಿರು ಸೀಜ್ ಕಾರ್ಯಾಚರಣೆಯ ನೇತೃತ್ವ ವಹಿಸಿದ್ದ ಎಸಿಎಫ್ ಕಣಗಿಲ್‌ಗೆ ಮುಟ್ಟುಗೋಲು ಹಾಕಿಕೊಂಡಿದ್ದ ಅದಿರು ಇದೆಯಾ ಎಂದು ತನಿಖಿಸಲು ಆದೇಶಿಸಿದರು. ಬಂದರಿಗೆ ಹೋದ ಎಸಿಎಫ್ ಬೆಚ್ಚಿಬಿದ್ದರು. ಅದಿರು ರಾಶಿಯಲ್ಲಿ ಒಂದಿಷ್ಟು ಮಾಯವಾಗಿತ್ತು. ಅಳತೆ ಮಾಡಿದಾಗ ಬರೋಬ್ಬರಿ 35,500 ಮೆಟ್ರಿಕ್ ಟನ್ ಅದಿರು ಜಪ್ತು ಮಾಡಿದ್ದ ಅದಿರಿನಿಂದ ಕಾಣೆಯಾಗಿತ್ತು! ಬರೀ 14,500 ಮೆಟ್ರಿಕ್ ಟನ್ ಅದಿರಷ್ಟೇ ಬಂದರಿನಲ್ಲಿತ್ತು. ಅಂದರೆ ಕಾರವಾರದಲ್ಲೂ ಅದಿರು ರಫ್ತುದಾರರು ಕಾನೂನು-ಕಟ್ಟಳೆ ಅರಣ್ಯ ಇಲಾಖೆಯ ನಿರ್ಬಂಧವನ್ನೆಲ್ಲ ಧಿಕ್ಕರಿಸಿ ಕಳ್ಳಸಾಗಾಣಿಕೆ ಮಾಡಿದ್ದರು!!!


ಈ ನಡುವೆ ಕಾರವಾರದ ಅಕ್ರಮ ಅದಿರು ಪ್ರಕರಣದ ತನಿಖಾಧಿಕಾರಿ ಎಸಿಎಫ್ ಕಣಗಿಲ್ ಬಂದರು ಕನ್ ಸರ್ವೇಟರ್ ಕ್ಯಾ ಸ್ವಾಮಿ ಜತೆ ಪತ್ರ ವ್ಯವಹಾರವೂ ನಡೆಸಿದ್ದರು. ಏಪ್ರಿಲ್ 20 ಕ್ಕೆ ಬಂದರು ಇಲಾಖೆಗೆ ಎಸಿಎಫ್ ಪತ್ರ ಬರೆದು ಬಂದರಿನಲ್ಲಿ ಎಷ್ಟು ಅದಿರು ಸ್ಟಾಕ್ ಇದೆಯೆಂದು ಕೇಳಿದ್ದರು. ಅದಕ್ಕುತ್ತರವಾಗಿ 1.15 ಲಕ್ಷ ಮೆಟ್ರಿಕ್ ಟನ್ ಅದಿರು ಬಂದರಿನಲ್ಲಿದೆ ಎಂದು ಪಿಸಿ (ಪೋರ್ಟ್ ಕನ್ ಸರ್ವೇಟರ್) ಹೇಳಿದ್ದರು. ಅರಣ್ಯ ಇಲಾಖೆ ಜಪ್ತು ಮಾಡಿದ್ದ ಅಕ್ರಮ ಅದಿರನ್ನು ಸಂರಕ್ಷಿಸುವಂತೆ ಅರಣ್ಯಾಧಿಕಾರಿಗಳು ಪೋರ್ಟ್‌ನವರಿಗೆ ತಿಳಿಸಿದ್ದರು.

ಜುಲೈ 3 ರಂದು ಪಿಸಿಯಿಂದ ಎಸಿಎಫ್‌ಗೆ ಬಂದಿದ್ದ ಪತ್ರವೊಂದು ಕಾರವಾರ ಬಂದರಿನಲ್ಲಿ ಬಂದರು ಇಲಾಖಾಧಿಕಾರಿಗಳ ಸಹಕಾರದಿಂದಲೇ ಅಕ್ರಮ ಅದಿರು ಕಳ್ಳ ಸಾಗಾಣಿಕೆ ಆಗಿದೆ ಎಂಬುದನ್ನು ನಿಸ್ಸಂಶಯವಾಗಿ ಸಾಬೀತುಪಡಿಸುವಂತಿತ್ತು! ಅದರಲ್ಲಿ 1.15 ಲಕ್ಷ ಮೆಟ್ರಿಕ್ ಟನ್ ಅದಿರಲ್ಲಿ 65,409 ಮೆಟ್ರಿಕ್ ಅದಿರನ್ನು ವಿದೇಶಕ್ಕೆ ರಫ್ತು ಮಾಡಲಾಗಿದೆ ಎಂದು ಬರೆಯಲಾಗಿತ್ತು.


## 49,990.6 ಮೆಟ್ರಿಕ್ ಟನ್ ಅದಿರೆಲ್ಲಿ?

ಬಂದರಲ್ಲಿದ್ದ ಅಕ್ರಮ ಅದಿರು ಗುಡ್ಡೆಗಳ ಮೇಲೆ ಲೋಕಾಯುಕ್ತ ದಾಳಿ ನಡೆದ ನಂತರ ಅರಣ್ಯ ಇಲಾಖೆ ಕಟ್ಟುನಿಟ್ಟಿನ ಆದೇಶ ಒಂದನ್ನು ಬಂದರು ಇಲಾಖೆಗೆ ಕಳಿಸಿತ್ತು. ಅದರಂತೆ ಕಾರವಾರ ಬಂದರಿನಿಂದ ಯಾವುದೇ ಅದಿರು ರಫ್ತು ಮಾಡುವ ಮೊದಲು ಅರಣ್ಯ ಇಲಾಖೆಗೆ ತಿಳಿಸುವಂತೆ ಹೇಳಲಾಗಿತ್ತು. ಆದರೆ ಪಿಸಿ ಕ್ಯಾ. ಸ್ವಾಮಿ ಇದನ್ನು ಧಿಕ್ಕರಿಸಿ ಮಾರ್ಚ್ 23 ರಿಂದ ಮೇ 3 ರ ತನಕ ಆರು ರಫ್ತು ಕಂಪನಿಗಳಿಗೆ ಅದಿರು ವಿದೇಶಕ್ಕೆ ಕಳಿಸಲು ಒಳಗೊಳಗೇ ಅವಕಾಶ ಕೊಟ್ಟಿದ್ದಾರೆ.

ಕಳ್ಳ ಕ್ಯಾ ಸ್ವಾಮಿಯೇ ಹೇಳುವಂತೆ ಎಂಎಸ್‌ಐಎಲ್‌ಗೆ 13007 ಮೆಟ್ರಿಕ್ ಟನ್, ಸೆಸೆ ಗೋವಾ ಕಂಪನಿಗೆ 10502 ಮೆಟ್ರಿಕ್ ಟನ್, ಎಸ್‌ಎಸ್‌ಟಿಎ ಕಂಪನಿಗೆ 3200 ಮೆಟ್ರಿಕ್ ಟನ್, ರಾಜಮಹಲ್ ಸಿಲ್ಕ್ ಕಂಪನಿಗೆ 4700 ಮೆಟ್ರಿಕ್ ಟನ್, ಮುನೀರ್ ಎಂಟರ್‌ಪ್ರೈಸಸ್‌ಗೆ 5000 ಮೆಟ್ರಿಕ್ ಟನ್ ಮತ್ತು ಫಾಲ್ಕೋನ್ ಕಂಪನಿ 29000 ಮೆಟ್ರಿಕ್ ಟನ್ ಅದಿರು ರಫ್ತಿಗೆ ಬಂದರು ಇಲಾಖೆ ಅನುಮತಿ ಕೊಟ್ಟಿದೆ. ಈಗ ಬಂದರು ಸಂರಕ್ಷಣಾಧಿಕಾರಿ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಕೊಡುವ ಸೀಜ್ಡ್ ಅದಿರಿನ ಲೆಕ್ಕ ಅಥವಾ ಬಂದರಲ್ಲಿ ಸ್ಟಾಕ್ ಇರುವ ಅದಿರಿನ ಮೊತ್ತಗಳು ಒಂದಕ್ಕೊಂದು ತಾಳೆಯಾಗುವುದೇ ಇಲ್ಲ.




ಇಲ್ಲೊಂದು ಮಜಾ ಇದೆ. ಲೋಕಾಯುಕ್ತದ ತನಿಖಾಧಿಕಾರಿ ಎಸಿಎಫ್ ಕಣಗಿಲ್ ಪ್ರಕಾರ ಮಾರ್ಚ್ 20 ರಂದು ಸೀಜ್ಡ್ ಅದಿರು ಪೋರ್ಟ್‌ನವರ ವಶಕ್ಕೆ ಕೊಡುವಾಗ ಬರೋಬ್ಬರಿ 50 ಸಾವಿರ ಮೆಟ್ರಿಕ್ ಟನ್ ಇತ್ತು. ಆದರೆ ಬಂದರು ಕನ್‌ಸರ್ವೇಟರ್ ಪ್ರಕಾರ ಕಾರವಾರ ಬಂದರಲ್ಲಿ ಅಂದಿದ್ದದ್ದು 1.15 ಲಕ್ಷ ಮೆಟ್ರಿಕ್ ಟನ್ ಅದಿರು. ಇದರಲ್ಲಿ 65,409 ಮೆಟ್ರಿಕ್ ಟನ್ ಅದಿರನ್ನು ರಫ್ತು ಮಾಡಲು ಬಂದರು ಇಲಾಖೆ ಅವಕಾಶ ಕೊಟ್ಟಿದೆ. ಅಂದರೆ ಕ್ಯಾ. ಸ್ವಾಮಿಯ ಪ್ರಕಾರವೇ ಬಂದರಲ್ಲಿ 49,990.6 ಮೆಟ್ರಿಕ್ ಟನ್ ಅದಿರು ಉಳಿಯಬೇಕು. ಆದರೆ ಈಗ ಬಂದರಲ್ಲಿರುವುದು ಬರೀ 14,500 ಮೆಟ್ರಿಕ್ ಟನ್ ಅದಿರು ಮಾತ್ರ. ಅರಣ್ಯ ಇಲಾಖೆ ಸೀಜ್ ಮಾಡಿದ ಅದಿರಲ್ಲಿ 35,490 ಮೆಟ್ರಿಕ್ ಟನ್ ಅದಿರು ನಾಪತ್ತೆಯಾಗಿದೆ ಎಂದಾಯ್ತು! ಇದು ಸರಳ ಅಂಕ ಗಣಿತ.




## ಕ್ಯಾ. ಸ್ವಾಮಿಯೇ ಕಳ್ಳ

ಕಾರವಾರ ಬಂದರಿನಲ್ಲಿ ಪಿಸಿ ಕ್ಯಾ. ಸ್ವಾಮಿ ಕೈಚಳಕದಿಂದ ನಡೆಯುತ್ತಿರುವ ಅಕ್ರಮ-ಅವ್ಯವಹಾರ-ಅವಾಂತರಗಳು ಒಂದೊಂದಲ್ಲ! ಅಕ್ರಮ ಅದಿರು ಕಳ್ಳ ಸಾಗಾಣಿಕೆಯ ಕಾರ್ಯಾಚರಣೆ ಲೂಟಿಕೋರ ರಫ್ತುದಾರರಿಗೆ ಅನುಕೂಲವಾಗುವಂತೆ ಈತ ಲೀಲಾಜಾಲವಾಗಿ ನಡೆಸುತ್ತ ಬಂದಿದ್ದಾನೆ. ಅದಿರು ಮಾಫಿಯಾದ ಆಯಕಟ್ಟಿನ ಆದ್ಮಿ ಈ ಸ್ವಾಮಿ. ಅದಿರು ಲಾಬಿಯ ಹಫ್ತಾದಿಂದ ಸ್ವಾಮಿ ಇವತ್ತು ಕೋಟಿಗೆ ತೂಗುತ್ತಾನೆ! ಯಾರೇ ಪೋರ್ಟ್ ಡೈರೆಕ್ಟರ್ ಆಗಿ ಬಂದರೂ ಅವರನ್ನು ಪಳಗಿಸಿ ಅದಿರು ಮಾಫಿಯಾದ 'ಸೇವಕ'ನಾಗಿ ರೂಪಾಂತರಿಸುವ ಕುಶಲೆ ಈತನಿಗೆ ಕರಗತ. ಗಣೇಶ್ ಎಂಬ ನಾಲಾಯಕ್ ತೊಲಗಿದ ಮೇಲೆ ಈ ಕ್ಯಾ ಸ್ವಾಮಿಯೇ ಬಂದರು ನಿರ್ದೇಶಕನಾಗಿ ಅವತರಿಸಿದ್ದಾನೆ. ಬಂದರು ಮಂತ್ರಿ ಪಾಲೇಮಾರ್‌ಗೆ ತಪ್ಪದೇ ಪಾಲು ಮುಟ್ಟಿಸಿ ಬರುವ ಸ್ವಾಮಿ ಕಾರವಾರ ಬಂದರು ಸಂರಕ್ಷಣಾಧಿಕಾರಿಯಾಗಿಯೂ ಮುಂದುವರೆಯುತ್ತಿದ್ದಾನೆ.

ಕಾರವಾರ ಬಂದರನ್ನು ಅದಿರು ಮಾಫಿಯಾ-ಬಂದರು ಮಾಫಿಯಾದ ಅಡ್ಡೆಯಾಗಿ ಮಾಡಿರುವ ಕ್ಯಾ. ಸ್ವಾಮಿಯೇ ಕಾರವಾರ ಬಂದರಿನಲ್ಲಾದ ಸೀಜ್ಡ್ ಅದಿರಿನ ಕಳ್ಳಸಾಗಾಣಿಕೆಯ ರೂವಾರಿ. ಅರಣ್ಯ ಇಲಾಖೆ ಮುಟ್ಟುಗೋಲು ಹಾಕಿಕೊಂಡಿದ್ದ 50 ಸಾವಿರ ಅಕ್ರಮ ಅದಿರನ್ನು ನ್ಯಾಯಾಲಯದ ಆದೇಶದಂತೆ ಈ ಖದೀಮನ ವಶಕ್ಕೆ ಕೊಡಲಾಗಿತ್ತು. ಈ ಅದಿರು ಸಂರಕ್ಷಿಸಬೇಕು ಮತ್ತು ಕಾರವಾರ ಬಂದರಿನಿಂದ ಯಾವುದೇ ಅದಿರು ರಫ್ತಾಗುವುದಿದ್ದರೂ ಅರಣ್ಯ ಇಲಾಖೆಯ ಗಮನಕ್ಕೆ ತರಬೇಕೆಂದು ಸ್ಪಷ್ಟವಾಗಿ ತಿಳಿಸಲಾಗಿತ್ತು. ಆದರೆ ಈ ದಗಲುಬಾಜಿ ಧೀರ ತನ್ನಲ್ಲಿರುವ 50 ಸಾವಿರ ಟನ್ ಅಕ್ರಮ ಅದಿರನ್ನು ಕಾಪಾಡಲಿಲ್ಲ; ಕಳ್ಳ ಅದಿರು ಸೀಜಾದ ನಂತರ ನಡೆದ ರಫ್ತುಗಾರಿಕೆ ಬಗ್ಗೆ ಬುದ್ಧಿಪೂರ್ವಕವಾಗೇ ಅರಣ್ಯ ಇಲಾಖೆಗೆ ತಿಳಿಸಲಿಲ್ಲ.

## ಕ್ಯಾಪ್ಟನ್ ಮೇಲೆ ಕೇಸು

ನ್ಯಾಯಾಲಯದ ಆದೇಶವನ್ನು ಕೇರ್ ಮಾಡದೆ ಕಳ್ಳ ಅದಿರು ರಫ್ತುದಾರರಿಗೆ ಲೋಕಾಯುಕ್ತದವರು ಜಪ್ತು ಮಾಡಿದ್ದ ಅಕ್ರಮ ಅದಿರನ್ನು ವಿದೇಶಕ್ಕೆ ಈ ಬಂದರು ಸಂರಕ್ಷಣಾಧಿಕಾರಿ ಕ್ಯಾ ಸ್ವಾಮಿ ನೆರವಾಗಿದ್ದಾನೆಂಬುದೀಗ ಎಲ್ಲರಿಗೂ ಖಾತ್ರಿಯಾಗಿದೆ. ಕೋಟ್ಯಂತರ ರೂ.ಗಳ ಈ ಕಳ್ಳ ಸಾಗಾಣಿಕೆದಾರಿಕೆಯಲ್ಲಿ ಕ್ಯಾ. ಸ್ವಾಮಿಯೇ ದೊಡ್ಡ ಕಳ್ಳನೆಂಬುದು ಸಾಬೀತಾಗಿಹೋಗಿದೆ. ಇದು ಬೇಲೆಕೇರಿ ಪ್ರಕರಣಕ್ಕಿಂತಲೂ ಕೊಂಚ ಭಿನ್ನ! ಅಲ್ಲಿ ಬಂದರು ಇಲಾಖಾ ಅನುಮತಿಯಿಲ್ಲದೆ 10 ಖದೀಮ ರಫ್ತುದಾರರು ಮುಟ್ಟುಗೋಲು ಹಾಕಿಕೊಂಡಿದ್ದ 5 ಲಕ್ಷ ಮೆಟ್ರಿಕ್ ಟನ್ ಅದಿರನ್ನು ರಫ್ತು ಮಾಡಿದ್ದರು. ಬಂದರು ಅಧಿಕಾರಿ ಬಿಲಿಯೆ ಕರ್ತವ್ಯ ಲೋಪ ಮಾಡಿದ್ದರು. ಹೀಗಾಗಿ ಬೇಲೇಕೇರಿ ಪ್ರಕರಣದಲ್ಲಿ ರಫ್ತುದಾರರು ಮತ್ತು ಪಿಸಿ ಮೇಲೆ ಕೇಸ್ ಹಾಕಲಾಗಿತ್ತು.

ಇಲ್ಲಿ ಕಾರವಾರದ ಕರ್ಮಕಾಂಡದಲ್ಲಿ ಅದಿರನ್ನು ಕದ್ದು ರಫ್ತು ಮಾಡಿಲ್ಲ, ಬದಲಾಗಿ ಧೂರ್ತ ಪಿಸಿ ಕ್ಯಾ. ಸ್ವಾಮಿಯ ಸಕಲ ಸಹಕಾರ-ಅನುಮತಿಯಿಂದ ಕಳ್ಳಸಾಗಾಣಿಕೆ ಮಾಡಲಾಗಿದೆ. ಹಾಗಾಗಿ ಕಳ್ಳ ಕ್ಯಾಪ್ಟನ್ ಸ್ವಾಮಿ ಮೇಲಷ್ಟೇ ಈಗ ಎಸಿಎಫ್ ಮೋಹನ್ ಕಣಗಿಲ್ ಕಳ್ಳತನ-ದುರುಪಯೋಗದ ಕೇಸು ಪೊಲೀಸರಿಗೆ ಕೊಟ್ಟಿದ್ದಾರೆ. ಐಸಿಪಿ 409 ಮತ್ತು 379 ರ ಪ್ರಕಾರ ಕಾರವಾರ ನಗರ ಠಾಣೆಯಲ್ಲಿ (154/2010) ದಾಖಲಾಗಿದೆ.

## ಅಸ್ನೋಟಿಕರ್ ಪಾತ್ರ

ಇಷ್ಟಾದರೂ ಭಂಡ ಕ್ಯಾ. ಸ್ವಾಮಿ ಅಕ್ರಮ ಅದಿರು ಕಳ್ಳ ಸಾಗಾಣಿಕೆಗೂ ತನಗೂ ಸಂಬಂಧವೇ ಇಲ್ಲವೆಂದು ವಾದಿಸುತ್ತಿದ್ದಾನೆ. ನ್ಯಾಯಾಲಯದ ಆದೇಶದಂತೆ ತನ್ನ ವಶಕ್ಕೆ ಪಡೆದ 50 ಸಾವಿರ ಮೆಟ್ರಿಕ್ ಟನ್ ಅದಿರು ತನ್ನ ಹೊಣೆಗಾರಿಕೆಯಲ್ಲಿ ಇರಲೇ ಇಲ್ಲವೆಂದು ಬೊಗಳುತ್ತಿದ್ದಾನೆ. ಇಷ್ಟು ಧರತಿಯಿಂದ ಈ ಸ್ವಾಮಿ ಮಾತಾಡಲು ಕಾರವಾರ ಬಂದರು ಮಾಫಿಯಾ ದೊರೆ-ಕ[illegible] ಮಿನಿಸ್ಟರ್ ಆನಂದ ಅಸ್ನೋಟಿಕರ್‌ನ ಕೃಪಾ[illegible]ಶೀರ್ವಾದವೇ ಕಾರಣವೆಂಬ ಮಾತೀಗ ಕಾರವಾರದಲ್ಲಿ ತೇಲಾಡುತ್ತಿದೆ.

ಇದಕ್ಕೆ ಕಾರಣವೂ ಇದೆ. ಕಾರವಾರ ಬಂದರಿನ ಅಷ್ಟೂ ಚಟುವಟಿಕೆ ಆನಂದ ಅಸ್ನೋಟಿಕರ್‌ನ ಮನದಿಚ್ಛೆಯಂತೆಯೆ ನಡೆಯುತ್ತದೆ. ಬಂದರು ಆಯಾತ-ನಿರ್ಯಾ[illegible] ನಿಯಂತ್ರಿಸುವುದು ಅಸ್ನೋಟಿಕರ್‌ನ ಡಾಕ್ ಅಂಡ್ ಪೋರ್ಟ್ [illegible] ಲೇಬರ್ ಸೊಸೈಟಿ. ಈಗಾಗಿರುವ ಅದಿರು ಕಳ್ಳ ಸಾಗಾಣಿ[illegible] ಹಿಂದೆ ಸಹಜವಾಗೇ ಆನಂದ್ ಅಸ್ನೋಟಿಕರ್‌ನ ಕೈವಾ[illegible] ಇದ್ದೇ ಇರುತ್ತದೆ. ಹಾಗಂತ ಕಾರವಾರ ಬಂದರು ಮಹಿವಾ[illegible] ಬಲ್ಲವರು. ಬಂದರು ಇಲಾಖೆಯವರು ಪಿಸುಗುಡುತ್ತಿದ್ದಾರೆ. ಅಸ್ನೋಟಿಕರ್‌ಗಿದು ಭರ್ಜರಿ ಲಾಭದಾಯಕ ದಂಧೆ!!

ಬೇಲೇಕೇರಿ ಪ್ರಕರಣದಲ್ಲಿ ಪಿಸಿ ಬಿಲಿಯೆನನ್ನು ಬಂದರು ಮಂತ್ರಿ ಪಾಲೇಮಾರ್ ಸಸ್ಪೆಂಡ್ ಮಾಡಿದ್ದರು. ಆದ[illegible] ಆತನಿಗಿಂತಲೂ ದೊಡ್ಡ ಚೋರ ಕ್ಯಾ. ಸ್ವಾಮಿ ಮನೆ[illegible] ಹೋಗುವ ಲಕ್ಷಣಗಳಿಲ್ಲ. ಏಕೆಂದರೆ ಈ ಬಂದರು ಮಾಫಿಯಾ-ಅದಿರು ಮಾಫಿಯಾದ ಕಣ್ಮಣಿಯಂತಿರು[illegible] ಕ್ಯಾಪ್ಟನ್ ಸ್ವಾಮಿ ಹಿಂದೆ ಮೀನು ಮಂತ್ರಿ ಆನಂದ ಅಸ್ನೋಟಿಕರನಿದ್ದಾನೆ!

ಕಾರವಾರ ಬಂದರು ಭಾನ್ಗಡಿಗೆ ಹೊಣೆಯಾರು? ಪಿ[illegible] ಕ್ಯಾ. ಸ್ವಾಮಿಯಾ? ಮಂತ್ರಿ ಅಸ್ನೋಟಿಕರನಾ? ಸಿಬಿ[illegible] ತನಿಖೆ ಮಾತ್ರ ಉತ್ತರಿಸಬಲ್ಲದು!!

• ನಹು[illegible]

## ಅದಿರು ರಫ್ತು ಮತ್ತು ಯಡವಟ್ಟು ಯಡ್ಡಿ

ಅದಿರು ಮಾಫಿಯಾದ ಮುಷ್ಠಿಯಲ್ಲಿ ಸಿಕ್ಕಿಬಿದ್ದಿರುವ ಸಿಎಂ ಯಡ್ಡಿ ಪಾಡಿದೆಯಲ್ಲ ಅದು, ಕತ್ತಲಲ್ಲಿ ಕೋಲು ಕಳಕೊಂಡ ಕುರುಡನಂತಾಗಿದೆ, ಪಾಪ! ಅದಿರು ಕಳ್ಳ ರೆಡ್ಡಿ-ರಾಮುಲುಗಳನ್ನು ಕ್ಯಾಬಿನೆಟ್‌ನಿಂದ ಬಿಡುವಂತೂ ಇಲ್ಲ, ಆ ರಾಕ್ಷಸರ ಕಟ್ಟಿಕೊಂಡು ಏಗುವಂತೂ ಇಲ್ಲ, ನಾಡಿನ ಜನರೆದುರು ಅಪರಾಧಿಯಂತಾಗಿರುವ ಯಡ್ಡಿ ಪಾಪಪ್ರಜ್ಞೆಯಿಂದ ಅಡಿಗಡಿಗೆ ಎಡವಟ್ಟು ಹೆಜ್ಜೆಗಳನ್ನೇ ಇಡುತ್ತಿದ್ದಾರೆ!

ಯಡ್ಡಿ ರಾಜ್ಯದ ಹತ್ತು ಬಂದರುಗಳಿಂದ ಅದಿರು ರಫ್ತು ನಿಷೇಧಿಸಿರುವುದನ್ನೇ ನೋಡಿ. ಜನರ ಕಣ್ಣಿಗೆ ಮಣ್ಣೆರಚುವ ಮಸಲತ್ತಿದು. ತಾನು ರಾಜ್ಯದ ಅದಿರು ಸಂಪತ್ತಿನ ಸಂರಕ್ಷಕನೆಂದು ಬಿಂಬಿಸಲು ಯಡ್ಡಿ ಬಂದರುಗಳಿಂದ ಅದಿರು ಹೊರದೇಶಕ್ಕೆ ಕಳಿಸುವುದನ್ನೇ ನಿರ್ಬಂಧಿಸುವ ನಾಟಕ ಮಾಡಿದ್ದಾರೆ. ಆ ನಕಲಿ ನಾಟಕ ಆಡುವ ಭರದಲ್ಲಿ ಆತ ಮೀನುಗಾರಿಕಾ ಬಂದರುಗಳಿಂದಲೂ ರಫ್ತು ನಿಷೇಧಿಸುವ ಹಾಸ್ಯಾಸ್ಪದ ಆಜ್ಞೆ ಹೊರಡಿಸಿದ್ದಾರೆ. ಮಂಗಳೂರು, ಕಾರವಾರ, ಬೇಲೇಕೇರಿ ಈ ಮೂರು ಬಂದರು ಬಿಟ್ಟು ರಾಜ್ಯದ ಉಳಿದ್ಯಾವುದೇ ಬಂದರಿಂದ ಒಂದು ಹಿಡಿಯಷ್ಟೂ ಅದಿರು ಈವರೆಗೆ ರಫ್ತಾಗಿಲ್ಲ; ರಫ್ತು ಮಾಡುವ ಸೌಲಭ್ಯವೂ ಅಲ್ಲಿಲ್ಲ.

ಹಳೆ ಮಂಗಳೂರು, ತದಡಿ, ಹೊನ್ನಾವರ, ಭಟ್ಕಳ, ಕುಂದಾಪುರ, ಹಂಗಾರಕಟ್ಟೆ, ಮಲ್ಪೆ ಮತ್ತು ಪಡುಬಿದ್ರಿ ಬಂದರುಗಳು ಮೀನುಗಾರರಿಗಷ್ಟೇ ಸೀಮಿತ. ಇನ್ನೊಂದು ವಿಪರ್ಯಾಸವೆಂದರೆ ಶೇ. 75 ರಫ್ತು ಅದಿರು ವಿದೇಶಕ್ಕೆ ಹೋಗುವುದು ಮಂಗಳೂರಿನ ನವ ಮಂಗಳೂರು ಬಂದರಿಂದ. ಉಳಿದ ಕಾರವಾರ-ಬೇಲೆಕೇರಿಯಿಂದ ರಫ್ತಾಗುವುದು ಬರೀ 25% ಅದಿರಷ್ಟೇ! ಹೀಗಿರುವಾಗ ಮಹತ್ವದ ಮಂಗಳೂರು ಬಂದರು ಬಿಟ್ಟು ಉಳಿದ ಲಾಟ್‌ಪುಟ್ ಬಂದರಿನಿಂದ ರಫ್ತು ನಿಷೇಧಿಸಿದರೆ ಪ್ರಯೋಜನವಾದರೂ ಏನು?

ಇದು ವಾಣಿಜ್ಯ ಬಂದರು ಮತ್ತು ಮೀನುಗಾರಿಕಾ ಬಂದರಿನ ನಡುವಿನ ವ್ಯತ್ಯಾಸ ಅರಿಯದ ಯಡ್ಡಿಯ ಪೆದ್ದತನವೋ? ಗಣಿ ಕೊಚ್ಚೆಯಲ್ಲಿ ಮೀನು ಹಿಡಿಯುವ ಷಡ್ಯಂತ್ರವೋ? ತಾನು ಸಂಭಾವಿತನೆಂದು ತೋರಿಸಿಕೊಳ್ಳುವ ಭರದಲ್ಲಾಗುತ್ತಿರುವ ಎಡವಟ್ಟಾ? 24 ಕ್ಯಾರೆಟ್ ಚಿನ್ನಗಳ ಸಹವಾಸ ಪವಾಡವೋ?


# ಲೂಸ್ ಮಾದ ಟೈಟ್ ಆದ!

ಲೂಸ್ ಮಾದ ಅಲಿಯಾಸ್ ಯೋಗೀಶ್ ಎಂಬ ಹುಡುಗನಿಗೆ ಹೀರೋಗಿರಿಯೇ ಐಶ್ವರ್ಯವಾಗಿಬಿಟ್ಟಿದೆ. ಮೊನ್ನೆ ದಿನ ದಾವಣಗೆರೆಯಲ್ಲಿ ಚಿತ್ರರಂಗದವರೆಲ್ಲಾ 'ಡಾ. ರಾಜ್ ಕಪ್' ಎಂಬ ಕ್ರಿಕೆಟ್ ಪಂದ್ಯವನ್ನು ...ಡಿಸಿದ್ದರಲ್ಲಾ? ಅಲ್ಲಿ ಈ ಪೋರ್ಕಿ ಹೀರೋ ಲೂಸ್ ...ದ ಮಾನಮರ್ಯಾದೆ ಇಲ್ಲದವನಂತೆ ವರ್ತಿಸಿ ಒಂದೇ ...ಗೆ ಇಡೀ ಚಿತ್ರರಂಗದ ಗೌರವವನ್ನೇ ಮಣ್ಣುಪಾಲು ...ಸಿದ್ದಾನೆ.

ಅವತ್ತು ರಾಜ್ ಕಪ್‌ನ ಕೊನೆಯ ದಿನದಂದು ...ರಂಗದವರ ಆಟ ನೋಡಲು ಸಾವಿರಾರು ಮಂದಿ ...ಂಗಣದಲ್ಲಿ ಸೇರಿದ್ದರು. ಕ್ರೀಡಾಂಗಣದ ಒಂದು ಕಡೆ ... ನಿರ್ಮಿಸಿ ಮನರಂಜನೆಗಾಗಿ ಆರ್ಕೆಸ್ಟ್ರಾ ಏರ್ಪಡಿಸಿ ... ಅಲ್ಲಿಗೆ ಕಂಠಮಟ್ಟ ಕುಡಿದು ಬಂದ ಯೋಗಿ ...ಿಕೆ ಸ್ಟೇಜು ಏರಿದ್ದಾನೆ. ಬಂದವನೇ ಅಲ್ಲಿದ್ದವರಿಂದ ...ು ಕಸಿದುಕೊಂಡು ಡಿಸ್ಕ್ ಜಾಕಿಗಳಿಗೆ ಸಾಂಗ್ ಪ್ಲೇ ...ಿ ಎಂದು ಒತ್ತಾಯ ಮಾಡಿ, ಮೈಮರೆತು ಶಕಲಕಾ ...ಿದ್ದಾನೆ. ಅಲ್ಲಿ ಸೇರಿದ್ದ ದಾವಣಗೆರೆಯ ಜನ ಇವನ ...ಚ್ಚು ಕುಣಿತವನ್ನು ನೋಡಿ 'ನೋಡ್ರಲಾ ಲೂಸ್ ಮಾದ ...ಾಗ್‌ಬುಟ್ಟೌನೆ' ಎಂದು ಶಿಳ್ಳೆ, ಕೇಕೆ ಹಾಕಿ ಎಂಜಾಯ್ ...ಿದ್ದಾರೆ. ಈತನ ಕುಣಿತ ಅಲ್ಲಿ ನೆರೆದಿದ್ದ ಪ್ರೇಕ್ಷಕರಿಗೆ ...ಟೆ ಮನರಂಜನೆ ಒದಗಿಸಿದರೆ, ಚಿತ್ರರಂಗದ ಗಣ್ಯರಿಗೆ ...ಸಂಕಟವಾಗಿದೆ.

ಇನ್ನೇನು ಲೂಸು ಸ್ಟೇಜ್‌ನಿಂದ ಕೆಳಗೆ ಬೀಳೋದು ...ಂಟಿ ಅನ್ನುವಷ್ಟರಲ್ಲಿ ಅಲ್ಲೇ ಇದ್ದ ಯುವ ನಟರಾದ ... ಮತ್ತು ಸೃಜನ್ ಲೋಕೇಶ್ ಓಡಿಹೋಗಿ ಅವನನ್ನು ...ಳಿಸುವ ಪ್ರಯತ್ನ ಮಾಡಿದ್ದಾರೆ. ಇನ್ನೇನು ಕೆಳಗಿಳಿದ ...ವಷ್ಟರಲ್ಲಿ ಈ ನರಪೇತಲ ಮತ್ತೆ ಸ್ಟೇಜ್ ಹತ್ತಿ ರೇಜಿಗೆ ...ಟ್ಟಿಸಿದ್ದಾನೆ.

...ಹೋಗಲಿ ಕುಣಿದು, ಕುಪ್ಪಳಿಸಿ ಸುಮ್ಮನಾದನಾ ಅಂದರೆ ...ೂ ಇಲ್ಲ. ಮೈಕು ಹಿಡಿದು ಕೆಟ್ಟದಾಗಿ ಮಾತಾಡುತ್ತಾ ...ದ್ದ ಹೆಣ್ಣು ಮಕ್ಕಳೆಡೆಗೆ ಕೆಟ್ಟರೀತಿಯಲ್ಲಿ ಕೈಸನ್ನೆ ಮಾಡಿ, ...ಕ್ಷಣವಾಗಿ ವರ್ತಿಸಿದ್ದಾನೆ. ಇನ್ನೂ ಒಂದು ಸ್ಟೆಪ್ಪು ಮುಂದೆ ...ೇದ ಲೂಸು 'ನಾನು ಫುಲ್ ಕುಡಿದು ಟೈಟಾಗಿದೀನಿ. ... ಟೈಟಾಗಿರೋನು ನಾನು ಮಾತ್ರ ಅಲ್ಲ. ಅಲ್ಲಿ ...ತಿರೋ ಎಲ್ರೂ ಕುಡಿದಿದಾರೆ, ಸುದೀಪ್ ಅವರೂ ...ತ್ ಟೈಟಾಗಿದಾರೆ. ಆದ್ರೆ ರಾಘಣ್ಣಾ ಮಾತ್ರ ಟೈಟಾಗಿಲ್ಲ. ...ಕಂದ್ರೆ ಅವರು ಕುಡಿಯೋದೇ ಇಲ್ಲ. ಅವ್ರು ಸಿಕ್ಕಾಪಟ್ಟೆ ...ಂಟು, ನಮ್ಮಂಗಲ್ಲ...' ಎನ್ನುತ್ತಾ ಸೀದಾ ರಾಘವೇಂದ್ರ ...ಕುಮಾರ್ ಬಳಿ ಹೋಗಿ ಅವರ ಹೆಗಲ ಮೇಲೇ ...ಾಕಿದ್ದಾನೆ.



ಈ ಲೂಸ್ ಮುಂಡೇದನ್ನ ಇನ್ನೂ ಸ್ಟೇಜ್ ಮೇಲೆ ಬಿಟ್ಟರೆ ಏನಾದರೂ ಅನಾಹುತವಾಗಿಬಿಡುತ್ತದೆ ಎಂಬುದರ ಸೂಚನೆ ಕಂಡ ಅಲ್ಲಿದ್ದ ಇತರೆ ನಟರು ಈ ಕಡ್ಡಿ ಪೈಲ್ವಾನನ ರಟ್ಟೆ ಹಿಡಿದು ಸ್ಟೇಜ್‌ನಿಂದ ಕೆಳಕ್ಕೆ ಎಳೆದು ತಂದಿದ್ದಾರೆ.

ಆಗಲೂ ಆತನ ದೇಹ, ಮನಸ್ಸು ಸ್ತಿಮಿತಕ್ಕೆ ಬಂದಿಲ್ಲ. ಕೆಳಗೆ ಜನರನ್ನು ನಿಯಂತ್ರಿಸಲು ಬ್ಯಾರಿಕೇಡ್ ಹಾಕಿ, ಅದರ ಪಕ್ಕ ಸಣ್ಣದೊಂದು ಟೇಬಲ್ ಇಟ್ಟಿದ್ದರು. ಮತ್ತೆ ಆ ಟೇಬಲ್ ಏರಿದ ಮಾದ ಅಲ್ಲಿಂದಲೇ ಇನ್ನೊಂದು ಐಟಂ ಡ್ಯಾನ್ಸ್ ಆರಂಭಿಸಿದ್ದಾನೆ. ಹೀಗೆ ಅತ್ತ ಇತ್ತ ಕುಣಿಯುತ್ತಾ ಕುಣಿಯುತ್ತಾ ದಬಾರನೆ ಕೆಳಗೆ ಬಿದ್ದಿದ್ದಾನೆ...

ಲೂಸ್ ಮಾದನ ಆಟ ಅತಿಯಾಯಿತು ಎಂದು ಅಲ್ಲಿದ್ದವರ ನೆತ್ತಿ ಬಿಸಿಯಾಗಿದೆ. ತಕ್ಷಣ ಆತನಲ್ಲಿಗೆ ಬಂದ ನಿರ್ಮಾಪಕ ಶಂಕರೇಗೌಡ ಮತ್ತು ಅಲ್ಲಿನ ಸ್ಥಳೀಯ ಎಂಎಲ್‌ಎ ರಾಜೂಗೌಡ 'ಯಾಕೋ ಹೀಗಾ ಡ್ತಿಯಾ ಲೂಸ್‌ನನ್ ಮಗನೇ' ಎಂದು ಸರಿಯಾಗಿ ಗದರಿದ್ದಾರೆ. ಆಗ ಅಲ್ಲಿದ್ದ ಕಾರ್ಯಕರ್ತರು ಬಂದು ಪಿವ್ರೋಟ್ ಮಾದನನ್ನು ಎತ್ತಿಕೊಂಡು ಹೋಗಿದ್ದಾರೆ.



ಬಹುಶಃ ಹಿಂದೆ ಯಾವತ್ತೂ ಯಾವ ನಟನೂ ಚಿತ್ರರಂಗದ ಮರ್ಯಾದೆಯನ್ನು ಇಷ್ಟು ಸಾರ್ವಜನಿಕವಾಗಿ ಹರಾಜು ಹಾಕಿರಲಿಲ್ಲವೇನೋ?



ಅಂಬರೀಶ್‌ರಂಥ ಹಿರಿಯ ನಟ ಕುಡಿದಿದ್ದರೂ ಸಾರ್ವಜನಿಕ ಸಭೆಯಲ್ಲಿ ಎಂದೂ ಅಸಭ್ಯವಾಗಿ ವರ್ತಿಸಿಲ್ಲ, ಮಾತಿನ ಮೇಲೆ ಹಿಡಿತ ತಪ್ಪಿಲ್ಲ. ಹಿಂದೆ ನಟ ಶಶಿಕುಮಾರ್, ಟೈಗರ್ ಪ್ರಭಾಕರ್‌ರಂಥ ಹೀರೋಗಳು ಜನಪ್ರಿಯತೆಯ ಉತ್ತುಂಗದಲ್ಲಿದ್ದಾಗ ಹಗಲೂರಾತ್ರಿ ಕುಡಿಯುತ್ತಿದ್ದರು. ಆದರೆ ಬೀದಿಗೆ ಬಿದ್ದು ಹೆಸರು ಕೆಡಿಸಿಕೊಳ್ಳಲಿಲ್ಲ.

ಚಿತ್ರರಂಗದ ನೃತ್ಯಗಾರರು ಮತ್ತು ತಂತ್ರಜ್ಞರ ನೆರವಿಗಾಗಿ ನಡೆಸಿದ ಇಂಥ ಪಂದ್ಯದಲ್ಲಿ ಲೂಸ್ ಮಾದನಂತಹ ಚಿಲ್ಟು ಹುಡುಗ ಪೋರ್ಕಿಯಂತೆ ವರ್ತಿಸಿ ಅಭಾಸ ಸೃಷ್ಟಿಸಿದ್ದಾನೆ.

ಇದಕ್ಕೆಲ್ಲಾ ಕಾರಣ ವಯಸ್ಸಲ್ಲದ ವಯಸ್ಸಿನಲ್ಲಿ ಆತನಿಗೆ ಅಂಟಿರುವ ಸ್ಟಾರ್‌ಡಂನ ಪ್ರತಿಫಲವೋ? ಹಂದಿಗಳಂತೆ ಇರುವ ಪಡ್ಡೆ ಹುಡುಗರ ಗೆಳೆತನವಾ? ದುಡ್ಡಿನ ಮದವಾ? ಅಥವಾ ಅಪ್ಪ-ಅಮ್ಮನ ಅತಿಯಾದ ಸಲುಗೆಯಾ? ಗೊತ್ತಿಲ್ಲ, ಒಟ್ಟಿನಲ್ಲಿ ಲೂಸ್ ಮಾದ ಮೇಲಿಂದ ಮೇಲೆ ತನ್ನ ಹೆಸರಿಗೆ ತಾನೇ ಮಸಿ ಬಳಿದುಕೊಳ್ಳುತ್ತಿದ್ದಾನೆ.

ವರ್ಷದ ಹಿಂದೆ ತನ್ನ ಮಾವ ವಿಜಯ ಮೇಲೆ ಜಗಳಕ್ಕೆ ಹೋಗಿ ಸಮಾ ರುಬ್ಬಿಸಿಕೊಂಡಿದ್ದ, ಕ್ಯಾಬರೇ ನಟಿ ಅನುರಾಧಾಳ ಮಗಳು ಅಭಿನಯಶ್ರೀಯ ಸೆರಗು ಹಿಡಿಯಲು ಹೋಗಿ ರಾದ್ಧಾಂತ ಮಾಡಿಕೊಂಡಿದ್ದ, ಇವೆಲ್ಲದರ ಜೊತೆಗೆ ನೈಟ್‌ಔಟ್ ಪಾರ್ಟಿಗಳ ತೆವಲಿಗೆ ಬಿದ್ದಿರುವ ಯೋಗಿ ದೊಡ್ಡಬಳ್ಳಾಪುರ ಬಳಿ ಇರುವ ನಾರ್ಥ್ ವೆಸ್ಟ್ ಕೌಂಟಿ ಎಂಬ ಹೈಲೆವೆಲ್ ಸ್ಪಾಟ್‌ನಲ್ಲಿ ರಾತ್ರಿಯಿಡೀ ಕುಡಿದು ಚಿತ್ತಾಗಿ ಬಿದ್ದಿರುತ್ತಾನೆ. ಇದರೊಂದಿಗೆ ಪುಡಿ ನಟಿಯರ ಸಂಪರ್ಕ-ಸೆಳೆತದಿಂದ ಲೂಸ್ ಮಾದ ಎಂಬ ಈ ಎಳೇ ಹುಡುಗ ತನ್ನ ವೈಯಕ್ತಿಕ ಜೀವನವನ್ನೂ ಗಬ್ಬೆಬ್ಬಿಸಿಕೊಳ್ಳುತ್ತಿದ್ದಾನೆ.

ಇವತ್ತಿಗೂ ಲೂಸ್ ಮಾದನನ್ನು ಹೀರೋ ಆಗಿ ಸ್ವೀಕರಿಸಿರುವ ಹೋಟೆಲ್ ಹುಡುಗರು, ಕ್ಲೀನರ್‌ಗಳು ಸೇರಿದಂತೆ ಕೆಳಹಂತದ ಯುವಕರ ಪಡೆ ಈತನನ್ನು ಮನಸಾರೆ ಆರಾಧಿಸುತ್ತದೆ. ಹೀಗಿರುವಾಗ ಅವರಿಗೆ ರೋಲ್‌ಮಾಡೆಲ್ ಅನಿಸಿಕೊಳ್ಳಬೇಕಿದ್ದ ಈತ ಹಾದಿತಪ್ಪಿ, ಬೀದಿರಂಪ ಮಾಡಿಕೊಳ್ಳುತ್ತಿದ್ದರೆ, ಈತನನ್ನು ಅನುಕರಿಸುವವರ ಪಾಡೇನಾಗಬೇಕು?

● ಅರುಣ್‌ಜಿ.
arunodayagc@gmail.com

# KAS ಪರೀಕ್ಷೆ ಅವೈಜ್ಞಾನಿಕ ಆಯ್ಕೆ ಪದ್ಧತಿ ಅಭ್ಯರ್ಥಿಗಳ ಮೇಲೆ ತೂಗುಕತ್ತಿ!

ಕರ್ನಾಟಕ ಲೋಕಸೇವಾ ಆಯೋಗದ ಪೂರ್ವಭಾವೀ ...ರೀಕ್ಷೆ ಬರೆದ ಬಹುತೇಕ ಅಭ್ಯರ್ಥಿಗಳು ಆತಂಕದಲ್ಲಿದ್ದಾರೆ. ...ಶ್ನೆಪತ್ರಿಕೆ ಸಿದ್ಧಗೊಳಿಸುವುದರಿಂದ ಮೊದಲ್ಗೊಂಡು ...ರೀಕ್ಷೆಗಳಿಗೆ ಅಭ್ಯರ್ಥಿಗಳ ಆಯ್ಕೆಯ ತನಕ ಇರುವ ...ವೈಜ್ಞಾನಿಕ ಪದ್ಧತಿ ಅವರ ಆತಂಕದ ಮೂಲ.

ಇಂಥ ಅವೈಜ್ಞಾನಿಕ ಪದ್ಧತಿ ಲಾಗಾಯ್ತಿನಿಂದಲೂ ...ಭ್ಯರ್ಥಿಗಳ ನೆತ್ತಿ ಮೇಲೆ ತೂಗುಗತ್ತಿಯಾಗಿ ನೇತಾಡುತ್ತಲೇ ...ದೆ. ಬಹುತೇಕರು ತೊಂದರೆ ಅನುಭವಿಸಿದ್ದೂ ಆಗಿದೆ. ... ಸಾರಿ ಜೂನ್ 6 ರಂದು ಈ ವರ್ಷದ ...ೂರ್ವಭಾವಿ ಪರೀಕ್ಷೆ ನಡೆದಿದ್ದು ...ರಲಿರುವ ಫಲಿತಾಂಶದಲ್ಲೂ ಅದು ...ತಿಫಲಿಸುವುದು ಸ್ಪಷ್ಟವಾಗಿದೆ.


...ನಾಳ್ ಬೀಮಪ್ಪ

ಪ್ರಸ್ತುತ ಈ ಸಾರಿಯ ಕೆಎಎಸ್ ...ರೀಕ್ಷೆಯನ್ನು 80 ಸಾವಿರ ಮಂದಿ ಬರೆದಿ...ದ್ದಾರೆ. ಇದರಲ್ಲಿ ಐಚ್ಛಿಕ ಕನ್ನಡ ಪ್ರಶ್ನೆಗಳು ...ಲಭವಾಗಿದ್ದವಂತೆ. ಇದರನ್ವಯ ಕನ್ನಡ ...ಭಾಗದ ಅಭ್ಯರ್ಥಿಗಳೇ ಹೆಚ್ಚಿನ ಸಂಖ್ಯೆ...ಯಲ್ಲಿ ಮುಖ್ಯ ಪರೀಕ್ಷೆಗೆ ಆಯ್ಕೆಯಾಗು...ವುದು ಖಚಿತ.

ಈ ಕೆಎಎಸ್ ಪರೀಕ್ಷೆಯಲ್ಲಿ ಪೂರ್ವ...ಭಾವಿ, ಮುಖ್ಯ ಪರೀಕ್ಷೆ ಹಾಗೂ ಸಂದರ್ಶನ ಎಂಬ ...ಮೂರು ಹಂತಗಳಿವೆ. ಸಾಮಾನ್ಯ ಹಾಗೂ ಐಚ್ಛಿಕ ವಿಷಯ ...ೇರಿ ನಾನೂರೈವತ್ತು ನಂಬರಿಗೆ ಪರೀಕ್ಷೆ ನಡೆಯುತ್ತದೆ. ...ದರಲ್ಲಿ 1 ನೇ ಪತ್ರಿಕೆ ಸಾಮಾನ್ಯ ವಿಷಯಕ್ಕೆ ಸಂಬಂಧಿಸಿ...ದ್ದಾದರೆ, ಇನ್ನೊಂದು ಐಚ್ಛಿಕ ವಿಷಯದ್ದು. ಇಲ್ಲಿ ಮೂವತ್ತು ...ಐಚ್ಛಿಕ ವಿಷಯಗಳಿದ್ದು, ಯಾವುದಾದರೊಂದನ್ನು ಆಯ್ಕೆ ...ಮಾಡಿಕೊಳ್ಳಬಹುದು. ಇದೊಂದಕ್ಕೆ 300 ಅಂತ ನಿಗದಿಯಾಗಿರುತ್ತದೆ. ಇವುಗಳಲ್ಲಿ ಅತೀ ಹೆಚ್ಚು ಅಂಕ ಪಡೆದವರನ್ನು ಮುಖ್ಯ ಪರೀಕ್ಷೆಗೆ ಆಯ್ಕೆ ಮಾಡಿಕೊಳ್ಳಲಾಗುತ್ತದೆ.

ಸಮಸ್ಯೆಯಿರುವುದು ಈ ಐಚ್ಛಿಕ ವಿಷಯಗಳಲ್ಲೇ. ಯಾಕೆಂದರೆ ಬಹುತೇಕ ಸಂದರ್ಭಗಳಲ್ಲಿ ಯಾವುದಾದರೊಂದು ವಿಷಯದಲ್ಲಿ ಸುಲಭದ ಪ್ರಶ್ನೆಗಳೇ ಬಂದಿರುತ್ತವೆ. ಅದನ್ನ ತೆಗೆದುಕೊಂಡ ಅಭ್ಯರ್ಥಿಗಳು ಅತೀ ಹೆಚ್ಚು ಅಂಕ ಗಳಿಸಿರುತ್ತಾರೆ. ಇನ್ನುಳಿದ ಕಷ್ಟದ ವಿಷಯ ಆರಿಸಿಕೊಂಡ ಅಭ್ಯರ್ಥಿಗಳು ಶ್ರಮ ವಹಿಸಿದ್ದರೂ ವ್ಯರ್ಥವಾಗುತ್ತದೆ. ಯಾಕೆಂದರೆ ಅತೀ ಹೆಚ್ಚು ಅಂಕ ಪಡೆದ ಸುಲಭದ ಸಬ್ಜೆಕ್ಟುಗಳ ಅಭ್ಯರ್ಥಿಗಳನ್ನೇ ಮುಖ್ಯ ಪರೀಕ್ಷೆಗೆ ಆಯ್ಕೆ ಮಾಡಲಾಗುತ್ತದೆ!

ಪರೀಕ್ಷಾ ಪದ್ಧತಿಯ ವಿಚಾರಕ್ಕೆ ಬಂದರೆ 268x20 ಪೂರ್ವಭಾವಿ ಪರೀಕ್ಷೆಯಿಂದ ಮುಖ್ಯ ಪರೀಕ್ಷೆಗೆ ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಅಂದರೆ ಪರೀಕ್ಷೆ ಬರೆದವರಲ್ಲಿ ಒಟ್ಟು 5360 ಅಭ್ಯರ್ಥಿಗಳು ಮುಖ್ಯ ಪರೀಕ್ಷೆಗೆ ತೆರಳುತ್ತಾರೆ.

2008 ರಲ್ಲಿ ನಡೆದ ಪರೀಕ್ಷೆಯಲ್ಲಿ ಕೂಡಾ ಇತಿಹಾಸ, ಸಾರ್ವಜನಿಕ ಆಡಳಿತ, ಐಚ್ಛಿಕ ಕನ್ನಡ, ಕ್ರಿಮಿನಾಲಜಿ- ಈ ನಾಲ್ಕು ವಿಷಯಗಳಲ್ಲೇ 85 ಪರ್ಸೆಂಟ್ ಅಭ್ಯರ್ಥಿಗಳನ್ನು ಪೂರ್ವಭಾವಿ ಪರೀಕ್ಷೆಯಿಂದ ಮುಖ್ಯ ಪರೀಕ್ಷೆಗೆ ಆಯ್ಕೆ ಮಾಡಲಾಗಿತ್ತು, ಇತಿಹಾಸವೊಂದರಿಂದಲೇ 36% ಆಯ್ಕೆ ನಡೆದಿತ್ತು, ಮಿಕ್ಕುಳಿದ 26 ವಿಷಯಗಳಲ್ಲಿ ಆಯ್ಕೆಯಾದದ್ದು ಕೇವಲ 15 ಪರ್ಸೆಂಟ್ ಜನ ಮಾತ್ರ!

ಇದು ನಿಜಕ್ಕೂ ಅವೈಜ್ಞಾನಿಕ ಪದ್ಧತಿ. ಈ ಸಾರಿ ನಡೆದ ಪರೀಕ್ಷೆಯಲ್ಲೂ ಕನ್ನಡ ಐಚ್ಛಿಕ ವಿಷಯ ಬಲು ಸುಲಭವಾಗಿತ್ತಂತೆ. ಮುಖ್ಯ ಪರೀಕ್ಷೆಗೆ ಆ ವಿಷಯ ತೆಗೆದುಕೊಂಡವರನ್ನೇ ದಬ್ಬುವುದು ಗ್ಯಾರಂಟಿ. ಇದರಿಂದ ಆತಂಕಗೊಂಡ ಕೆಲ ವಿದ್ಯಾರ್ಥಿಗಳು KATಗೆ ದೂರು ನೀಡಿದ್ದೂ ಆಗಿದೆ.

ಈ ಅನ್ಯಾಯಕ್ಕೆ ಕಾರಣ ಹುಡುಕುತ್ತಾ ಹೋದರೆ ಕರ್ನಾಟಕ ಲೋಕಸೇವಾ ಆಯೋಗ ಪ್ರತೀ ಪ್ರಕ್ರಿಯೆಯಲ್ಲೂ ಅವೈಜ್ಞಾನಿಕ ಪದ್ಧತಿ ಅಳವಡಿಸಿಕೊಂಡಿರುವುದು ಸ್ಪಷ್ಟವಾಗುತ್ತದೆ. ಈ ಪರೀಕ್ಷೆಗೆ ಪ್ರಶ್ನೆ ಪತ್ರಿಕೆ ತಯಾರಿಸುವ ಜವಾಬ್ದಾರಿಯನ್ನು ಕಾಲೇಜು ಉಪನ್ಯಾಸಕರಿಗೆ ವಹಿಸಲಾಗಿರುತ್ತದೆ. ಇಲ್ಲಿ ಯಾವುದೇ ಮಾನದಂಡವಿಲ್ಲವಾದುದರಿಂದ ಪ್ರಶ್ನೆಗಳು ಆಯಾ ಉಪನ್ಯಾಸಕರುಗಳ ಮರ್ಜಿಯನ್ನವಲಂಬಿಸಿರುತ್ತವೆ. ಇನ್ನು ಕೆಲ ಉಪನ್ಯಾಸಕರು ಹೈದ್ರಾಬಾದ್‌ನ ಬ್ರೈನ್ ಟ್ರೀ ಕೋಚಿಂಗ್ ಸಂಸ್ಥೆಯ ಕ್ವಶನ್ ಬ್ಯಾಂಕಿನಿಂದ ಯಥಾವತ್ತಾಗಿ ಕಾಪಿ ಹೊಡೆದು ಪ್ರಶ್ನೆ ನಿಗದಿಪಡಿಸುತ್ತಾರೆ.

ಮೊದಲನೆಯದಾಗಿ ಆಯಾ ವಿಚಾರಗಳ ಸಂಪನ್ಮೂಲ ವ್ಯಕ್ತಿಗಳಿಂದ ಪ್ರಶ್ನೆಪತ್ರಿಕೆ ತಯಾರಿಸಿದರೆ ಇಂಥ ಅನ್ಯಾಯಗಳಾಗುವುದಿಲ್ಲ. ಹಾಗೂ 1996 ರಲ್ಲಿ ಕೇಂದ್ರ ಲೋಕಸೇವಾ ಆಯೋಗ ಜಾರಿಗೆ ತಂದಿರುವ ಸ್ಕೇಲಿಂಗ್ ಪದ್ಧತಿ ಅಳವಡಿಕೆ ಇದಕ್ಕೆಲ್ಲ ಪರಿಹಾರವಾಗಬಲ್ಲದು. ಇದರ ಉಪಯೋಗವೆಂದರೆ ಪ್ರತೀ ವಿಷಯದ ಪ್ರಶ್ನೆ ಪತ್ರಿಕೆಗಳೂ ಒಂದೇ ಮಾನದಂಡದಡಿ ಬರುತ್ತವಲ್ಲದೆ, ಆಯ್ಕೆ ವಿಚಾರದಲ್ಲೂ ಎಲ್ಲಾ ಐಚ್ಛಿಕ ವಿಷಯಗಳನ್ನು ಪರ್ಸೆಂಟೇಜ್ ಆಧಾರದಲ್ಲಿ ಪರಿಗಣಿಸುವಂತಾಗುತ್ತದೆ.

ಪೂರ್ವಭಾವಿ ಪರೀಕ್ಷೆಯಿಂದ ಮುಖ್ಯ ಪರೀಕ್ಷೆ ಹಾಗೂ ಸಂದರ್ಶನಕ್ಕೆ ಆಯ್ಕೆ ಮಾಡುವ ಪ್ರತೀ ಹಂತದಲ್ಲೂ ಎಲ್ಲಾ ಸಬ್ಜೆಕ್ಟ್‌ಗಳಿಗೆ ಪ್ರಾಶಸ್ತ್ಯ ಕೊಡುವುದರಿಂದ ಈ ತಾರತಮ್ಯ ತಡೆಗಟ್ಟಬಹುದಾಗಿದೆ. ಈ ಸಾರಿ 80 ಸಾವಿರ ಮಂದಿ ಪರೀಕ್ಷೆ ಬರೆದಿದ್ದಾರಲ್ಲಾ? ಇದರಲ್ಲಿ ಪ್ರತೀ ವಿಷಯಗಳಲ್ಲೂ ಶೇ. 10 ರಷ್ಟು ಅನುಪಾತದಲ್ಲಿ ಆಯ್ಕೆ ಮಾಡಿದರೆ ಅನ್ಯಾಯ ತಡೆದಂತಾಗುತ್ತದೆ.

ಇಂಥಾ ಸ್ಕೇಲಿಂಗ್ ಪದ್ಧತಿಯನ್ನು ಕರ್ನಾಟಕ ಲೋಕಸೇವಾ ಆಯೋಗವು ಅಳವಡಿಸಿಕೊಳ್ಳಬೇಕೆಂದು ಹಲವಾರು ಬಾರಿ ಮನವಿಗಳು ಸಲ್ಲಿಕೆಯಾಗಿವೆ. ರಾಜ್ಯಪಾಲರಿಗೂ ಕೆಲ ಮಂದಿ ಮನವಿ ಸಲ್ಲಿಸಿದ್ದಾರೆ. ಆದರ್ಯಾಕೋ ಯಾರೂ ಅನ್ಯಾಯ ತಡೆಗಟ್ಟುವ ಮನಸ್ಸು ಮಾಡುತ್ತಿಲ್ಲ.

ಇದೀಗ ಬರಲಿರುವ ಫಲಿತಾಂಶದ ಬಗ್ಗೆ ಚಿಂತೆಗೀಡಾಗಿರುವ ವಿದ್ಯಾರ್ಥಿಗಳು ಈ ಫಲಿತಾಂಶಕ್ಕೆ ಅನ್ವಯವಾಗುವಂತೆಯೇ ಸ್ಕೇಲಿಂಗ್ ಪದ್ಧತಿ ಜಾರಿ ಮಾಡಬೇಕೆಂದು ಆಗ್ರಹಿಸಿದ್ದಾರೆ. ಲೋಕಸೇವಾ ಆಯೋಗ 'ಮುಂದಿನ ಸಾರಿಯಿಂದ ಮಾಡ್ತೀವಿ' ಅಂತ ಕೈ ತೊಳೆದುಕೊಂಡಿದೆ.

ಸಂಬಂಧಿಸಿದವರು ಎಚ್ಚೆತ್ತುಕೊಂಡು ಅವೈಜ್ಞಾನಿಕ ಪದ್ಧತಿಯಿಂದಾಗುವ ಅನ್ಯಾಯವನ್ನು ತಡೆಗಟ್ಟಬೇಕಿದೆ. ●

## ಸ್ಕೇಲಿಂಗ್ ಪದ್ಧತಿ ಅನಿವಾರ್ಯ

ಸ್ಕೇಲಿಂಗ್ ಪದ್ಧತಿ ಅಳವಡಿಕೆಯ ಹೊರತಾಗಿ ಯಾವ ರಾಜ್ಯಗಳಲ್ಲೂ ಈ ಅನ್ಯಾಯ, ತಾರತಮ್ಯ ತಡೆಗಟ್ಟಲು ಸಾಧ್ಯವಿಲ್ಲ.

1996 ರಲ್ಲಿ ಕೇಂದ್ರ ಲೋಕಸೇವಾ ಆಯೋಗ ಜಾರಿಗೆ ತಂದ ಸ್ಕೇಲಿಂಗ್ ಪದ್ಧತಿ ಮೆಚ್ಚುಗೆಗೆ ಪಾತ್ರವಾಗಿರುವಂತಹುದು. ಇದೀಗಲೇ ರಾಜಸ್ಥಾನ ಮತ್ತಿತರ ರಾಜ್ಯಗಳು ಈ ಪದ್ಧತಿ ಅಳವಡಿಸಿಕೊಂಡಿವೆ. ದೆಹಲಿ ಹೈಕೋರ್ಟ್, ತಮಿಳುನಾಡು ಹೈಕೋರ್ಟ್ ಹಾಗೂ ಸುಪ್ರೀಂಕೋರ್ಟ್‌ಗಳು ಈ ಸ್ಕೇಲಿಂಗ್ ಪದ್ಧತಿಯನ್ನು ಮೆಚ್ಚಿ ಎತ್ತಿ ಹಿಡಿದಿವೆ.

ಅಭ್ಯರ್ಥಿಗಳಿಗೆಲ್ಲಾ ನ್ಯಾಯ ಒದಗಿಸಬೇಕೆಂದರೆ ಸ್ಕೇಲಿಂಗ್ ಪದ್ಧತಿ ಅನಿವಾರ್ಯ. ಈ ನಿಟ್ಟಿನಲ್ಲಿ ಕರ್ನಾಟಕ ಲೋಕಸೇವಾ ಆಯೋಗ ಮುಂದಡಿ ಇಡಬೇಕಿದೆ.

## ಬೆಂಗಳೂರಿನ ಭವಿಷ್ಯಕ್ಕೆ ಕೊಳ್ಳಿ ಇಟ್ಟ

# ಟೌನ್‌ಪ್ಲಾನರ್ ಮಹೇಂದ್ರನನ್ನು ಜೈಲಿಗೆ ಹಾಕೋರ್‍ಯಾರು?



ಮಹೇಂದ್ರ


ಕೆಡಲು ನಿಂತರೆ ಅಧಿಕಾರಿಯೊಬ್ಬ ಎಷ್ಟು ಕೆಡಬಹುದು ಮತ್ತು ಹೇಗೆಲ್ಲಾ ಬೆಂಗಳೂರನ್ನು ಕುಲಗೆಡಿಸಬಹುದು?

ಇದಕ್ಕೆ ಉತ್ತರ ಬೇಕಿದ್ದರೆ ಮೊದಲು ಭವಿಷ್ಯದ ಬೆಂಗಳೂರಿಗಾಗಿ ಬಿಡಿಎ ರೂಪಿಸಿದ ಮಾಸ್ಟರ್ ಪ್ಲಾನನ್ನೂ ಸದ್ಯ ನಗರ ಯೋಜನಾ ಇಲಾಖೆಗೆ ಹೆಚ್ಚುವರಿ ನಿರ್ದೇಶಕನಾಗಿರುವ ಬಿ.ಮಹೇಂದ್ರ ಎಂಬಾತನ ಅಟ್ಟಹಾಸವನ್ನು ಒಟ್ಟೊಟ್ಟಿಗೆ ಗಮನಿಸಬೇಕು. ಒಂದಲ್ಲ ಎರಡಲ್ಲ ಸರಿಸುಮಾರು ಎರಡು ಸಾವಿರ ಎಕರೆಗಳಷ್ಟು ಸರ್ಕಾರಿ ಭೂಮಿ; ಅಂದರೆ ಪಾರ್ಕು, ಆಟದ ಮೈದಾನ, ಸ್ಮಶಾನ, ಆಸ್ಪತ್ರೆ, ಬಸ್‌ನಿಲ್ದಾಣ, ದೇವಸ್ಥಾನ, ಸಾರ್ವಜನಿಕ ಶೌಚಾಲಯ, ಬಡ ವಿದ್ಯಾರ್ಥಿಗಳ ಹಾಸ್ಟೆಲು, ಸರ್ಕಾರಿ ಕಚೇರಿಗಳು ಇತ್ಯಾದಿ ಭವಿಷ್ಯದ ಬೃಹತ್ ಬೆಂಗಳೂರಿನ ಉದ್ಧಾರಕ್ಕಾಗಿ ಮೀಸಲಿಟ್ಟಿದ್ದ ಅಷ್ಟೂ ಭೂಮಿಯನ್ನು ಒಂದೇ ಏಟಿಗೆ ನಿಕಾಲಿ ಮಾಡಿ ಕುಬೇರನಾದವನು ಸದ್ಯ ಬಿಎಂಆರ್‌ಡಿಎಯಲ್ಲಿ ಹೆಚ್ಚುವರಿ ನಿರ್ದೇಶಕನಾಗಿರುವ ಬಿ.ಮಹೇಂದ್ರ.

ಮುಖ್ಯಮಂತ್ರಿ ಯಡ್ಡಿ ಕಚೇರಿಯ ಜಂಟಿ ಕಾರ್ಯದರ್ಶಿ ನಂದಕುಮಾರ್ ಎಂಬ ಹುಟ್ಟುಕಳ್ಳ ಮತ್ತು ನಗರಾಭಿವೃದ್ಧಿ ಸಚಿವಾಲಯದ ಡೆಪ್ಯೂಟಿ ಸೆಕ್ರಟರಿ ಸೊನ್ನರ್ ಎಂಬ ಚಪಲ ಚೆನ್ನಿಗರಾಯನನ್ನು ಬೆನ್ನಿಗಿಟ್ಟುಕೊಂಡು ದರೋಡೆಗಿಳಿದಿರುವ ಈ ಮಹೇಂದ್ರ ಯಾವತ್ತೋ ಜೈಲು ಪಾಲಾಗಬೇಕಿತ್ತು. ದೋಚಿದ ಎರಡು ಸಾವಿರ ಎಕರೆಗಳ ಪಾಪದ ದುಡ್ಡಿದೆಯಲ್ಲ; ಅದೇ ಆತನ ತಾಕತ್ತು ಮತ್ತು ಸದ್ಯ ಬೆಂಗಳೂರಿಗೊದಗಿರುವ ಆಪತ್ತು.

ಈತ ಬಿಲ್ಡರುಗಳ ಜೊತೆ ಸೇರಿ ದೋಚಿರುವ ಗ್ರೀನ್ ಬೆಲ್ಟ್ ಅಂದರೆ ಹಸಿರು ಪಟ್ಟಿಯ ಭೂಮಿಯನ್ನೇನಾದರೂ ಸರ್ಕಾರ ವಶಪಡಿಸಿಕೊಳ್ಳದೆ ಹೋದರೆ ಮುಂದೊಮ್ಮೆ ಬೆಂಗಳೂರಿನ ಜನ ಕಾಲಿಡುವುದಕ್ಕೂ ಜಾಗ ಉಳಿಯುವುದಿಲ್ಲ. ಆದರೆ ಮಹೇಂದ್ರನನ್ನು ಜೈಲಿಗೆ ಹಾಕದೆ ಹೋದರೆ




CONFIDENTIAL

GOVERNMENT OF INDIA
INCOME TAX DEPARTMENT

ಮಹೇಂದ್ರನ ವಿರುದ್ಧ ಐಟಿ ದಾಖಲೆ...

ಆತನ ದಕಾಯಿತಿಯೇ ಸಾಬೀತಾಗುವುದಿಲ್ಲ. ಪಾಪದ ದುಡ್ಡಲ್ಲಿ ಮುಖ್ಯಮಂತ್ರಿ ಕಚೇರಿಯನ್ನೇ ಸಂಭಾಳಿಸುತ್ತಿರುವವನಿಗೆ ಶಿಕ್ಷೆ ವಿಧಿಸುವವರ್‍ಯಾರು? ಆತನ ದುರಾಚಾರದ ವಿರುದ್ಧ ತನಿಖೆ ಮಾಡುವವರ್‍ಯಾರು?

### ಮಂತ್ರಿಗೆ ಮಂಕುಬೂದಿ

ದುಷ್ಟ ಅಧಿಕಾರಿಯೊಬ್ಬ ಹೇಗೆ ನಾಡಿಗೆ ಕಂಟಕನಾಗಬಲ್ಲ ಎಂಬುದಕ್ಕೆ ಬಿ.ಮಹೇಂದ್ರನಿಗಿಂತ ಉದಾಹರಣೆ ಬೇಕಿಲ್ಲ. ನಗರ ಯೋಜನಾ ಇಲಾಖೆಯ ಕೆಲಸವೇ ಕರ್ನಾಟಕದ ಆಯಾ ನಗರಗಳನ್ನು ಯೋಜನಾಬದ್ಧವಾಗಿ ಬೆಳೆಸುವುದು. ಅಂದರೆ ಭವಿಷ್ಯದಲ್ಲಿ ಊರೊಂದಕ್ಕೆ ರಸ್ತೆಗೆಂದು ಎಷ್ಟೆಲ್ಲಾ ಭೂಮಿ ಕಾದಿರಿಸಬೇಕು, ಎಲ್ಲಿ ಪಾರ್ಕುಗಳು ಬರಬೇಕು, ಸ್ಮಶಾನ, ಆಸ್ಪತ್ರೆ, ಆಟದ ಮೈದಾನ, ಬಸ್ ನಿಲ್ದಾಣ, ಶೌಚಾಲಯ, ಕೈಗಾರಿಕೆ ಇತ್ಯಾದಿಗಳಿಗೆಲ್ಲ ಭೂಮಿ ಕಾದಿರಿಸಿದ ನಂತರವೇ ಹೇಗೆ ಹೊಸಹೊಸ ಬಡಾವಣೆಗಳಾಗಬೇಕು ಎಂದು ನಿರ್ಧರಿಸುವುದು ನಗರಯೋಜನಾ ಇಲಾಖೆ. ಆದರೆ ಮಹೇಂದ್ರ ಶುರುವಿನಿಂದಲೂ ಅತ್ಯಂತ ಆಯಕಟ್ಟಿನ ಬಿಡಿಎ, ಬಿಎಂಆರ್‌ಡಿಎ ಮತ್ತು ಬಿಬಿಎಂಪಿಯ ಹೊರತಾಗಿ ಕರ್ನಾಟಕದ ಬೇರೆ ಬೇರೆ ನಗರಗಳಲ್ಲಿ ಸೇವೆ ಸಲ್ಲಿಸಲೇ ಇಲ್ಲ!

ಏಕೆಂದರೆ ಸರ್ಕಾರಿ ಭೂಮಿ ಲಪಟಾಯಿಸಿ ಕೋಟಿಗಟ್ಟಲೇ ದೋಚುವ ಅವಕಾಶವಿರುವುದು ಈ ಹುದ್ದೆಗಳಲ್ಲೇ!

ಇಡೀ ನಗರ ಯೋಜನಾ ಇಲಾಖೆಯನ್ನು ಈತ ಯಾಪಾಟಿ ಕುಲಗೆಡಿಸಿದ್ದಾನೆಂದರೆ; ಯಾರೇ ನಗರಾಭಿವೃದ್ಧಿ ಖಾತೆ ಮಂತ್ರಿಯಾದರೂ ತನ್ನನ್ನು ಬಿಡಿಎ ಅಥವಾ ಬಿಎಂಆರ್‌ಡಿಎಗೆ ಹಾಕಿಸಿಕೊಡುವಂತೆ ಕೋಟಿ ಮೊತ್ತದ ಆಮಿಷ ಒಡ್ಡುತ್ತಾನೆ. ಇಲಾಖೆಯ ಬೇರೆ ಯಾರೇ ಅಧಿಕಾರಿ ಮಂತ್ರಿಯೊಬ್ಬನಿಗೆ ಕೊಡಲು ಸಾಧ್ಯವೇ ಇಲ್ಲದಷ್ಟು ಬೃಹತ್ ಮೊತ್ತದ ಲಂಚ ಕೊಟ್ಟೇ ಫಲವತ್ತಾದ ಹುದ್ದೆ ಹಿಡಿಯುತ್ತಾನೆ. ನಂತರ ಊಟಕ್ಕೆ ಕುಂತನೆಂದರೆ, ಗ್ರೀನ್‌ಬೆಲ್ಟು, ಪಾರ್ಕು, ಕೆರೆ, ಕೊಳ್ಳ, ಕಾಡು ಏನೊಂದೂ ಉಳಿಸದೆ ನುಂಗಿದ ದುಡ್ಡಲ್ಲೇ ಮಂತ್ರಿಗೆ ಕೊಟ್ಟ ಲಂಚದ ರಿಕವರಿ ಮಾಡಿಕೊಳ್ಳುತ್ತಾನೆ. ಮಹೇಂದ್ರ ಆ ಮಟ್ಟದ ಖಾಬಂದಿ!

ಇಂಥ ಟೆಕ್ನಿಕ್ ಬಳಸಿಯೇ ಡಿಕೆಶಿಗೆ ಕಾಲು ಹಾಕಿ 2000ದಿಂದ 2006ನೇ ಸಾಲಿನ ತನಕ ಬಿಎಂಆರ್‌ಡಿಎಗೆ ವಕ್ಕರಿಸಿದ. ಆ ಹೊತ್ತಿಗಾಗಲೇ ಬೆಂಗಳೂರು ಸುತ್ತಮುತ್ತಲ ಆನೇಕಲ್, ಹೊಸಕೋಟೆ, ಕನಕಪುರ, ಮಾಗಡಿ, ನೆಲಮಂಗಲ, ದೇವನಹಳ್ಳಿ, ದೊಡ್ಡಬಳ್ಳಾಪುರ ಇತ್ಯಾದಿ ತಾಲ್ಲೂಕುಗಳನ್ನು ಭವಿಷ್ಯದ ಬೆಂಗಳೂರು ಯೋಜನೆಯೊಳಕ್ಕೆ ಸರ್ಕಾರ ಸೇರಿಸಿತ್ತು. ಈ ಎಲ್ಲಾ ತಾಲ್ಲೂಕುಗಳನ್ನು ಬೆಂಗಳೂರಿಗೆ ಪೂರಕವಾಗಿ ರೂಪಿಸುವ ಹೊಣೆಗಾರಿಕೆಯೂ ಈತನ ಮೇಲಿತ್ತು. ಅದಕ್ಕೊಂದು ಮಹಾಯೋಜನೆ ಅಂದರೆ ಮಾಸ್ಟರ್ ಪ್ಲಾನ್ ರೂಪಿಸಿದ ನಂತರವೇ ಖಾಸಗಿ ಲೇಔಟ್, ರೆಸಾರ್ಟುಗಳಿಗೆ ಪರವಾನಗಿ ಕೊಡುವುದು ಮತ್ತು ಭೂಪರಿವರ್ತನೆಗೆ ಮಂಜೂರಾತಿ ನೀಡಬೇಕಿತ್ತು.

### ಆರು ತಾಲ್ಲೂಕುಗಳ ನಾಶ

ಆದರೆ ಲಂಚ ಹುಟ್ಟಬೇಕಲ್ಲ? ಒಮ್ಮೆ ಮಾಸ್ಟರ್ ಪ್ಲಾನ್ ರೂಪಿಸಿಬಿಟ್ಟರೆ ಬೇಕಾಬಿಟ್ಟಿ ಭೂಪರಿವರ್ತನೆ ಮಾಡುವಂತಿಲ್ಲ ಮತ್ತು ಸಿಕ್ಕಾಪಟ್ಟೆ ಲೇಔಟ್‌ಗಳಿಗೆ ಪರವಾನಗಿ ನೀಡುವಂತಿಲ್ಲ. ದರೋಡೆಗೆ ನಿಂತ ಮಹೇಂದ್ರ ಎಂಥಾ ಅನಾಹುತಕಾರಿ ಕೆಲಸಕ್ಕೆ ಕೈಯಿಟ್ಟನೆಂದರೆ, ಬೆಂಗಳೂರು ಸುತ್ತಮುತ್ತಲ ಅಷ್ಟೂ ತಾಲ್ಲೂಕುಗಳಲ್ಲಿ ಮುನ್ನೂರಕ್ಕೂ ಹೆಚ್ಚು ಖಾಸಗಿ ಲೇಔಟ್‌ಗಳಿಗೆ ಮಂಜೂರಾತಿ ಕೊಟ್ಟದ್ದೇ ಸಾವಿರಾರು ಎಕರೆಗಳಿಗೆ ಭೂಪರಿವರ್ತನೆ ಮಾಡಿಕೊಟ್ಟುಬಿಟ್ಟ.

ಒಂದೆಡೆ ಖಾಸಗಿ ಲೇಔಟ್‌ಗಳ ಅಪ್ರೂವಲ್ಲಿಗೆ ಲಂಚ ಮತ್ತೊಂದೆಡೆ ಭೂಪರಿವರ್ತನೆಗೆಂದು ಎಕರೆಯ ಲೆಕ್ಕದಲ್ಲಿ ಲಂಚ!

ಒಂದೇ ಏಟಿನಲ್ಲಿ ಬೆಂಗಳೂರು ಗ್ರಾಮಾಂತರದ ಅಷ್ಟೂ ತಾಲ್ಲೂಕುಗಳಷ್ಟೇ ಅಲ್ಲದೇ ರಾಜಧಾನಿಯ ಹೊರವಲಯದ ಭವಿಷ್ಯಕ್ಕೆ ಮಹೇಂದ್ರ ಕೊಳ್ಳಿಇಟ್ಟಿದ್ದ. ಆಗ ಮುಖ್ಯಮಂತ್ರಿಯಾಗಿದ್ದ ಕೃಷ್ಣ ಮತ್ತು ನಗರಾಭಿವೃದ್ಧಿ ಮಂತ್ರಿ ಡಿಕೆಶಿ ಮಹೇಂದ್ರನ ಲೂಟಿಗೆ ಅದೆಂಥಾ ಕುಮ್ಮಕ್ಕು ಕೊಟ್ಟರೆಂದರೆ; ಯಾವುದಾದರೂ ಒಂದು ತಾಲ್ಲೂಕಿನ ಯೋಜನಾ ಪ್ರಾಧಿಕಾರಕ್ಕೆ ಕಾರ್ಯದರ್ಶಿಯನ್ನಾಗಿ ನೇಮಿಸಬೇಕಿದ್ದ ಮಹೇಂದ್ರನನ್ನು ಏಕಕಾಲಕ್ಕೆ ಆರೂ ತಾಲ್ಲೂಕಿಗೆ ನೇಮಿಸಿದ್ದರು!

ಕನಕಪುರವೋ, ಮಾಗಡಿಯೋ ಒಂದೇ ತಾಲ್ಲೂಕಿನ ಬದಲು ಏಕಕಾಲಕ್ಕೆ ಆರು ತಾಲ್ಲೂಕುಗಳ ಯೋಜನಾ ಪ್ರಾಧಿಕಾರಕ್ಕೆ ವಕ್ಕರಿಸಿದ್ದ ಮಹೇಂದ್ರ ಕೇವಲ ಐದು ವರ್ಷದ ಅವಧಿಯಲ್ಲಿ ನೂರೈವತ್ತು ಕೋಟಿಗೂ ಅಧಿಕ ಮೊತ್ತದ ರಾಬರಿ ನಡೆಸಿಬಿಟ್ಟ. ಕೃಷ್ಣರ ಸರ್ಕಾರ ಪತನವಾಗುತ್ತಿದ್ದಂತೆ ಅದೇ ರೊಕ್ಕ ಚೆಲ್ಲಿ ಬಿಡಿಎಗೆ ವಕ್ಕರಿಸಿದ್ದ. ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತಾಯ್ತು. ಅದೂ ಹಿಂದಿಗಿಂತಲೂ ಫಲವತ್ತಾದ ಹುದ್ದೆಯಾಗಿತ್ತು. ಆ ಹೊತ್ತಿಗಾಗಲೇ ಭವಿಷ್ಯದ ಬೆಂಗಳೂರಿನ ಕರಡು ಮಾಸ್ಟರ್ ಪ್ಲಾನ್ ಒಂದನ್ನು ಬಿಡಿಎ ರೂಪಿಸಿತ್ತು. ಸರ್ಕಾರ ಅದನ್ನು ಅನುಮೋದಿಸಿತ್ತು. ಭವಿಷ್ಯದ ಹಿತದೃಷ್ಟಿಯಿಂದ ಬೆಂಗಳೂರು ಹೊರವಲಯದಲ್ಲಿದ್ದ ಹಸಿರುಪಟ್ಟಿಯಲ್ಲಿ ಕಬ್ಬನ್‌ಪಾರ್ಕ್, ಲಾಲ್‌ಬಾಗ್‌ನಂಥ ವಿಶಾಲ ಪಾರ್ಕುಗಳು, ಆಟದ ಮೈದಾನ, ಸ್ಮಶಾನ, ಬಸ್‌ನಿಲ್ದಾಣ ಇತ್ಯಾದಿಗಳಿಗೆಂದು ಎರಡು ಸಾವಿರಕ್ಕೂ ಅಧಿಕ ಎಕರೆಗಳಷ್ಟು ಭೂಮಿಯನ್ನು ಗುರುತಿಸಲಾಗಿತ್ತು.

### ಗ್ರೀನ್‌ಬೆಲ್ಟ್ ಡಕಾಯಿತಿ

ಇಂಥದೊಂದು ಕರಡು ಯೋಜನೆಯನ್ನೇ ಅಂತಿಮಗೊಳಿಸಿಬಿಟ್ಟಿದ್ದರೆ ಈತನಕ ಗ್ರಾಮಾಂತರ ಬೆಂಗಳೂರಿಗೆ ಆತ ಮಾಡಿದ ಪಾಪವಾದರೂ ಪರಿಹಾರವಾಗುತ್ತಿತ್ತು. ಬೆಂಗಳೂರಿನ ಜನ ಕನಿಷ್ಠ ಉಸಿರಾಡುವುದಕ್ಕಾದರೂ ಚೂರೂಪಾರು ಜಾಗ ಮಿಕ್ಕುತ್ತಿತ್ತು. ಆದರೆ ದೋಚಲೆಂದೇ ನಿಂತವನಿಗೆ ಊರಿನ ಉಸಾಬರಿ ಯಾವ ಲೆಕ್ಕ? ಮಹೇಂದ್ರ ಗ್ರೀನ್‌ಬೆಲ್ಟಿಗೆ ಕಣ್ಣಿಟ್ಟ. ಪಾರ್ಕು, ಸ್ಮಶಾನ, ಆಟದ ಮೈದಾನ, ಆಸ್ಪತ್ರೆಗೆಂದು ಮೀಸಲಿಟ್ಟಿದ್ದ ಸಾವಿರಾರು ಎಕರೆಗಳನ್ನು ಲಾಭದಾಯಕ ವಸತಿ, ವಾಣಿಜ್ಯ ಉದ್ದೇಶಕ್ಕೆಂದು ರಾತ್ರೋರಾತ್ರಿ ಕರಡು ನಕ್ಷೆಯನ್ನೇ ತಿದ್ದಿಬಿಟ್ಟ.


ಆ ಕಾಲಕ್ಕೆ; ಅಂದರೆ 2006 ಮತ್ತು 2007ರ ಹೊತ್ತಿಗೆ ಇಂಥ ಗ್ರೀನ್‌ಬೆಲ್ಟ್ ತಿದ್ದಿ ರೆಸಿಡೆನ್ಷಿಯಲ್ ಉದ್ದೇಶಕ್ಕೆ ಮಾರ್ಪಡಿಸಲೆಂದು ಪ್ರತಿ ಎಕರೆಯೊಂದಕ್ಕೆ 25ರಿಂದ 50 ಲಕ್ಷದಷ್ಟು ಲಂಚ ಕಿತ್ತಿದ್ದ. ಬೆಂಗಳೂರು ಹೊರವಲಯದ ತಲಾ ಎಕರೆಗೆ ಆ ಹೊತ್ತಿಗೆ ಕನಿಷ್ಠ ಆರರಿಂದ ಹತ್ತು ಕೋಟಿಯ ಬೆಲೆಯಿತ್ತು. ಮುಂಬಯಿಯ ಮಂತ್ರಿ ಬಿಲ್ಡರ್‍ಸ್ ಕಂಪೆನಿಯೊಂದೇ ಇಂಥ 200 ಎಕರೆಗೆ ಕಣ್ಣು ಹಾಕಿತ್ತು. ರಹೇಜಾ, ಎಂಬೆಸಿ, ಪ್ರೆಸ್ಟೀಜ್, ಸೇರಿದಂತೆ ರೆಡ್ಡಿ ವೀರಣ್ಣ, ಕುಪೇಂದ್ರ ರೆಡ್ಡಿ, ದಯಾನಂದ ರೆಡ್ಡಿ, ಗೋಪಿನಾಥ್ ರೆಡ್ಡಿ, ನಂದೀಶ್ ರೆಡ್ಡಿ, ರಾಮರೆಡ್ಡಿ, ಆದರ್ಶ ಜೈಶಂಕರ್, ದಯಾನಂದ ಪೈ; ಇತ್ಯಾದಿ ನೆಲಕಂಟಕರೆಲ್ಲ ನೂರಾರು ಎಕರೆ ಗ್ರೀನ್‌ಬೆಲ್ಟ್ ಭೂಮಿ ಆಕ್ರಮಿಸಿಕೊಂಡಾಗಿತ್ತು.

ಮಹೇಂದ್ರನ ನಡುರಾತ್ರಿ ಕೈಚಳಕದ ಫಲವಾಗಿ ಜನೋಪಯೋಗಿ ಉದ್ದೇಶಕ್ಕಾಗಿ ಮೀಸಲಿಟ್ಟಿದ್ದ ಎರಡು ಸಾವಿರ ಎಕರೆಗಳಷ್ಟು ಕೃಷಿ ಭೂಮಿ ರಾತ್ರೋರಾತ್ರಿ ಬಿಲ್ಡರು-ಡೆವಲಪರ್‌ಗಳ ಪಾಲಾಯಿತು. ಪ್ರತಿ ಎಕರೆಗೆ ಕನಿಷ್ಠ 20 ಲಕ್ಷದ ಲಂಚದಂತೆ ಲೆಕ್ಕ ಹಾಕಿದರೂ ಈ ಒಂದೇ ದಕಾಯಿತಿಯಿಂದ ಮಹೇಂದ್ರ ಕನಿಷ್ಠ ನಾನೂರು ಕೋಟಿ ರೂಪಾಯಿಗಳಷ್ಟು ಬಾಚಿಕೊಂಡಿದ್ದ. ಹಾಗಂಥ ಮಾಡಿದ ಪಾಪಕ್ಕೆ ತೇಪೆ ಹಾಕಬೇಕಲ್ಲ; ಎಲ್ಲೆಲ್ಲಿ ಕಟ್ಟಡಗಳಿದ್ದವೋ, ಆ ಹೊತ್ತಿಗಾಗಲೇ ಬೆಳೆದು ನಿಂತಿದ್ದ ಬಡಾವಣೆಗಳಿದ್ದವೋ ಅದನ್ನೆಲ್ಲ ಏಕಾಏಕಿ ಗ್ರೀನ್‌ಬೆಲ್ಟ್ ಎಂದು ಕಾಗದದ ನಕಾಶೆ ಮೇಲೆ ತೋರಿಸಿದ್ದ!

### 2 ಸಾವಿರ ಎಕರೆ ಗೋಲ್‌ಮಾಲ್

ಕರಡು ಪ್ಲಾನಿನಲ್ಲಿ ಗುರುತಿಸಿದ್ದ ಭೂಮಿಗೆ ಬದಲಾಗಿ ಮತ್ತೆ2 ಸಾವಿರ ಎಕರೆಗಳಷ್ಟು ಜಮೀನು ಅಂತಿಮ ಮಾಸ್ಟರ್ ಪ್ಲಾನಿನಲ್ಲೂ ಇತ್ತಲ್ಲ; ಶುರುವಿನಲ್ಲಿ ಮಹೇಂದ್ರನ ಮೋಸ ಯಾರಿಗೂ ಗೊತ್ತಾಗಲಿಲ್ಲ, ಯಾವತ್ತು ಸ್ಥಳ ವೀಕ್ಷಣೆಗೆಂದು

## ಮತ್ತೆ ಶುರು ಮಾಸ್ಟರ್‌ಪ್ಲಾನ್ ರಾಬರಿ?


ವಿಜಯೇಂದ್ರ

ಮಹೇಂದ್ರನ ವಿರುದ್ಧ ಸರ್ಕಾರಕ್ಕೆ ಮೊದಲು ದೂರು ಕೊಟ್ಟಿದ್ದು ನಿವೃತ್ತ ಐಎಎಸ್ ಅಧಿಕಾರಿ ತಾರಾ ಅಜಯ್ ಸಿಂಗ್ ಈತ ಅತ್ಯಂತ ನಯವಂಚಕ ಅಧಿಕಾರಿಯಾಗಿದ್ದು ಈತನನ್ನು ಸೇವೆಯಿಂದಲೇ ವಜಾಗೊಳಿಸಬೇಕು ಎಂದು ತಾರಾ ಅಜಯ್‌ಸಿಂಗ್ ಕೊಟ್ಟಿದ್ದ ವರದಿಯನ್ನೇ ಮಹೇಂದ್ರ ಮುಚ್ಚಿಹಾಕಿದ್ದ. ಅನಂತರ ಬಿಐಎಪಿಪಿಎಗೆ ಕಾರ್ಯದರ್ಶಿಯಾಗಿ ಎತ್ತಂಗಡಿಯಾದರೆ ಅಲ್ಲೂ ತನ್ನ ರಿಯಲ್ ಎಸ್ಟೇಟ್ ಕೈಚಳಕ ಮೆರೆದು ನಗರಾಭಿವೃದ್ಧಿ ಕಾರ್ಯದರ್ಶಿ ಶಮೀಮ್ ಭಾನು ಕೈಯಲ್ಲಿ ಸಿಕ್ಕಿಬಿದ್ದ. ಅಲ್ಲಿಂದ ಒದ್ದೋಡಿಸಿದರೆ ಮತ್ತೆ ಲಂಚ ತೆತ್ತು ಇನ್ನೂ ಫಲವತ್ತಾದ ಬಿಡಿಎಗೆ ವಕ್ಕರಿಸಿಕೊಂಡ. ಬಿಡಿಎಯಲ್ಲಿ ಈತನ ಹಾವಳಿಗೆ ರೋಸತ್ತ ಕಮೀಷನರ್ ವಿದ್ಯಾಶಂಕರ್ ಈತ ಚೇಂಬರಿಗೆ ಬೀಗ ಜಡಿದು ಹೊರ ಹಾಕಿದ್ದರು. ನಂತರ ಕಮೀಷನರಾದ ಸಿದ್ದಯ್ಯ ಈತನ ಅಕ್ರಮಗಳ ಪಟ್ಟಿಯನ್ನೇ ತಯಾರಿಸಿ ಸರ್ಕಾರಕ್ಕೆ ದೂರು ಕೊಟ್ಟರು.

ಶಿಕ್ಷಾರ್ಥವಾಗಿ ಧಾರವಾಡಕ್ಕೆ ವರ್ಗಾವಣೆಗೊಂಡ ಮಹೇಂದ್ರ ಅಲ್ಲಿದ್ದದ್ದು ಒಂದು ದಿನ ಮಾತ್ರ. ಅಲ್ಲಿಂದ ಮೈಸೂರಿಗೆ ಬಂದು ಒಂದು ತಿಂಗಳು ತುಂಬುವ ಮೊದಲೇ ವಿರೋಧ ಪಕ್ಷದ ನಾಯಕರಾಗಿದ್ದ ಉಗ್ರಪ್ಪನವರ ಆಪ್ತಕಾರ್ಯದರ್ಶಿಯಾಗಿ ಮತ್ತೆ ಬೆಂಗಳೂರು ಸೇರಿಕೊಂಡಿದ್ದ. ಅಲ್ಲಿದ್ದದ್ದು ಬರೀ ಆರು ತಿಂಗಳು ಮಾತ್ರ. ಅಷ್ಟರಲ್ಲೇ ಮತ್ತೆ ಬಿಎಂಆರ್‌ಡಿಎಗೆ ಹೆಚ್ಚುವರಿ ನಿರ್ದೇಶಕನಾಗಿ ನೇಮಕಗೊಂಡ ಆದೇಶ ಹಿಡಿದು ನಿಂತಿದ್ದ. ಹೋದೆಯಾ ಪಿಶಾಚಿ ಎಂದರೆ ಬಂದೆ ಗವಾಕ್ಷೀಲಿ ಎಂಬಂತೆ ಯಾವ ಬಿಎಂಆರ್‌ಡಿಎಯನ್ನು ಈ ಹಿಂದೆಯೇ ನುಂಗಿ ನಿವಾಳಿಸಿದ್ದನೋ ಈಗ ಮತ್ತೆ ಅಲ್ಲಿಗೇ ಬಂದಿದ್ದಾನೆ.

ಏಕೆಂದರೆ ಈಗ ಮತ್ತೆ ಬೆಂಗಳೂರು ಸುತ್ತಮುತ್ತಲ ತಾಲ್ಲೂಕುಗಳ ಮಾಸ್ಟರ್‌ಪ್ಲಾನ್ ಕಾರ್ಯ ಶುರುವಾಗಿದೆ. ಕಮ್ಮಿಯೆಂದರೂ ಇದು ಇನ್ನೂರು ಕೋಟಿಯ ಬಾಬ್ತು. ಅದಕ್ಕೆ ಕುಮ್ಮಕ್ಕು ಕೊಡುತ್ತಿರುವುದು ಮುಖ್ಯಮಂತ್ರಿ ಕಚೇರಿಯ ನಂದಕುಮಾರ್ ಮತ್ತು ನಗರಾಭಿವೃದ್ಧಿ ಸಚಿವಾಲಯದ ಶೋಕಿಲಾಲ ಸೊನ್ನದ್. ಸಂಜೆಯಾದರೆ ಸಾಕು ಸೊನ್ನದ್ ಮತ್ತು ನಂದಕುಮಾರ್ ಜೊತೆ ಮಹೇಂದ್ರ ಹಳೇ ಏರ್‌ಪೋರ್ಟ್ ರಸ್ತೆಯ ಲೀಲಾಪ್ಯಾಲೇಸ್ ಹೋಟೆಲ್‌ನಲ್ಲಿ ಅಡ್ಡೆಹಾಕುತ್ತಾನೆ. ಮೂವರಿಗೂ ಮಸಾಜ್ ಖಯಾಲಿ. ಅದೂ ಲಲನೆಯರೇ ನಿಂತು ಮಾಡುವ ಮಸಾಜಂತೆ. ಪ್ರತಿ ಮಸಾಜಿಗೂ 15 ಸಾವಿರ ರೂಪಾಯಿಯಂತೆ!

ಇನ್ನು ಬೆಂಗಳೂರು ಉದ್ಧಾರವಾಗಬೇಕೆಂದರೆ ಎಲ್ಲಿಂದ? ಇದೇ ಸಿಎಂ ಕಚೇರಿಯ ನಂದಕುಮಾರ್ ತನ್ನನ್ನು ಕರೆದೊಯ್ದು ಯಡ್ಡಿ ಮಗ ವಿಜಯೇಂದ್ರನಿಗೆ ಗಂಟು ಹಾಕಿದರೆಂದೂ ಅದಕ್ಕೆ ಪ್ರತಿಯಾಗಿ ತಾನು ನಂದಕುಮಾರ್ ಮಗಳ ಮದುವೆಗೆ ಹತ್ತು ಲಕ್ಷ ಕೊಟ್ಟನೆಂದೂ ಸ್ವತಃ ಮಹೇಂದ್ರ ಡೈಲಾಗ್ ಹೊಡೆಯುತ್ತಿದ್ದಾನೆ. ಪಾಪದ ದುಡ್ಡಲ್ಲಿ ಮಗಳ ಮದುವೆ ಪೂರೈಸಿಕೊಂಡ ನಂದಕುಮಾರ್ ಸೊನ್ನದ್ ತರಹದವರಿಗೆ ಮುಂದೊಮ್ಮೆ ತಮ್ಮ ಹೆಣ ಹೂಳುವುದಕ್ಕಾದರೂ ಸರ್ಕಾರಿ ಜಾಗ ಉಳಿಸಬೇಕೆಂಬ ಪ್ರಜ್ಞೆ ಬೇಡವೇ?



...ೊಳಗಾದ ಮಹೇಂದ್ರನ ಬಂಗಲೆ...

ಅಧಿಕಾರಿಗಳು ಬಂದರೋ, ಎಂಥ ಆಘಾತ ...ವರೆ ಅಲ್ಲಾಗಲೇ ಬೆಳೆದು ನಿಂತ ಬಡಾವಣೆಗಳಿದ್ದವು! ...ೀಸ ಗೊತ್ತಾಗಿ ತಲೆ ಚಚ್ಚಿಕೊಂಡ ಅಧಿಕಾರಿಗಳು ...ಕೊಟ್ಟರಾದರೂ ಆ ಹೊತ್ತಿಗೆ ಮಹೇಂದ್ರ ಬಿಡಿಎಗೆ ... ಹೇಳಿ ಬೇರೊಂದು ಹುದ್ದೆಗೆ ನೆಗೆದು ಬಿಟ್ಟಿದ್ದ. ...ಟಿಲ್ಡ್ ಭೂಮಿಯನ್ನು ವಾಣಿಜ್ಯ ಉದ್ದೇಶಕ್ಕೆ ...ಸಲು ಎಕರೆಯೊಂದಕ್ಕೆ ಕನಿಷ್ಠ 15 ಲಕ್ಷದಂತೆ ...ಂಡರೂ ಇದೊಂದೇ ದರೋಡೆಯಿಂದ ಮಹೇಂದ್ರ ...ರು ಕೋಟಿಯಷ್ಟು ದೋಚಿದ್ದ. ಈತ ಮಾಡಿದ ...ಮಾಲ್ ಮತ್ತು ಹೊಡೆದ ಕೊಳ್ಳೆಯ ವಿರುದ್ಧ ...ವಾದಿಗಳು ಬೇಕಾಬಿಟ್ಟಿ ದೂರು ಕೊಟ್ಟಿದ್ದೇ ಬಂತು. ...ಸೆಯ ಪ್ರಯೋಜನವಾಗಲಿಲ್ಲ ಆದರೆ ಇನ್‌ಕಂ ...ಇಲಾಖೆ ಮಾತ್ರ ಸದ್ದಿಲ್ಲದೇ ಈತನ ದರೋಡೆಯ ...ಕಣ್ಣಿಟ್ಟಿತ್ತು.

...07ರ ಜೂನ್ 26ರಂದು ಮಹೇಂದ್ರನ ಕಚೇರಿ, ...ಗರದ ಮನೆ, ಡಾಲರ್ಸ್ ಕಾಲನಿಯಲ್ಲಿನ ಆತನ ...ಯೊಬ್ಬಳ ಬಂಗಲೆಯ ಮೇಲೆಲ್ಲ ಇನ್‌ಕಂ ಟ್ಯಾಕ್ಸ್ ...ಯಿತು. ಮೊದಲೇ ಹುಷಾರಾಗಿ ತನ್ನ ಪಾಪದ ...ಂದು ಗತಿಕಾಣಿಸಿದ್ದ ಮಹೇಂದ್ರ ಅಷ್ಟಾಗ್ಯೂ ಇನ್‌ಕಂ ...ಅಧಿಕಾರಿಗಳಿಗೆ ಸಿಕ್ಕುಬಿದ್ದಿದ್ದ. ಜಯನಗರದ ಆತನ ...ೀ ಒಂದೂವರೆ ಕೋಟಿ ಬೆಲೆ ಬಾಳುತ್ತಿತ್ತು. ಆದನ್ನು ...61 ಲಕ್ಷಕ್ಕೆ ಖರೀದಿಸಿದ್ದೇನೆಂದು ಸುಳ್ಳು ದಾಖಲೆ ... ವಿಚಿತ್ರವೆಂದರೆ ಈ ಮನೆಗೆಂದು ಆಂಧ್ರ ಮೂಲದ ...ಬಲ್ ಡೆವಲಪರ್ಸ್ ಎಂಬ ರಿಯಲ್ ಎಸ್ಟೇಟ್ ...ಯಿಂದ 20 ಲಕ್ಷದಷ್ಟು ಸಾಲಪಡೆದಂತೆ ಕತೆ ಕಟ್ಟಿದ್ದ!

### ...ರೆಡ್ಡಿ ಜೊತೆ ಫಾರಿನ್ ಟೂರ್!

...ಕೀಕತ್ತೆಂದರೆ ಇದೇ ರಿಲಯೇಬಲ್ ಡೆವಲಪರ್ಸ್ ...ಯ ಧಣಿ ಹೆಚ್.ಪಿ.ರಾಮರೆಡ್ಡಿ ಎಂಬಾತ ಮಹೇಂದ್ರನ ...ಯ ರಿಲಯಲ್ ಎಸ್ಟೇಟ್ ದಂಧೆಯ ಪಾಲುದಾರ ... ರಾಮರೆಡ್ಡಿಯಿಂದ ಮತ್ತೆ 18 ಲಕ್ಷ ಸಾಲ ಪಡೆದ ... ಸೃಷ್ಟಿಸಿದ್ದ ಮಹೇಂದ್ರ ತನ್ನ ಐಷಾರಾಮಕ್ಕಾಗಿ ... ದುಡ್ಡಿನಲ್ಲಿ ಪ್ರತಿಷ್ಠಿತ ಗಾಲ್ಫ್ ಕ್ಲಬ್‌ನ ಸದಸ್ಯತ್ವ ...ಂಡಿದ್ದ. ಲಕ್ಷ್ಮಣ ರೆಡ್ಡಿ ಎಂಬ ಮತ್ತೊಬ್ಬ ಆಂಧ್ರದ ...ನಿಂದ ಮತ್ತೆ 53 ಲಕ್ಷದಷ್ಟು ದುಡ್ಡು ಬಂದಂತೆ ...ದು ಕತೆ ಕಟ್ಟಿದ್ದ. ಅಸಲಿಗೆ ಈ ಲಕ್ಷ್ಮಣರೆಡ್ಡಿ ಬೇರೆ ... ಅಲ್ಲ, ಸ್ವತಃ ರಾಮರೆಡ್ಡಿಯ ತಮ್ಮ!

...ಯೇಬಲ್ ಧಣಿಗಳಾದ ರೆಡ್ಡಿಗಳಿಗೂ ಮಹೇಂದ್ರ ... ಏನು ಸಂಬಂಧ? ಎಂದು ಕೆದಕುತ್ತಾ ಹೊರಟ ... ಟ್ಯಾಕ್ಸ್ ಅಧಿಕಾರಿಗಳಿಗೆ ನಿಜಕ್ಕೂ ಅಚ್ಚರಿಯೆನಿಸಿದ್ದು ...ದ್ರನ ಪತ್ನಿ ಲತಾ ಎಂಬಾಕೆ ರಾಮರೆಡ್ಡಿಯ ...ಬಲ್ ಡೆವಲಪರ್ಸ್ ಕಂಪೆನಿಗೆ ನಿಗೂಢ ಪಾಲುದಾರ ...!

...ತ್ನಿ ಲತಾ ಜೊತೆ ರಾಮರೆಡ್ಡಿ ಬ್ರದರ್ಸ್ ಅನ್ನು ...ನರುಗಳಾಗಿ ಮಾಡಿಕೊಂಡಿದ್ದ ಮಹೇಂದ್ರ ವೈಟ್ ... ಒಂದರಲ್ಲೇ ನೂರೈವತ್ತು ಎಕರೆಗಳಷ್ಟು ಜಮೀನು ...ಸಿದ್ದ. ಇದಲ್ಲದೇ ದೇವನಹಳ್ಳಿ ಏರ್‌ಪೋರ್ಟ್ ...ುತ್ತ ಇನ್ನೂ ಐವತ್ತೆಕರೆ ಕೊಂಡು ಅಲ್ಲಿ ಅಪಾರ್ಟ್‌... ಕಟ್ಟಲು ಹವಣಿಸುತ್ತಿದ್ದ. ಇದೇ ರಿಲಯೇಬಲ್ ...ಾದ ರಾಮರೆಡ್ಡಿ ಮತ್ತು ಲಕ್ಷ್ಮಣರೆಡ್ಡಿ ಜೊತೆ ಪದೇಪದೆ ...ೂರ್, ಬ್ಯಾಂಕಾಕ್‌ಗೆ ಹೋಗಿ ಬಂದಿದ್ದ. ಬ್ಯಾಂಕಾಕ್ ...ೇಳಿ ವಿಶ್ವದ ಸೆಕ್ಸ್ ಟೂರಿಸಂನ ರಾಜಧಾನಿ.

...ೀಗೆ ಇನ್‌ಕಂ ಟ್ಯಾಕ್ಸ್ ರೇಡಾಗಿಯೂ, ಪದೇಪದೆ ...ದ್ದು ಇಲಾಖಾ ತನಿಖೆಗೆ ಒಳಪಟ್ಟೂ ಈಗ ಮತ್ತೆ ...ಆರ್‌ಡಿಎಗೆ ವಕ್ಕರಿಸಿರುವ ಮಹೇಂದ್ರನನ್ನು ...ಮಂತ್ರಿ ಕಚೇರಿಯೇ ಪೋಷಿಸುತ್ತಿದೆಯೆಂದರೆ ಅದು ...ತವಲ್ಲದೇ ಮತ್ತೇನು? ಬೆಂಗಳೂರಿನ ಭವಿಷ್ಯಕ್ಕೆ ...ಬಿಟ್ಟವನ ಕೈಗೆ ಮತ್ತೆ ಬಿಎಂಆರ್‌ಡಿಎ ಕೊಟ್ಟರೆ ...ಂತಿಯಲ್ಲದೇ ಬೇರೇನು ನಡೆಯಲು ಸಾಧ್ಯ? ...ರು ಎಕರೆ ಸರ್ಕಾರಿ ಭೂಮಿ ದೋಚಿದವನಿಗೆ ... ಇಲ್ಲವೇ?

• ರಾ. ಸೋಮನಾಥ್

ra.somanath2010@gmail.com

# "ನಿಮ್ಮ ದಂಧೆಗೆ ಇದೇ ಸರಿಯಾದ ಗೆಟಪ್ಪು ಸಾರ್"

**ಥೂತ್ತೇರಿ**

ಯಾಹೂ

ಅದೊಂದು ಕಾಲ. ಆ ಕಾಲದಲ್ಲಿ ಊರ ಮೇಲೆ ದಂಡೆತ್ತಿ ಬರುತ್ತಿರುವ ಸೈನ್ಯ ಅಥವಾ ದಾಳಿಕೋರರನ್ನು ಹೆದರಿಸಲು ಸಂಬಂಧಪಟ್ಟವರು ಸಕಲ ಸಿದ್ಧತೆ ಮಾಡಿಕೊಂಡು ತಯಾರಾಗುತ್ತಿದ್ದರಂತಲ್ಲಾ, ಆದರೆ ಈ ಆಧುನಿಕ ಕಾಲದಲ್ಲಿ ಬಳ್ಳಾರಿ ಪ್ರಾಂತ್ಯದ ಡಾನ್ ರಾಮುಲು ಸೈನ್ಯ ಕಟ್ಟಿರುವುದಲ್ಲದೆ, ಬಳ್ಳಾರಿಗೆ ಬರುತ್ತಿರುವ ಕಾಂಗ್ರೆಸ್ ಪಾದಚಾರಿಗಳಿಗೆ ಹೆದರಿ ತಲೆ ಬೋಳಿಸಿಕೊಂಡು ಅಮ್ಮ ಹೋಗಿಬುಟ್ಟ ಗೆಟಪ್ಪಿನಲ್ಲಿ ಡಲ್ಲಾಗಿರುವುದೇಕೆಂದು ಕೇಳಬೇಕೆನಿಸಿತಲ್ಲಾ. ಆ ಕೂಡಲೇ ಫೋನ್ ಮಾಡಲಾಗಿ ಸಿಕ್ಕಿದರು.

ರಿಂಗ್ ಟೋನ್: "ಜಗ್ಗುಕಲ್ಲು ಮಂಟುಂಡಿ, ಜಗ್ಗುಕಲ್ಲು ಮಂಟುಂಡಿ...."

"ಹಲೋ ಯಾರು?"

"ನಾನು ಪತ್ರಕರ್ತ ಸಾರ್, ಯಾಹೂ ಅಂತ. ಒಂದೆರಡು ಪ್ರಶ್ನೆ ಕೇಳಬೇಕಲ್ಲ."

"ಕೇಳಿ ಅದಕೇನು."

"ಇದ್ದಕ್ಕಿದ್ದಂಗೆ ತಲೆ ಬೋಳಿಸಿಕೊಂಡು ಗೆಟಪ್‌ನೆ ಚೇಂಜ್ ಮಾಡಿಕೊಂಡ್ರಲ್ಲ ಸಾರ್?"

"ನೋಡಿ, ನಮ್ಮ ಬಳ್ಳಾರಿ ಸುಂದರವಾದ ಒಂದು ನಗರ. ಈ ಒಂದು ನಗರದಲ್ಲಿ ನಾನು ಸುಂದರವಾದ ಮಂತ್ರಿಯಾಗಿದ್ದೆ. ನಾನು ಸುಂದರವಾಗಿದ್ದೆ ಅಂತೇಳಿ ನನ್ನ ಫೋಟೋನ ಆಂಬುಲೆನ್ಸ್ ಮೇಲೆ ಕೂಡ ಹಾಕಿಸಿದ್ದೆ. ಆದ್ರೆ ಈ ಕಾಂಗ್ರೆಸ್ಸಿನವರ ಕೆಟ್ಟ ಕಣ್ಣು ನನ್ನ ಮೇಲೆ ಕೂಡ ಬಿದ್ದಿದೆ. ಅವರು ಬಳ್ಳಾರಿಗೆ ಬಂದಾಗ ಇಲ್ಲಿ ಯಾವುದೂ ಸುಂದರವಾಗಿ ಕಾಣಬಾರದು. ಅದ್ಕೆ ನಾನು ತಲೆ ಬೋಳಿಸಿಕೊಂಡು, ಕಪ್ಪು ಬಟ್ಟೆ ಹಾಕಿದ್ದು."

"ಸಾರ್, ನೀವು ಸುಂದರವಾಗಿದ್ದಿರಿ, ಬಳ್ಳಾರಿ ಸುಂದರವಾದ ನಗರ ಅಂತ ಯಾರು ಹೇಳಿದ್ದು ನಿಮಗೆ?"

"ಯಾರು ಯಾಕೆ ಹೇಳಬೇಕು, ನನಗೇ ಗೊತ್ತಾಗಲ್ವ?"

"ಅದೇನಾದ್ರು ಆಗ್ಲಿ, ನೀವು ಈಗ್ಲೆ ಸಾರ್ ಚೆನ್ನಾಗಿ ಕಾಣ್ತಾಯಿರದು. ನಿಮ್ಮನ್ನ ನೋಡಿದ್ರೆ ಯಾರಾದ್ರು ಹೆದರತರೆ ಸಾರ್."

"ಯಾಕೆ ಹೆದರತರೆ? ನಾನೇನು ದೆವ್ವನ?"

"ದೆವ್ವ ಅಲ್ಲ ಸಾರ್. ಥೇಟ್ ದೊಂಗನ ತರ ಕಾಣ್ತಿರಿ. ಅದಕ್ಕಿಂತ್ಲೂ ಹಿಂದಿ ಸಿನುಮದಲ್ಲಿ ವಿಲ್ಲನ್‌ಗಳಿಗೆ ಇದೇ ವೇಷ ಹಾಕದು. ಅವುರೇನು ಮಾಡ್ತರೆ ಅಂದ್ರೆ, ತಮ್ಮ ವೈರಿಗಳ ಮೇಲೆ ಲಾರಿ ಹತ್ತಿಸಿಬಿಡ್ತರೆ. ಆಮೇಲೆ ಕೈನೆ ಕತ್ತರಿಸಿ ಹಾಕಬಿಡ್ತರೆ. ತಮ್ಮದೇ ಆದ ಯಂತದೊ ಫ್ಯಾಕ್ಟರಿ ಮಿಷನ್ ಹಾಕಿ ಸಾಯಿಸಿಬಿಡ್ತರೆ. ಇನ್ನೊಂದು ವಿಷಯ ಗೊತ್ತ? ಯಾವುದೊ ಲಾರಿಯಿಂದ ಅಥವಾ ಟ್ರಕ್‌ನಿಂದ ಸೂಟ್‌ಕೇಸ್ ತಂದು ತನ್ನ ಕಾರಲ್ಲಿ ಇಟ್ಕುಕೊಳ್ಳನಲ್ಲ, ಅವುರೆಲ್ಲಾ ಹಾಕದು ಇದೇ ಡ್ರಸ್ಸು ಸಾರ್."

"ಈ ಡ್ರಸ್ಸು ನನಗೆ ಚನ್ನಾಗಿ ಕಾಣ್ತದ?"

"ಕಾಣ್ತದ ಅಂತ ಕೇಳ್ತಿರ? ನೀವು ಮಾಡೋ ದಂಧೆಗೆ ಇದೇ ನಿಜವಾದ ಡ್ರಸ್ಸು. ಅಂಗೆ ಅಮರೀಶ್‌ಪುರಿ ಅಂಗರಕ್ಷಕ ನಂಗೆ ಕಾಣ್ತಿರಿ ಸಾರ್."

"ಅಮರೀಶ ಪುರಿ ಒಳ್ಳೆ ಆಕ್ಟರಲ್ಲವೆ?"

"ಹೌದು ಸಾರ್. ಅವುರಿಲ್ದೆಯಿರೋದ್ರಿಂದ ನೀವು ಮನಸು ಮಾಡಬಹುದು. ಅದರಲ್ಲೂ ನಿಮ್ಮ ತಲೆ ಹಿಂದಿರೊ ಕುಡುಗೋಲಿನ ಏಟದೆಯಲ್ಲಾ, ಅದಂತೂ ನಿಮಗಿನ್ನೂ ಗೆಟಪ್ ಕೊಟ್ಟದೆ. ನಿಜಕ್ಕೂ ಈ ಕನ್ನಡ ಸಿನುಮದ ಡೈರೆಕ್ಟರು ಈಗ್ಲಾದ್ರು ನಿಮ್ಮನ್ನ ನೋಡಿ ಬಂದು ಮಾತನಾಡಸ್ ಬೇಕು ಸಾರ್. ಯಾಕಂದ್ರೆ ಕನ್ನಡ ಸಿನಿಮಾ ರಂಗ ವಿಲ್ಲನ್‌ಗಳ ಕೊರತೆಯಿಂದ ನರಳತಾಯಿದೆ."

"ಸಿನಿಮಾಕ್ಕೆ ನಾನು ಈಗ್ಲೆ ಬರಲ್ಲ. ರಾಜಕಾರಣದಲ್ಲಿ ತುಂಬಾ ಕೆಲಸ ಇದೆ."

"ರಾಜಕಾರಣದಲ್ಲಿ ನಿಮಗೇನು ಕೆಲಸ ಸಾರ್? ಆ ಸಿದ್ದರಾಮಯ್ಯ ಬೇರೆ ನೀವು ರಾಜಕಾರಣಿನೆ ಅಲ್ಲ ಅಂದವುರೆ."

"ಅವರನ್ನ ನಂತರ ವಿಚಾರಿಸಿಕೊಳ್ತಿನಿ."

"ಅವರು ಬಳ್ಳಾರಿಗೆ ಬಂದ್ರೆ ಸಭೆಗೆ ಶಾಮಿಯಾನ ಹಾಕಿಸಿಕೊಡ್ತಿನಿ ಅಂದಿದ್ರಲ್ಲ ಸಾರ್?"

"ಶಾಮಿಯಾನ ಅಲ್ಲ, ನಮ್ಮ ಸುಂದರವಾದ ಬಳ್ಳಾರಿಯಿಂದ ಒಂದು ಲೋಟ ನೀರು ಕೂಡ ಕೊಡಲ್ಲ ಅವರಿಗೆ. ಬಳ್ಳಾರಿಗೆ ಕೆಟ್ಟ ಹೆಸರು ತಂದುಬಿಟ್ರು. ಇವತ್ತು ಬಳ್ಳಾರಿ ಅಂದ್ರೆ ಕೆಟ್ಟ ಊರು, ಅಕ್ರಮ ಗಣಿಗಾರಿಕೆ ಊರು, ಇಲ್ಲಿ ಇರುವರೆಲ್ಲಾ ಕೆಟ್ಟ ಜನಗಳು ಅಂತ ಆರುಕೋಟಿ ಕನ್ನಡಿಗರು ಭಾವನೆ ಮಾಡೋತರದಲ್ಲಿ ಬಂದು ಇದು ಮಾಡಿದಾರೆ. ಅದನೆಲ್ಲಾ ಹೋಗಲಾಡಸೋದಕ್ಕೆ, ಅಮ್ಮ ಬರ್ತರೆ, ವರಲಕ್ಷ್ಮಿ ಪೂಜೆ ಮಾಡ್ತರೆ, ಅಷ್ಟರಲ್ಲಿ ನಾನು ಬಳ್ಳಾರಿಯಲ್ಲಿ ಪಾದಯಾತ್ರೆ ಮಾಡ್ತೆನೆ."

"ಪಾದಯಾತ್ರೆ ಸರಿ, ಹಾಸ್ಯಾಸ್ಪದವಾದ ವ್ರತ ಯಾಕೆ?"

"ವ್ರತದಲ್ಲಿ ಹಾಸ್ಯ ಮಾಡ್ತಯಿಲ್ಲ. ವ್ರತ ಮುಗಿಯೋವರಿಗೂ ದವಸ ಧಾನ್ಯ ತಿಂತಿನಿ."


"ದವಸ ಅಂದ್ರೆ ಅಕ್ಕಿ, ರಾಗಿ, ಗೋದಿ, ಜೋಳ ಧಾನ್ಯ ಅಂದ್ರೆ ಬೇಳೆ, ಕಡಲೆ, ಅವರೆ, ಅಲಸಂದೆ ಸಾರ್. ಅಲ್ಲಿಗೆ ಸರಿಯಾದ ಊಟನೆ ಆಯ್ತಲ್ಲ."

"ಬರೀ ಕಾಳು ತಿಂತಿನಿ."


"ಏನು ಕಾಳು ಸಾರ್?"

"ಕಡಲೆಕಾಯಿ, ಗೋಡಂಬಿ, ದ್ರಾಕ್ಷಿ, ಉತ್ತುತ್ತೆ."

"ಥೂತ್ತೇರಿ!!!"



# ನೆರೆ ಪರಿಹಾರ ಹಣ ಗುಳುಂ 'ಮನೆ ಕಟ್ಟಿಸಲ್ಲ' ಅಂದ ಕರುಣಾಕರ ರೆಡ್ಡಿ



ಕೆಲವರಿರುತ್ತಾರೆ....

ಉಚ್ಚೆಯಲ್ಲೂ ಮೀನು ಹಿಡಿಯಲು ಪ್ರಯತ್ನಿಸುವ ಜನ....

ಗಣಿ ವಂಚಕ ಕರುಣಾಕರ ರೆಡ್ಡಿಯನ್ನು ಯಾವುದೇ ಮುಲಾಜಿಲ್ಲದೆ ಈ ಲಿಸ್ಟಿಗೆ ಈಗ ಸೇರಿಸಬೇಕಿದೆ.

ಮೊನ್ನೆ ಈ ರೆಡ್ಡಿ ಪತ್ರಕರ್ತರೊಂದಿಗೆ ಮಾತನಾಡುತ್ತಾ "ನೆರೆ ಸಂತ್ರಸ್ತರಿಗೆ ಮನೆ ಕಟ್ಟಿಸಿಕೊಡುತ್ತೇವೆ ಅಂತ ನಾನೆಲ್ಲಿ ಹೇಳಿದ್ವೆ ನಾನು ಹಾಗೆ ಹೇಳೇ ಇಲ್ಲ ಹೋಗ್ರಿ... ರೀ..." ಅಂತ ಹೇಳಿದ್ದಾನೆ.

ಇವರು ಹೊಟ್ಟೆಗೆ ನಿಜಕ್ಕೂ ಏನು ತಿನ್ನುತ್ತಾರೆ ಎಂದು ಕರ್ನಾಟಕದ ಜನ ಕೇಳುತ್ತಿದ್ದಾರೆ.

ಏಕೆಂದರೆ

ಈಗ್ಗೆ ಕೇವಲ 8 ತಿಂಗಳ ಹಿಂದೆ ಇದೇ ಕರುಣಾಕರ ರೆಡ್ಡಿ ಬಳ್ಳಾರಿಯ ಮಾತೂರು ಹಾಗೂ ಕೊಡ್ಲೂರಿನಲ್ಲಿ 'ನವಗ್ರಾಮ' ಯೋಜನೆಯಡಿ ಭೂಮಿಪೂಜೆ ಮಾಡಿದ್ದ.

2009ರ ಅಕ್ಟೋಬರ್ 27ರಂದು ಈ ಕಾರ್ಯಕ್ರಮ ನಡೆಯಿತು. ಆ ದಿನ ಕರುಣಾಕರ ರೆಡ್ಡಿ ಮೀಡಿಯಾಗಳೆದುರು "ನಮಗೆ ಸರ್ಕಾರದ ಹಣ ಬೇಕಿಲ್ಲ, ನಾವೇ 500 ಕೋಟಿ ರೂಪಾಯಿ ಖರ್ಚು ಮಾಡಿ 50 ಸಾವಿರ ಮನೆ ಕಟ್ಟಿಸಿಕೊಡುತ್ತೇವೆ" ಅಂದಿದ್ದ. ಇದು ರಾಜ್ಯದ ಎಲ್ಲಾ ಪತ್ರಿಕೆ ಹಾಗೂ ಟಿವಿ ಚಾನೆಲ್‌ಗಳಲ್ಲೂ ಪ್ರಸಾರವಾಗಿತ್ತು. ಅವತ್ತು ಸಾರ್ವಜನಿಕವಾಗಿ ಈ ಮಾತು ಹೇಳಿದ್ದ ರೆಡ್ಡಿ ಇವತ್ತು ಬೇರೇನನ್ನೋ ಬೊಗಳುತ್ತಿದ್ದಾನೆ ಅಂದರೆ ಏನರ್ಥ? ಇವನದೇನು ನಾಲಿಗೆಯಾ ಇಲ್ಲ....?

ಇಷ್ಟು ಕಟು ಮಾತುಗಳನ್ನು ಆಡಬೇಕಾಗಿ ಬಂದದ್ದು ಬೇರಿನ್ಯಾವ ಕಾರಣಕ್ಕೂ ಅಲ್ಲ, ಬಳ್ಳಾರಿಯ ಗಣಿ ಕಳ್ಳರ ಹೊಲಸು ರಾಜಕೀಯಕ್ಕೆ ಇದುವರೆಗೂ ಬಿಜೆಪಿ ಪಕ್ಷ ಹಾಗೂ ಯಡಿಯೂರಪ್ಪ ಮಾತ್ರ ಬಲಿಯಾಗುತ್ತಿದ್ದರು. ಆದೀಗ ಲಕ್ಷಾಂತರ ಮಂದಿ ಪ್ರವಾಹ ಸಂತ್ರಸ್ತರ ಬದುಕನ್ನು ಅತಂತ್ರ ಮಾಡುವ ನೀಚತನದತ್ತ ಸಾಗುತ್ತಿರುವುದರಿಂದ.

ಈ ಯಡ್ಡಿ-ರೆಡ್ಡಿಗಳ ನಡುವೆ 2009ರ ಅಕ್ಟೋಬರ್-ನವೆಂಬರ್‌ನಲ್ಲಿ ನಡೆದ ಬೀದಿ ಜಗಳದಲ್ಲಿ ಇದೇ ನೆರೆ ಸಂತ್ರಸ್ತರನ್ನೇ ನೆಪವಾಗಿ ಬಳಸಿಕೊಳ್ಳಲಾಗಿತ್ತು. ನೊಂದ ಜನರಿಗೆ ನೆರವಾಗಲು, 'ನಾ ಮುಂದು, ತಾ ಮುಂದು' ಎಂದು ಪೋಜು ಕೊಟ್ಟಿದ್ದರು. ಈಗ ಇದೇ ಬಿಜೆಪಿಗಳೇ ಜನರಿಗೆ ಬೆನ್ನು ತಿರುಗಿಸಿಬಿಟ್ಟಿದ್ದಾರೆ. ಯಡಿಯೂರಪ್ಪ ನೆರೆಪೀಡಿತ ಜನರನ್ನು ಮರೆತು ಯಾವುದೋ ಕಾಲವಾಗಿದೆ. ಈ ನೊಂದ ಜನರಿಗೆಂದು ಬೆಂಗಳೂರಿನಲ್ಲಿ ಜನರಿಂದ ಸಂಗ್ರಹಿಸಿದ್ದ 600 ಕೋಟಿ ರೂಪಾಯಿಗಳನ್ನು ಆರೆಸ್ಸೆಸ್ ದೇಶಭಕ್ತರು ತಿಂದು ಹಾಕಿದ್ದಾರೆ. ಈಗ ನೋಡಿದರೆ ಕಂದಾಯ ಮಂತ್ರಿಯಾಗಿರುವ ಕರುಣಾಕರ ರೆಡ್ಡಿ, 'ನಾನು ನೆರೆ ಸಂತ್ರಸ್ತರಿಗೆ ಮನೆ ಕಟ್ಟಿಸಿಕೊಡುತ್ತೇನೆ ಅಂತ ಹೇಳಿರಲೂ ಇಲ್ಲ, ಮನೆ ಕಟ್ಟಿಸುವುದೂ ಇಲ್ಲ' ಎನ್ನುತ್ತಿದ್ದಾನೆ.



ಆದರೆ ಮನೆ ನಿರ್ಮಾಣದ ಹೆಸರಿನಲ್ಲಿ ಬಳ್ಳಾರಿಯ ಗಣಿ ಮಾಲೀಕರಿಂದ ಹಾಗೂ ಉದ್ದಿಮೆದಾರರಿಂದ ರೆಡ್ಡಿಗಳು ಕಿತ್ತಿರುವ ನೂರಾರು ಕೋಟಿ ರೂಪಾಯಿ ಎಲ್ಲಿಗೆ ಹೋಯಿತು?

## ರೆಡ್ಡಿ ಗ್ಯಾಂಗ್ ಅದನ್ನೂ ನುಂಗಿ ಹಾಕಿದೆಯಾ?

ಈ ಅನುಮಾನ ಈಗ ಯಾಕೆ ಬರುತ್ತಿದೆಯೆಂದರೆ ರೆಡ್ಡಿಗಳು 50 ಸಾವಿರ ಮನೆ ಕಟ್ಟಿಸಲು ದೇಣಿಗೆ ಸಂಗ್ರಹಿಸುವುದಾಗಿ ಘೋಷಿಸಿದ್ದರು. ಹಾಗೆಂದ ಮೇಲೆ ಅವರು ಕಲೆಕ್ಟ್ ಮಾಡಿರುವ ಹಣದ ಲೆಕ್ಕ ಕೊಡಬೇಕಲ್ಲವೇ?

ಅಥವಾ ಈ ಗ್ಯಾಂಗು ಈ ಹಿಂದೆ 'ಎನೋಬೆಲ್ ಇಂಡಿಯಾ' ಎಂಬ ಫೈನಾನ್ಸ್ ಕಂಪೆನಿ ಮಾಡಿ ಬಳ್ಳಾರಿ ಜನರಿಗೆ ಉಂಡೆನಾಮ ಹಾಕಿದಂತೆ ಈಗಲೂ ನೆರೆ ಪರಿಹಾರದ ಹಣವನ್ನು ಕದ್ದು ಬಿಟ್ಟರಾ ಎಂಬ ಅನುಮಾನ ಬಾರದಿರದು.

## ಅವತ್ತು ಜಗಳ ಆಡಿದ್ದು ಯಾಕೆ?

2009ರ ಸೆಪ್ಟೆಂಬರ್-ಅಕ್ಟೋಬರ್ ಹಾಗೂ ನವೆಂಬರ್‌ನಲ್ಲಿ ನಡೆದ ಬಿಜೆಪಿ ಒಳಜಗಳಗಳನ್ನು ಒಮ್ಮೆ ನೆನಪು ಮಾಡಿಕೊಳ್ಳಿ.

ಸೆಪ್ಟೆಂಬರ್ 30ರಿಂದ ಅಕ್ಟೋಬರ್ 2ರತನಕ ಬಿಟ್ಟೂಬಿಡದೆ ಸುರಿದ ಮಳೆಯಿಂದ ರಾಜ್ಯಾದ್ಯಂತ 200 ಮಂದಿ ಸತ್ತರು. 5 ಲಕ್ಷ ಮನೆಗಳು ನಾಶವಾಗಿ 20 ಲಕ್ಷ ಮಂದಿ ನಿರಾಶ್ರಿತರಾಗಿದ್ದರು. ಈ ಅನಾಹುತದ ಮೊತ್ತ 20 ಸಾವಿರ ಕೋಟಿ ರೂಪಾಯಿ ಎಂದು ಅಂದಾಜು ಮಾಡಲಾಗಿತ್ತು. ಆಗ ನೊಂದ ಜನರ ನೆರವಿಗೆ ಹೋಗಬೇಕಿದ್ದ ಯಡ್ಡಿ ಕೇಂದ್ರ ಸರ್ಕಾರ ಸಾಕಷ್ಟು ಪರಿಹಾರ ಕೊಡುತ್ತಿಲ್ಲ ಎಂದು ಕೆಲ ದಿನ ಗೊಣಗಾಡುತ್ತಾ ಕಾಲ ಕಳೆದರು. ಕೊನೆಗೆ ಕೇಂದ್ರ ಸರ್ಕಾರ 6700 ಕೋಟಿ ರೂಪಾಯಿ ಕೊಡಬೇಕೆಂತಲೂ ಕೇಳಿದರು. ಈ ಬಾಬ್ತಿನಲ್ಲಿ 500 ಕೋಟಿ ರೂಪಾಯಿಯಷ್ಟು ಹಣ ಬಂತು. ಜೊತೆಗೆ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕರ್ನಾಟಕಕ್ಕೆ ನೀಡಿದ್ದ ಮೂರೂವರೆ ಸಾವಿರ ಕೋಟಿ ರೂಪಾಯಿಗಳನ್ನು ನೆರೆ ಪರಿಹಾರ ಕಾಮಗಾರಿಗಳಿಗೆ ಉಪಯೋಗಿಸಬಹುದು ಎಂಬ ಅನುಮತಿಯೂ ಕೇಂದ್ರ ಸರ್ಕಾರದಿಂದ ಸಿಕ್ಕಿತ್ತು. ಈ ಮಧ್ಯೆ ಬೆಂಗಳೂರಿನ ಬೀದಿಬೀದಿಗಳಲ್ಲಿ ಸುತ್ತಿದ ಯಡ್ಡಿ ಗ್ಯಾಂಗ್ 600 ಕೋಟಿ ರೂಪಾಯಿ ಸಂಗ್ರಹಿಸಿದ್ದೇವೆಂತಲೂ ಹೇಳಿಕೊಂಡಿತ್ತು. ಇದೆಲ್ಲ ಒಟ್ಟು ಸೇರಿದರೆ ನಾಲ್ಕೂವರೆ ಸಾವಿರ ಕೋಟಿ ಆಯಿತಲ್ಲವೇ?

ಈಗ ಇಷ್ಟು ಹಣ ಎಲ್ಲಿಗೆ ಹೋಯಿತು ಎಂದು ಕೇಳಿದರೆ ಸಾಕ್ಷಾತ್ ಯಡಿಯೂರಪ್ಪನೇ 'ಗೊತ್ತಿಲ್ಲ' ಅನ್ನುತ್ತಿದ್ದಾರೆ!

ಈ ವಿಪರ್ಯಾಸಕ್ಕೆ ಏನನ್ನೋಣ?

ಈ ಮಧ್ಯೆ ಗದಗ ಜಿಲ್ಲೆಗೆ ಹೋದ ಯಡ್ಡಿ ನೆ ಸಹಾಯ ಕಾರ್ಯವನ್ನು ಸರಿಯಾಗಿ ನಡೆಸಲಿಲ್ಲವೆಂದ ಜಿಲ್ಲಾಧಿಕಾರಿ ಪ್ರಸಾದರನ್ನು ನಿಂತ ಹೆಜ್ಜೆಯಲ್ಲೇ ಟ್ರಾನ್ಸ್‌ಫರ್ ಮಾಡಿಬಿಟ್ಟರು.

ಆದೇ ಕ್ಷಣದಲ್ಲೇ ಯಡ್ಡಿ ವಿರುದ್ಧ ರೆಡ್ಡಿಗಳು ಬಂಡಾಯ ಶುರುಮಾಡಿಬಿಟ್ಟರು. ಡಜನ್‌ಗಟ್ಟಲೇ ಶಾಸಕರನ್ನು ಗೋವ ಹೈದರಾಬಾದ್ ರೆಸಾರ್ಟುಗಳಿಗೆ ಕರೆದೊಯ ಬಿಟ್ಟಿಟ್ಟಿದ್ದೇನು, ಯಡಿಯೂರಪ್ಪರನ್ನು 'ಕಂಸ, ಹಿರಣ್ಯಕಶಿಪ ಎಂದು ಬೈದಿದ್ದೇನು? ಒಂದಾ ಎರಡಾ ಈ ರೆಡ್ಡಿಗ ಆಡಿದ ಆಟ?

ಆದೇ ಗದ್ದಲದಲ್ಲೇ ರೆಡ್ಡಿ ಗ್ಯಾಂಗ್ ನೆರೆ ಸಂತ್ರಸ್ತರಿ ತಾವೆಲ್ಲಾ ಹಣ ಹಾಕಿ 50 ಸಾವಿರ ಮ ಕಟ್ಟಿಸಿಕೊಡುವುದಾಗಿ ಹೇಳಿಕೊಂಡಿತ್ತು. ಇವತ್ತು ಕರುಣಾ ರೆಡ್ಡಿ 'ನಾನು ಹಾಗಂತ ಹೇಳಿರಲೇ ಇಲ್ಲ' ಅನ್ನುತ್ತಿದ್ದಾನಲ್ ನೀವೇ ಹೇಳಿ ಕರ್ನಾಟಕದ ಜನರಿಗೇನು ಕಿವುಡಾ? ಇ ಕುರುಡಾ? ಆಡಿದ ಮಾತಿನ ಬಗ್ಗೆ ರೆಡ್ಡಿಗಳು ಕಾ ಅನ್ನದಿರಬಹುದು. ಆದರೆ ಜನರ ಪಾಡೇನು?

ಈ ಕರುಣಾಕರ ರೆಡ್ಡಿಗೆ ತಾನು ರಾಜ್ಯದ ಕಂದಾ ಸಚಿವನೆಂಬ ಪರಿಜ್ಞಾನವೂ ಇದ್ದಂತಿಲ್ಲ. ನೆರೆ ಹಾವಳಿ ಸಮಯದಲ್ಲಿ "ಇನ್ನು ಹತ್ತು ದಿನಗಳಲ್ಲಿ ಭೂ ಸ್ವಾಧಿ ಮಾಡಿ 'ನವಗ್ರಾಮ ಯೋಜನೆ' ಶುರುಮಾಡುತ್ತೇನೆ" ಅಂದಿ ಬಳ್ಳಾರಿ, ರಾಯಚೂರು, ಕೊಪ್ಪಳ, ಬಾಗಲಕೋಟೆ, ಗದ ಬಿಜಾಪುರ ಜಿಲ್ಲಾಧಿಕಾರಿಗಳನ್ನು ಕರೆಸಿ ಕೂರಿಸಿಕೊಂ ಮೇಲಿಂದ ಮೇಲೆ ಮೀಟಿಂಗ್ ನಡೆಸಿದ್ದ.

ಹಾಗಾದರೆ ಇದೆಲ್ಲಾ ಸುಳ್ಳಾ?

## ಅಸಲಿ ಕಾರಣ ಏನು?

ನೆರೆ ಸಂತ್ರಸ್ತರಿಗೆ ಮನೆ ಕಟ್ಟಿಸುವ ಯೋಜನೆ ಭೂಮಿ ಪೂಜೆ ಮಾಡಿದ ದಿನ ರೆಡ್ಡಿ ಗ್ಯಾಂಗ್ ಮುಖ್ಯಮ ಯಡ್ಡಿಯನ್ನೇ ಕರೆದಿರಲಿಲ್ಲ, ಸರ್ಕಾರದ ನೆರವಿಲ್ಲದೆ ತಾವು 50 ಸಾವಿರ ಮನೆ ಕಟ್ಟಿಸಿಕೊಡುವುದ ಹೇಳಿಕೊಂಡಿದ್ದರು. ಆಗ ರೆಡ್ಡಿಗಳ ಯೋಜನೆ ಇದ ಬಳ್ಳಾರಿಯ ಇನ್ನಿತರ ಗಣಿ ಉದ್ದಿಮೆದಾರರಿಂದಲೂ ಸಂಗ್ರಹಿಸಿ ಈ ಕೆಲಸ ಮಾಡಬೇಕೆಂಬುದಾಗಿತ್ತು. ಇ

# ಅಯೋಗ್ಯ ಮಂತ್ರಿ ಶ್ರೀರಾಮುಲು!

ಹಾದಿಬೀದಿಯಲ್ಲಿ ರಂಪಾಟ ನಡೆಸುವ ಬೀಡಾಡಿ ರೌಡಿಗಳಿಗೂ ಯಡಿಯೂರಪ್ಪನ ಕ್ಯಾಬಿನೆಟ್ಟಿಗೂ ವ್ಯತ್ಯಾಸ ಇದೆಯಾ ಅಂತೊಂದು ಪ್ರಶ್ನೆ ಕೇಳಿದರೆ, ಕಟ್ಟಾ ಬಿಜೆಪಿಗಳ ಹೊರತಾಗಿ ಮತ್ತೆಲ್ಲರ ಉತ್ತರ 'ಹೌದು' ಅಂತಲೇ ಇರುತ್ತದೆ! ಈ ರೀತಿಯದ್ದೊಂದು ಚರಿತ್ರಾರ್ಹ ದುರಂತಕ್ಕೆ ಆರೋಗ್ಯ ಸಚಿವನೆಂಬ ಆರೋಪ ಹೊತ್ತಿರುವ ಅಯೋಗ್ಯ ಶ್ರೀರಾಮುಲುನ ಕೊಡುಗೆ ದೊಡ್ಡದಿದೆ!


ಒಂದೇ ಒಂದು ಸಾರಿ ನೆನಪಿಸಿಕೊಳ್ಳಿ, ಈ ಅಯೋಗ್ಯ ಆರೋಗ್ಯ ಸಚಿವನಾಗಿ ಬಂದಮೇಲೆ ಏನೇನೆಲ್ಲ ಕಾಯಿಲೆಗಳು ಜನರನ್ನು ಬಾಧಿಸಿದವು. ಎಚ್1 ಎನ್1 ಹೆಸರಿನ ವಿಲಕ್ಷಣ ಜ್ವರ ಒಂದಷ್ಟು ಮಂದಿಯನ್ನು ಆಪೋಶನ ತೆಗೆದುಕೊಂಡಿತು. ಡೆಂಗ್ಯೂ ಜ್ವರ, ಚಿಕೂನ್ ಗೂನ್ಯಾದಂಥ ಸಾಂಕ್ರಾಮಿಕ ಕಾಯಿಲೆಗಳು ಜನರ ಜೀವ ಹಿಂಡಿದವು. ಇಂಥ ಸಂದರ್ಭದಲ್ಲಿ ಶ್ರೀರಾಮುಲು ಯಾವ ತ್ತಾದರೂ ಜವಾಬ್ದಾರಿಯಿಂದ ನಡೆದುಕೊಂಡಿದ್ದಾನ? ಕಾಯಿಲೆ ಪೀಡಿತರನ್ನು ಭೇಟಿಯಾಗಿ ವಿಚಾರಿಸಿ ಕೊಂಡಿದ್ದಾನ? ಜನ ಸಂಕಟದಲ್ಲಿರುವಾಗೆಲ್ಲಾ ಫಾರಿನ್ ಟೂರು, ಗಣಿ ಬ್ಯುಸಿನೆಸ್ಸು ಅಂತ ಅಡ್ಡಾಡಿಕೊಂಡಿದ್ದ ಈ ಆಸಾಮಿ ಇದೀಗ 'ಬಳ್ಳಾರಿಗೆ ಬನ್ರಲೇ ನೋಡ್ಕೋತೀವಿ' ಅಂತ ವಿರೋಧ ಪಕ್ಷಗಳಿಗೆ ಪಂಥಾಹ್ವಾನ ನೀಡಿದ ದುಷ್ಟ ಪಡೆಯ ಸಾರಥ್ಯ ವಹಿಸಿದ್ದಾನೆ!

ಒಂದು ಕಾಲದಲ್ಲಿ ಬಳ್ಳಾರಿಯ ನೆಲದಲ್ಲಿ ಅಕ್ಷರಶಃ ಬೀದಿ ರೌಡಿಯಾಗಿದ್ದವನು ಶ್ರೀರಾಮುಲು. ಆ ಸಂದರ್ಭದಲ್ಲಿ ಈತ ನಡೆಸಿದ ಅನಾಹುತಗಳನ್ನು ಬಳ್ಳಾರಿ ಮಂದಿ ಮರೆತಿರಲಿಕ್ಕಿಲ್ಲ. ಆದರ ಕುರುಹಾಗಿ ಕೆಲ ಕೇಸುಗಳೂ ಶ್ರೀರಾಮುಲನ ಬುಡಕ್ಕೆ ಹಚ್ಚಿಕೊಂಡಿದ್ದವು. ತೀರಾ ಇತ್ತೀಚಿನ ಚುನಾವಣೆಗಳ ಸಂದರ್ಭದಲ್ಲೂ ಕೂಡಾ ಈತ ಹಳೇ ಗೆಟಪ್ಪು ಪ್ರದರ್ಶಿಸಿದ್ದ. ಈ ಸಂಬಂಧ ಚುನಾವಣಾ ಆಯೋಗವೇ ಕೇಸು ಜಡಿದು ಚಾಟಿ ಬೀಸಿತ್ತು. ಆದರೆ ರೆಡ್ಡಿ ಪಡೆಯ ಪ್ರಭಾವ ಬಳಸಿ ಸಂಪುಟ ಸಭೆ ಅನುಮೋದನೆ ಪಡೆದು ತನ್ನ ಮೇಲಿನ ಕೇಸುಗಳನ್ನೆಲ್ಲ ವಾಪಾಸು ಪಡೆದುಕೊಂಡು ಸೇಫಾದ!

ಇಂತಹದೊಂದು ದುರಂತಕ್ಕೆ ಮುಖ್ಯಮಂತ್ರಿ ಯಡಿಯೂರಪ್ಪ ಮುಜುಗರವಿಲ್ಲದೆ ಅಂಕಿತ ಹಾಕಿದರು. ಇದಕ್ಕಾಗಿ ಚುನಾವಣಾ ಆಯೋಗ ಯದ್ವಾತದ್ವಾ ಉಗಿದದ್ದೂ ನಡೆದಿದೆ. ಆದರೆ ಯಡ್ಡಿಗಾಗಲೀ, ಶ್ರೀರಾಮುಲುಗಾಗಲೀ ಇಂಥ ಉಗಿತಗಳೆಲ್ಲ ಮಾಮೂಲಾಗಿ ಹೋಗಿವೆ.

ಆರೋಗ್ಯ ಖಾತೆಯೆಂಬುದು ಮಹತ್ವದ ಘಟಕ. ನಾಡಿನ ಜನರೆಲ್ಲರೂ ಆರೋಗ್ಯದಿಂದಿರುವಂತೆ, ರೋಗ ಬಂದರೂ ಅನಾಹುತ ನಡೆಯದಂತೆ ತಡೆಯುವ ಮಹತ್ವದ ಜವಾಬ್ದಾರಿ ಈ ಖಾತೆಯ ಮೇಲಿದೆ. ಆದರೆ ಯಡ್ಡಿ ಇಂಥಾದ್ದನ್ನು ಶ್ರೀರಾಮುಲುನೆಂಬ ಕೆಲಸಕ್ಕೆ ಬಾರದವನ ಉಡಿಗೆ ಹಾಕಿ ದ್ರೋಹವೆಸಗಿದರು. ಸಮಸ್ಯೆಯ ಆಳಕ್ಕಿಳಿದು ಯೋಚಿಸುವುದಾಗಲಿ, ಬಡಬಗ್ಗರ ಬಗ್ಗೆ ನಿಷ್ಕಲ್ಮಶ ಆದರ ತೋರುವುದಾಗಲಿ ಶ್ರೀರಾಮುಲುನ ಜಾಯಮಾನಕ್ಕೆ ಒಗ್ಗುವ ವಿಚಾರಗಳಲ್ಲ. ಇಂಥಾ ಶ್ರೀರಾಮುಲು 108 ಅಂತ ಆ್ಯಂಬುಲೆನ್ಸ್ ಬಿಟ್ಟು, ಆದರ ಖರೀದಿಯಲ್ಲೊಂದಷ್ಟು ಬಾಚಿಕೊಂಡು ಪುಗಸಟ್ಟೆ ಪ್ರಚಾರ ಪಡಕೊಳ್ಳುತ್ತಿದ್ದಾನೆ.

ಈತ ಖಾತೆಯ ಪರಿಧಿಯಲ್ಲಿ ಒಂದೇ ಒಂದು ಸಾರಿ ಜವಾಬ್ದಾರಿಯಿಂದ ವರ್ತಿಸಿದ ಉದಾಹರಣೆ ಸಿಗುವುದಿಲ್ಲ. ಉತ್ತರ ಕರ್ನಾಟಕದ ಮಂದಿ ನೆರೆಗೆ ಸಿಕ್ಕು ಬದುಕು ಕಳಕೊಂಡು ಗುಡಿಸಲುಗಳಲ್ಲಿ ಬದುಕುತ್ತಿದ್ದಾರೆ. ಕನಿಷ್ಠ ಶುಚಿತ್ವ ಕಾಪಾಡಿಕೊಳ್ಳಲಾಗದ ಹೀನಸ್ಥಿತಿಯಲ್ಲಿದ್ದಾರೆ. ಶ್ರೀರಾಮುಲುನಿಗೆ ಮಾನವೀಯತೆಯಿದ್ದಿದ್ದರೆ ಅಲ್ಲಿಗೆ ಭೇಟಿ



ನೀಡಿ ಪರಿಹಾರ ಹುಡುಕುತ್ತಿದ್ದ. ಆದರೀತನಿಗೆ ಜ ಕಷ್ಟಗಳಿಗಿಂತ ಜೈಲು ಮತ್ತು ಅದರೊಳಗಿನ ರೌಡಿಗ ಇಷ್ಟ!

ಇಂಥ ಅಯೋಗ್ಯನನ್ನು ಆರೋಗ್ಯ ಮಂತ್ರಿ ಅ ಒಪ್ಪಿಕೊಳ್ಳಬೇಕಾಗಿರುವುದು ದೌರ್ಭಾಗ್ಯವಲ್ಲ ಮತ್ತಿನ್ನೇನು?

ರು ವ್ಯಾಪಾರಿಗಳ ಸಮ್ಮತಿಯೂ ಇತ್ತನ್ನಿ. ಎಂ.ಬಿ.ಟಿ. ಪನಿಯ ಅಬ್ದುಲ್ ವಹಾಬ್, ಹೆಚ್.ಆರ್.ಜಿ. ಮೈನಿಂಗ್ ಪನಿಯ ಕೆ.ಶ್ರೀರಾಮುಲು, ಲಾಡ್ ಗುಂಪು ಮುಂತಾದವು ಡೊನೇಷನ್ ನೀಡಲು ಒಪ್ಪಿಕೊಂಡಿದ್ದರು. ದರೆ ಕಳೆದ ತಿಂಗಳು .ಲೋಕಾಯುಕ್ತ ಸಂತೋಷ್ ಹೆಗ್ಡೆ ದೇನಾವೆ ಪ್ರಹಸನ ಸಂಭವಿಸಿದಾಗ ಪರಿಸ್ಥಿತಿ ದಲಾಯಿತು. ವಿಧಾನಮಂಡಲದ ಅಧಿವೇಶನದಲ್ಲಿ ಅಕ್ರಮ ಣಿ ಹಗರಣ ಸ್ಫೋಟಿಸಿದಾಗ ಜನಾರ್ದನ ರೆಡ್ಡಿ ತ್ರಿಕಾಗೋಷ್ಠಿ ನಡೆಸಿ, ಅಬ್ದುಲ್ ವಹಾಬ್, ರಾಮುಲು ಮುಂತಾದವರು ಗಣಿ ಅಕ್ರಮ ನಡೆಸಿದ್ದಾರೆಂದು ಆರೋಪಿಸಿ ವರೆಲ್ಲರ ತಲೆಯ ಮೇಲೆ ಗೂಬೆ ಕೂರಿಸುವ ಕುತಂತ್ರ ಡೆಸಿದ. ಇದರಿಂದ ಸಿಟ್ಟಿಗೆದ್ದ ಉದ್ದಿಮೆದಾರರೆಲ್ಲ ರೆಡ್ಡಿಗಳ ಮದ್ಧ ತಿರುಗಿಬಿದ್ದರು. ಈ ಗದ್ದಲದಲ್ಲೀಗ ನೆರೆ ಸಂತ್ರಸ್ತರಿಗೆ ಮನೆ ಕಟ್ಟಿಸಿಕೊಡಬೇಕೆಂಬ ಸಂಗತಿ ರೆಡ್ಡಿ ಗ್ಯಾಂಗಿಗೆ ಡವಾಗಿದೆ.

ರೆಡ್ಡಿಗಳ ಕೀರ್ತಿ ಬೆಳೆಸಲು ತಾವ್ಯಾಕೆ ಹಣ ಕೊಡಬೇಕೆಂಬ ತರರ ಪ್ರಶ್ನೆಯಿಂದಾಗಿ ಈಗ ರೆಡ್ಡಿಗಳಿಗೆ ಇಕ್ಕಟ್ಟಾಗಿದೆ. ವರೀಗ ಒಂದೊ ತಾವೇ ಪೂರ್ತಿ ಹಣ ಕೈಯಿಂದ ಾಕಿ ಮನೆಗಳನ್ನು ಕಟ್ಟಿಸಬೇಕು. ಇಲ್ಲ ಇಡೀ ವಾಬ್ದಾರಿಯಿಂದ ನುಣುಚಿಕೊಳ್ಳಬೇಕು.

ರೆಡ್ಡಿ ಗ್ಯಾಂಗ್ ತನ್ನ ಅಯೋಗ್ಯತೆಗೆ ತಕ್ಕಂತೆಯೇ ವರ್ತಿಸಿದೆ. 'ಮನೆ ಕಟ್ಟಿಸಿಕೊಡುತ್ತೇವೆಂದು ನಾವು ಹೇಳೇ ಇರಲಿಲ್ಲ' ಂಬಲ್ಲಿಗೆ ಅವರ ಸುಳ್ಳುಬುರುಕುತನ ತಲುಪಿದೆ.

ಅಂದಹಾಗೆ ಜನ ಈಗ ಕರುಣಾಕರ ರೆಡ್ಡಿಯನ್ನು ೇಳಬೇಕಾದ ಪ್ರಶ್ನೆ ಏನೆಂದರೆ:


"ಮನೆ ಕಟ್ಟಿಸಲು ಗಣಿ ವ್ಯಾಪಾರಿಗಳಿಂದ, ಇನ್ನಿತರರಿಂದ ಷ್ಟು ಹಣ ವಸೂಲಿ ಮಾಡಿದ್ದೀಯ? ಮತ್ತು ಆ ನೂರಾರು ೋಟಿ ರೂಪಾಯಿ ಎಲ್ಲಿದೆ?

ಈ ಪ್ರಶ್ನೆಗೆ ಸಚಿವ ಕರುಣಾಕರ ರೆಡ್ಡಿ ಉತ್ತರಿಸಬೇಕಿದೆ.

ಇಲ್ಲದಿದ್ದರೆ ಜನ ಇವನನ್ನು ಕಂದಾಯ ಮಂತ್ರಿ ಅನ್ನುವ ದಲು ಕಳ್ಳ ಮಂತ್ರಿ ಅನ್ನಲು ತಡಮಾಡುವುದಿಲ್ಲ.

• ಪಾರ್ವತೀಶ

bparvateesha@gmail.com




# ಅದಿರು ರಫ್ತು ನಿಷೇಧ ಹುಳುಕು ಮುಚ್ಚುವ ಕಸರತ್ತು!

ಮಾನ್ಯ ಮುಖ್ಯಮಂತ್ರಿಗಳು ಅದಿರು ರಫ್ತು ನಿಷೇಧಿಸಿ ಆದೇಶ ಹೊರಡಿಸಿದ್ದಾರೆ. ತನ್ಮೂಲಕ ವಿರೋಧ ಪಕ್ಷಗಳ ಆರೋಪಗಳಿಂದ ತಪ್ಪಿಸಿಕೊಂಡು, ರೆಡ್ಡಿ ಪಟಾಲಂನ ಹಾರಾಟಗಳಿಗೊಂದು ಟಾಂಗ್ ಕೊಟ್ಟ ಸಂಭ್ರಮ ಯಡ್ಡಿ ಮುಖದಲ್ಲಿ ಲಕಲಕಿಸುತ್ತಿದೆ. ಆದರಿದು ಹುಳುಕು ಮುಚ್ಚುವ ಕಸರತ್ತೆಂಬುದು ಗಣಿಗಾರಿಕೆಯ ಆಳಅಗಲ ಬಲ್ಲವರಿಗೆಲ್ಲಾ ಮನದಟ್ಟಾಗಿದೆ!

ನೆನಪಿರಲಿ, ರಾಜ್ಯದಲ್ಲೀಗ ಕೂಗೆದ್ದಿರುವುದು ಅಕ್ರಮ ಗಣಿಗಾರಿಕೆ ನಿಲ್ಲಿಸುವುದರ ಬಗ್ಗೆ. ಆದರೆ ಗಣಿಗಳ್ಳತನದ ಡಾನ್‌ಗಳಾಗಿ ಮೆರೆಯುತ್ತಿರುವ ರೆಡ್ಡಿ ಪಡೆ ಸರ್ಕಾರದ ಆಯಕಟ್ಟಿನಲ್ಲಿದೆ. ಯಡಿಯೂರಪ್ಪನವರ ನಿಯತ್ತು ಕೂಡಾ ರೆಡ್ಡಿ ಪಡೆಯ ಪದತಲದಲ್ಲಿ ಬೋರಲು ಬಿದ್ದಿದೆ. ವಿಷಯ ಹೀಗಿರುವಾಗ ಅಕ್ರಮ ಗಣಿಗಾರಿಕೆಗೆ ಏಕಾಏಕಿ ಬ್ರೇಕ್ ಹಾಕುವ ಧಮ್ ಯಡ್ಡಿಗೆ ಎಲ್ಲಿಂದ ಬರಬೇಕು? ಹಾಗಂತ ಸುಮ್ಮಗಿದ್ದರೆ ಪ್ರತಿಪಕ್ಷಗಳು ಜಾಡಿಸುತ್ತವೆ. ಹೀಗೇ ಬಿಟ್ಟರೆ ರೆಡ್ಡಿಗಳು ಮುಖ್ಯಮಂತ್ರಿ ಕುರ್ಚಿಯನ್ನೇ ಆಪೋಷನ ತೆಗೆದುಕೊಳ್ಳುತ್ತಾರೆ. ಒಂದೇ ಏಟಿಗೆ ಇಷ್ಟೆಲ್ಲಾ ಹುಳುಕು ಮುಚ್ಚಿಕೊಳ್ಳುವ ಒಟ್ಟಾರೆ ಸೂತ್ರವೇ ಈ ರಫ್ತು ನಿಷೇಧ ಆದೇಶ!

ಇದೆಲ್ಲದರಿಂದ ಒಂದು ವಿಚಾರ ಪಕ್ಕಾ ಆಗುತ್ತದೆ; ಇದು ಶಾಶ್ವತ ಪರಿಹಾರ ಅಲ್ಲ ಮತ್ತು ಇದರಿಂದಾಗಿ ರಾಜ್ಯದ ಸಂಪತ್ತಿನ ಅಕ್ರಮ ಲೂಟಿ ನಿಲ್ಲುವುದೂ ಇಲ್ಲ. ಇದರಿಂದಾಗಿ ರೆಡ್ಡಿಗಳ ವಹಿವಾಟಿಗೆ ಒಂದಷ್ಟು ಭಂಗ ಬರಬಹುದು. ಪರವಾನಗಿ ಪಡೆದು ಗಣಿಗಾರಿಕೆ ನಡೆಸುತ್ತಿರುವವರು ತೊಂದರೆಗೀಡಾಗಬಹುದು ಹಾಗೂ ಕಳ್ಳ ರೆಡ್ಡಿಗಳ ಈವರೆಗಿನ ಅಕ್ರಮ ಕೂಡಾ ತಾತ್ಕಾಲಿಕವಾಗಿ ಮುಚ್ಚಿಹೋಗಬಹುದೇ ಹೊರತು ಬೇರ್‍ಯಾವ ಘನಂದಾರಿ ಉಪಯೋಗವೂ ಆಗಲಾರದು.

ಹಾಗಾದರೆ ರಾಜ್ಯ ಹಾಗೂ ದೇಶಗಳ ಸಂಪತ್ತಿನ ಲೂಟಿಗೆ ಪರಿಹಾರವೇನು ಅಂತೊಂದು ಪ್ರಶ್ನೆ ಏಳುತ್ತದೆ. ಅದಕ್ಕೆ 'ಗಣಿಗಾರಿಕೆಯ ರಾಷ್ಟ್ರೀಕರಣ' ಎಂಬ ಉತ್ತರವೂ ರೆಡಿಯಿದೆ! ಮಾಡೋಕೇನು ದಾಡಿ? ಅಂತ ಇನ್ನೊಂದು ಪ್ರಶ್ನೆಯೂ ಎದುರಾಗುತ್ತದೆ. ಇದಕ್ಕೆ ಉತ್ತರ ಹುಡುಕುತ್ತಾ ಹೋದರೆ ದೇಶಭಕ್ತರ ಪಕ್ಷ ಬಿಜೆಪಿ ಹಾಗೂ ನಾಡ ರಕ್ಷಣೆಗೆ ನಡಿಗೆ ಹೊರಟಿರುವ ಕಾಂಗ್ರೆಸ್ ಎರಡೂ ಕಟಕಟೆಗೆ ನಿಲ್ಲುತ್ತವೆ!

ಯಾಕೆಂದರೆ, ನಮ್ಮ ನೆಲದ ಖನಿಜ ಸಂಪತ್ತು ನಮ್ಮ ಜನರಿಗಾಗೇ ಬಳಕೆಯಾಗಲು ಅನುವು ಮಾಡಿಕೊಡುವ ಗಣಿ ರಾಷ್ಟ್ರೀಕರಣ ಇವೆರಡು ಪಕ್ಷಗಳವರಿಗೂ ಬೇಕಿಲ್ಲ. ಆದುದರಿಂದಲೇ ಈ ಬೃಹತ್ ಅಕ್ರಮವನ್ನು ಅಕ್ರಮ ಅದಿರು ರಫ್ತಿನ ಪರಿಧಿಗಷ್ಟೇ ಸೀಮಿತಗೊಳಿಸಲು ಹೆಣಗುತ್ತಿವೆ.

ಸಂವಿಧಾನದ ಏಳನೇ ಶೆಡ್ಯೂಲ್ ಪ್ರಕಾರ 1993 ರಲ್ಲಿ ರಾಷ್ಟ್ರೀಯ ಖನಿಜ ನೀತಿಯೊಂದನ್ನು ರೂಪಿಸಲಾಯಿತು. ಇದರನ್ವಯ ಕಬ್ಬಿಣದ ಅದಿರೂ ಸೇರಿದಂತೆ ಹದಿಮೂರು ಖನಿಜಗಳ ಅದಿರು ಉತ್ಪಾದನೆಯನ್ನು ಖಾಸಗೀಕರಿಸಲಾಯಿತು. ನಂತರದಲ್ಲಿ ತಿದ್ದುಪಡಿ ನಡೆದು ಮೇಲ್ಪಂಡ ಗಣಿಗಾರಿಕೆಯಲ್ಲಿ ಶೇ. 50 ರಷ್ಟು ವಿದೇಶೀ ಹೂಡಿಕೆಗೆ ಅನುವು ಮಾಡಿಕೊಡಲಾಯಿತು. ಕೇಂದ್ರದಲ್ಲಿ ಬಿಜೆಪಿಯ ಎನ್‌ಡಿಎ ಸರ್ಕಾರ ಶೇ. 74 ರಷ್ಟು ವಿದೇಶಿ ಬಂಡವಾಳ ಹಾಲಿಗೆ ಹೆಬ್ಬಾಗಿಲು ತೆರೆದರೆ, ಕಾಂಗ್ರೆಸ್ ಶೇ. 100 ರ ಲೆಕ್ಕದಲ್ಲಿ ಹೆದ್ದಾರಿಯನ್ನೇ ನಿರ್ಮಿಸಿಕೊಟ್ಟಿತು!

ಮೊನ್ನೆ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ ಅಂತ ಮಾಡಿದ ಯಡಿಯೂರಪ್ಪ ಕರ್ನಾಟಕ ಬರಖತ್ತಾಗೇ ಹೋಯ್ತು ಅಂತ ಕಿರುಲಿದರಲ್ಲಾ? ಆ ಸಂದರ್ಭದಲ್ಲಿ ವಿದೇಶಿ ಕಂಪೆನಿಗಳು ಕೋಟ್ಯಂತರ ರೂಪಾಯಿ ಹೂಡಿಕೆ ನಡೆಸಿದ್ದು ಯಡ್ಡಿಯ ಮುಸುಡಿ ನೋಡಿ ಅಲ್ಲ, ಇಲ್ಲಿ ಗಣಿಗಾರಿಕೆಗಿರುವ ವಿಪುಲ ಅವಕಾಶದ ಆಸೆಗಾಗಿ ಮಿಟ್ಟಲ್‌ನಂಥ ಉದ್ಯಮಿಗಳು ಅದಿರು ರಫ್ತಿನ ದುರುದ್ದೇಶದಿಂದಲೇ ಹೂಡಿಕೆ ನಡೆಸಿದ್ದಾರೆ.




ಇಂಥ ಕಾನೂನುಸಮ್ಮತ ಲೂಟಿಯಿಂದಾಗಿ ಭಾರತ ಬರಿದಾಗುತ್ತಿರುವುದು ದುರಂತ ಸತ್ಯ. ಜನಾರ್ದನ ರೆಡ್ಡಿಯಂಥ ಹಲಾಲುಕೋರರು ಸಭ್ಯತೆಯ ಮುಖವಾಡ ಹೊತ್ತು ಅಕ್ರಮವಾಗಿ ನೆಲಬಗೆದು ಶ್ರೀಮಂತರಾಗುತ್ತಿದ್ದಾರೆ. ಇಂಥವರನ್ನೇ ಜೊತೆಗಿಟ್ಟುಕೊಂಡು ಅವರ ಹಡಬೆ ಹಣದ ಬಲದಿಂದಲೇ ಮುಖ್ಯಮಂತ್ರಿಯಾಗಿರುವ ಯಡಿಯೂರಪ್ಪನಿಗೆ ಗಣಿ ಅಕ್ರಮ ತಡೆಯುವ ಯೋಗ್ಯತೆಯಿಲ್ಲವಾಗಿದೆ. ಆದರೆ ಒಂದು ವೇಳೆ ರೆಡ್ಡಿಯ ಅಕ್ರಮಗಳಿಗೆ ಬರೆ ಹಾಕಿದರೆ ಕರ್ನಾಟಕ ಸೇಫ್ ಆಗಬಹುದಷ್ಟೇ. ಆದರೆ ಭಾರತದ ಸಂಪತ್ತನ್ನ ಕಾಪಾಡುವವರ್‍ಯಾರು?

ಇದೀಗ ಮೇಲೆ ಚರ್ಚಿಸಿದ ವಿಷಯ ಹೊತ್ತುಕೊಂಡೇ ಕಾಂಗ್ರೆಸ್ಸಿಗರು ಬಳ್ಳಾರಿಯತ್ತ ಹೆಜ್ಜೆ ಕದಲಿಸುತ್ತಿದ್ದಾರೆ. ಯಡಿಯೂರಪ್ಪನ ಅರಿವುಗೇಡಿತನವೂ ಅದಕ್ಕೆ ಪ್ರಮುಖ ಕಾರಣ. ಕೇವಲ ಅಕ್ರಮ ಅದಿರು ಸಾಗಾಣೆ ನಿಷೇಧದಿಂದ ಏನೂ ಪ್ರಯೋಜನವಿಲ್ಲ, ಗಣಿಗಾರಿಕೆ ರಾಷ್ಟ್ರೀಕರಣವೊಂದೇ ಇದೆಲ್ಲದಕ್ಕೆ ಸೂಕ್ತ ಪರಿಹಾರ.

ಇದರಿಂದಾಗಿ ನಮ್ಮ ನೈಸರ್ಗಿಕ ಸಂಪತ್ತು ನಮ್ಮ ಉಪಯೋಗಕ್ಕೆ ಬರುವಂತಾಗುತ್ತದೆ. ಇದರಿಂದ ಮೂಲಭೂತ ಸೌಲಭ್ಯಗಳೊದಗಿ ಇಲ್ಲಿನ ಜನರ ಬದುಕು ಒಂದಷ್ಟು ಹಸನಾಗುವುದೂ ಸಾಧ್ಯವಿದೆ. ಯಾಕೆಂದರೆ, ಇಂದು ಮುಂದುವರಿದು ಮಿಂಚುತ್ತಿರುವ ಜಪಾನ್ ದೇಶ ಇದೆಯಲ್ಲಾ? ಅದು ಶ್ರೀಮಂತಗೊಂಡದ್ದರ ಹಿಂದೆ ಭಾರತದ ಒಡಲಿನ ಅದಿರುಗಳ ಬಲವಿದೆ!

ನಮ್ಮ ನೆಲದ ಅದಿರಿಂದ ಬೇರೆ ದೇಶವೊಂದು ಈ ಪರಿ ಬೆಳೆದಿದೆಯೆಂದರೆ, ಅದನ್ನು ಇಲ್ಲೇ ತೊಡಗಿಸಿ ಭಾರತವನ್ನೇ ಬೆಳಗಿಸಬಹುದಲ್ಲಾ? ಬಳ್ಳಾರಿಯತ್ತ ಹೊರಟಿರುವ ಕಾಂಗ್ರೆಸ್ಸಿಗರಿಗೆ ನಡಿಗೆಯ ನಡುವೆ ಈ ವಿಚಾರದ ಅಂತಃದರ್ಶನವಾಗಲಿ.



ಇನ್ನು ಯಡಿಯೂರಪ್ಪನ ಬಗ್ಗೆ ಒಂದು ಮಾತು, ಈ ಆಸಾಮಿ ಅದಿರು ರಫ್ತು ನಿಷೇಧಿಸಿ ಅದನ್ನೇ ಕ್ರಾಂತಿಯೆಂಬಂತೆ ಬಿಂಬಿಸುತ್ತಿದ್ದಾರೆ. ಈತನಿಗೆ ಜನರ ಬಗ್ಗೆ ಕಾಳಜಿಯಿದ್ದರೆ ಪಕ್ಕಾ ವಂಚಕ ಜಾಯಮಾನದ, ಅದಿರುಗಳ್ಳತನದ ರೂವಾರಿ ಗಳಾದ ಜನಾರ್ದನ ರೆಡ್ಡಿ ಅಂಡ್ ಗ್ಯಾಂಗ್ ಅನ್ನು ಸಂಪುಟದಿಂದ ಒದ್ದೋಡಿಸಲಿ.


ಆ ಯೋಗ್ಯತೆ ಯಡಿಯೂರಪ್ಪನಿಗಿದೆಯೇ?

• ಬಾಗಿಲಗದ್ದೆ

# ಅಂತ ಗೋವಿಂದಮು!

ದುಷ್ಟೆಂಬುದು ಎಲ್ಲಾ ಸಂದರ್ಭಗಳಲ್ಲೂ ಕೈಹಿಡಿಯಲಾರದು. ಕುತಂತ್ರಗಳಿಂದಲೇ ಎಲ್ಲವನ್ನೂ ಜಯಿಸಲಾಗುವುದಿಲ್ಲ....

ಬಿಟ್ಟ ಬಾಣಗಳೆಲ್ಲ ತಮ್ಮ ಬುಡಕ್ಕೇ ಚುಚ್ಚಿಕೊಳ್ಳುತ್ತಿರುವುದನ್ನು ಕಂಡು ರೆಡ್ಡಿ ಪಟಾಲಂಗೆ ಮೇಲ್ಪಂಡಂತೆ ಜ್ಞಾನೋದಯವಾಗಿರಬಹುದು!



ಯಾಕೆಂದರೆ ರೆಡ್ಡಿ ಪಡೆ ಅಂತ ಗೋವಿಂದಮು (ಎಲ್ಲಾ ಗೋವಿಂದ) ಎಂಬಂಥ ಹತಾಶೆಯ ಅಂಚಿಗೆ ಬಂದು ನಿಂತಿದೆ. ನೀವುಗಳು ರಾಜಕೀಯ ವಿದ್ಯಮಾನಗಳನ್ನು ಮೊದಲಿಂದ ಗಮನಿಸಿದ್ದರೆ ಒಂದಂಶ ಮನದಟ್ಟಾಗಿರುತ್ತದೆ; ರೆಡ್ಡಿ ಮತ್ತು ಗ್ಯಾಂಗ್ ಕುತಂತ್ರವೊಂದನ್ನು ಹೆಣೆದರೆ ಅದನ್ನು ಬೇರೆಯವರ ಮೂಲಕ ಕಾರ್ಯರೂಪಕ್ಕೆ ತರುತ್ತದೆ! ಆದರೀಗ ಈ ದುಷ್ಟ ಗುಣವೇ ಉಲ್ಟಾ ಹೊಡೆದು ಬಿಟ್ಟಿದೆ. ಎದುರು ಬಿಟ್ಟ ವ್ಯಕ್ತಿಗಳು ಗಡದ್ದು ಲಾಭ ಗಿಟ್ಟಿಸಿಕೊಂಡರೆ, ರೆಡ್ಡಿ ಪಡೆಯದ್ದು ಅಕ್ಷರಶಃ ಎಂಜಲೆಲೆಯ ಸ್ಥಿತಿ!

ಈಗ್ಗೆ ಕೆಲ ತಿಂಗಳ ಹಿಂದೆ ನಡೆದ ರೆಡ್ಡಿ ಕೃಪಾಪೋಷಿತ ಬಂಡಾಯವನ್ನೇ ತೆಗೆದುಕೊಳ್ಳಿ. ಅದರಲ್ಲಿ ಜಗದೀಶ್ ಶೆಟ್ಟರ್ ಮುಂಚೂಣಿಯಲ್ಲಿದ್ದರು. ಶೆಟ್ಟರ್ ಒಳಗೆ ಮಂತ್ರಿಯಾಗದಿರುವುದರ ಬಗ್ಗೆ ಇದ್ದ ಅಸಹನೆಯನ್ನೇ ಎನ್‌ಕ್ಯಾಷ್ ಮಾಡಿಕೊಂಡ ರೆಡ್ಡಿ ಪಡೆ, ಯಡ್ಡಿಯನ್ನ ಉದುರಿಸಿಯೇ ಬಿಡುವ ಸ್ಕೆಚ್ಚು ಹಾಕಿತ್ತು. ಬಂಡಾಯದ ಫಲವೆಂಬಂತೆ ಶೋಭಾ ಕರಂದ್ಲಾಜೆ ಸಚಿವ ಸ್ಥಾನ ಕಳಕೊಂಡು ಅದು ಶೆಟ್ಟರ್ ಉಡಿಗೆ ಬೀಳುವಂತಾಯಿತು. ರೆಡ್ಡಿಗಳ ಪಾಲಿಗೆ ಸಿಕ್ಕಿದ್ದು ವಿಲನ್‌ಗಿರಿಯಷ್ಟೆ!

ಇದರಿಂದ ಪಾಠ ಕಲಿಯದ ಈ ಅವಿವೇಕಿಗಳು ಮತ್ತೊಂದು ಸುತ್ತಿನ ಬಂಡಾಯದ ಮೂಲಕ ಬೇಳೆ ಬೇಯಿಸಿಕೊಳ್ಳಲು ಹವಣಿಸಿದರು. ಬೇಳೂರು ಕೃಷ್ಣಮೂರ್ತಿ, ರೇಣುಕಾಚಾರ್ಯ ಮುಂತಾದವರನ್ನು ರೆಸಾರ್ಟ್‌ಗಳಲ್ಲಿ ಅಡ್ಡಾಡಿಸಿ ಸರ್ಕಾರ ಕೆಡವಲು ಮುಂದಾದರು. ಇದರ ಪರಿಣಾಮ; ನರ್ಸ್ ರೇಣುಕನಿಗೆ ಅಬಕಾರಿ ಖಾತೆ ಸಿಕ್ಕಿತು.

ಆದರೀಗ ಪರಿಸ್ಥಿತಿ ಪೂರ್ತಿ ಉಲ್ಟಾ ಹೊಡೆದಿದೆ. ರೆಡ್ಡಿ ಪಟಾಲಂ ಬೆಂಬಲದೊಂದಿಗೆ ಬಂಡೆದ್ದಾಗ ಸರ್ಕಾರದ ಬಗ್ಗೆ, ಯಡಿಯೂರಪ್ಪನ ಬಗ್ಗೆ ಬಾಯಿಗೆ ಬಂದಂತೆ ಬೊಗಳಿದ್ದ ರೇಣುಕಾಗೆ ಇದೀಗ ಯಡಿಯೂರಪ್ಪ ದೇವರಂತೆ ಕಾಣಹತ್ತಿದ್ದಾರೆ. ರೇಣುಕ 'ನಾನೀಗ ರೆಡ್ಡಿ ಕಡೆ ಇಲ್ಲ. ನಂಗೆ ಯಡಿಯೂರಪ್ಪನೇ ಎಲ್ಲಾ' ಎಂಬರ್ಥದಲ್ಲಿ ಬಹಿರಂಗವಾಗೇ ತಿರುಗೇಟು ನೀಡಿದ್ದಾನೆ. ಜಗದೀಶ್ ಶೆಟ್ಟರ್ ಮನಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ.

ಇನ್ನು ಅದಿರು ಕಳ್ಳ ಸಾಗಾಟಕ್ಕೆ ಅನುಕೂಲವಾಗಲೆಂದೇ ಆಪರೇಷನ್ ಕಮಲದ ಮೂಲಕ ಅಸ್ನೋಟಿಕರ್‌ನನ್ನು ಬಿಜೆಪಿಗೆ ಕರೆದುಕೊಂಡಿದ್ದು ರೆಡ್ಡಿ ಪಡೆಯೆ. ಆದರೀಗ ವ್ಯವಹಾರ ಸಂಬಂಧ ಕಿರಿಕ್ ನಡೆದು ಅಸ್ನೋಟಿಕರ್ ಕೂಡಾ ರೆಡ್ಡಿಗಳ ವಿರುದ್ಧ ತಿರುಗಿಬಿದ್ದಿದ್ದಾನೆ.



ಇಂಥಾ ರೆಡ್ಡಿ ಪಡೆ ತಮ್ಮ ಹಿಂದೆ ಬೆಂಬಲಿಗ ಶಾಸಕರ ದಂಡೇ ಇದೆ, ಸರ್ಕಾರವನ್ನು ಉರುಳಿಸೇಬಿಡುತ್ತೇವೆಂಬ ಅಹಂಕಾರದಲ್ಲಿ ಊಳಿಡುತ್ತಾ ಬಂದಿತ್ತು, ಆದರೀಗ ತಡಕಾಡಿದರೂ ರೆಡ್ಡಿಗಳ ಹಿಂದೆ ಎಂಟು ಮಂದಿ ಶಾಸಕರು ಸಿಗುವುದೂ ಕಷ್ಟ!

ಇದೆಲ್ಲದರ ಅರ್ಥ; ರೆಡ್ಡಿ ಪಟಾಲಂನ ಅಹಂಕಾರ ಅಡಗುತ್ತಿದೆ. ಮತ್ತು ಅದರಿಂದಾಗಿಯೇ ಹತಾಶೆಯ ಮಡುವಿಗೆ ಬಿದ್ದಿದೆ. ಕರ್ನಾಟಕದ ಸಾರ್ವತ್ರಿಕ ಆರೋಗ್ಯದ ದೃಷ್ಟಿಯಿಂದ ಇದು ಒಳ್ಳೆಯ ಬೆಳವಣಿಗೆಯೂ ಹೌದು.

ರೆಡ್ಡಿ ಪಡೆಯ ಪ್ರಮುಖ ಭಂಟ ಶ್ರೀರಾಮುಲು ತಲೆ ಬೋಳಿಸಿಕೊಂಡು ಓಡಾಡುತ್ತಿರುವುದು ಸಹ ಈ ಹತಾಶೆಯ ಸಂಕೇತವಿರಬಹುದು!

## ರೆಡ್ಡಿಯ ಕೋಟೆ ಕೆಡವಲು ಸಿದ್ದರಾಮಯ್ಯ ಎಂಬ ಮಿಸೈಲ್!

ರೆಡ್ಡಿಗಳ ಕೇಡಿ ಕ್ಯಾಂಪ್ ಮೇಲಿನ ದಾಳಿಗೆ ಕಾಂಗ್ರೆಸ್‌ನವರಿಗೆ ಒಬ್ಬ ಸರಿಯಾದ, ಸಮರ್ಥ ನಾಯಕ ಬೇಕಿತ್ತು.

ಅದೀಗ ಸಿದ್ದರಾಮಯ್ಯನವರ ಮೂಲಕ ಕೈಗೂಡಿದೆ. ಹುಡುಕಿದರೆ ಅನೇಕ ಕಾಂಗ್ರೆಸ್ ನಾಯಕರ ಹಗರಣಗಳು ಸಿಗುವಂತಹ ಸನ್ನಿವೇಶವಿರುವಾಗ ಯಾವುದೇ ಹಗರಣಗಳಿರದ, ಕೈಬಾಯಿ ಸ್ವಚ್ಛವಾಗಿಟ್ಟುಕೊಂಡಿರುವ ಸಿದ್ದರಾಮಯ್ಯ ಇವತ್ತಿನ ಕಾಂಗ್ರೆಸ್ ಪಕ್ಷಕ್ಕೆ ನೈತಿಕ ಬೆಂಬಲದಂತಿದ್ದಾರೆ. ರೆಡ್ಡಿಗಳಿಗೆ ಕಿರಿಕಿರಿ ಉಂಟುಮಾಡಿರುವುದು ಇದೇ ಅಂಶ. ಸಿದ್ದು ಮೋಟಮ್ಮನವರ ಬದಲಾಗಿ ಬೇರಿನ್ಯಾವ ಕಾಂಗ್ರೆಸ್ ನಾಯಕರ ಲೀಡರ್‌ಶಿಪ್‌ನಲ್ಲಿ ಈ ಪಾದಯಾತ್ರೆ ನಡೆದಿದ್ದರೂ ಅದನ್ನು ಹಂಗಿಸಿ ಗೇಲಿ ಮಾಡುವ ಅವಕಾಶ ರೆಡ್ಡಿಗಳಿಗೆ ಇದ್ದೇ ಇತ್ತು.

ಸಿದ್ದರಾಮಯ್ಯ ಬಗ್ಗೆ ರೆಡ್ಡಿ ಗ್ಯಾಂಗ್‌ಗಿರುವ ಇನ್ನೊಂದು ಭಯ ಮುಂದಿನ ದಿನಗಳ ರಾಜಕೀಯದ್ದು. ಬಳ್ಳಾರಿ ಮಾತ್ರವಲ್ಲದೇ ಕೊಪ್ಪಳ, ಗದಗ, ದಾವಣಗೆರೆ ಹಾಗೂ ಹಾವೇರಿ ಜಿಲ್ಲೆಗಳಲ್ಲೂ ರೆಡ್ಡಿಗಳ ಕಂಟ್ರೋಲ್ ಇದೆ. ಕಳೆದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಬಳ್ಳಾರಿಯ ಒಂಬತ್ತು ವಿಧಾನಸಭಾ ಕ್ಷೇತ್ರಗಳ ಪೈಕಿ ಎಂಟನ್ನೂ ಈ ಗ್ಯಾಂಗ್ ಗೆದ್ದಿದೆ. ದಾವಣಗೆರೆಯ ಎಂಟರಲ್ಲಿ ಆರು, ಗದಗ ಜಿಲ್ಲೆಯಲ್ಲಿ ನಾಲ್ಕಕ್ಕೆ ಪೂರಾ ನಾಲ್ಕು ಹಾಗೂ ಹಾವೇರಿಯ ಆರರಲ್ಲಿ ಐದು ಕ್ಷೇತ್ರವನ್ನು ಬಿಜೆಪಿ ಗೆದ್ದಿದೆ. ಈ ಗೆಲುವಿನಲ್ಲಿ ರೆಡ್ಡಿಗಳ ಪಾತ್ರ ನಿರ್ಣಾಯಕವಾಗಿತ್ತು, ಗಣಿ ದುಡ್ಡನ್ನು ಯಥೇಚ್ಛವಾಗಿ ಹರಿಸಿ ಎಲೆಕ್ಷನನ್ನೇ ಖರೀದಿಸಲಾಗಿತ್ತು.

ಆದರೆ ಈಗಿನ ಸಿದ್ದು ಪಾದಯಾತ್ರೆ ರೆಡ್ಡಿಗಳ ಕೋಟೆಯಲ್ಲಿ ಶಾಶ್ವತ ಬಿರುಕು ತರುವುದು ಖಚಿತ. ಒಮ್ಮೆ ಬಳ್ಳಾರಿಯಲ್ಲೇ ರೆಡ್ಡಿಗಳು ದುರ್ಬಲರಾಗಿಬಿಟ್ಟರೆ ಅಕ್ಕಪಕ್ಕದ ಜಿಲ್ಲೆಗಳೂ ಅವರ ಹಿಡಿತದಿಂದ ಜಾರಿ ಹೋಗುತ್ತವೆ. ವಾಸ್ತವವಾಗಿ ಬಳ್ಳಾರಿಯಲ್ಲಿ ಖಡಕ್ಕಾದ ಕಾಂಗ್ರೆಸ್ ನಾಯಕರು ಎದ್ದು ನಿಲ್ಲಲು ಇದು ಸಕಾಲ. ಸಿದ್ದರಾಮಯ್ಯನವರ ಪ್ರಭಾವ ಈ ಜಿಲ್ಲೆಗಳಲ್ಲಿ ಹೆಚ್ಚಿದೆ. ಕಾಂಗ್ರೆಸ್‌ಗೆ ಸಿದ್ದು ಪ್ರಭಾವದಿಂದ ಇನ್ನಷ್ಟು ಶಕ್ತಿಯೂ ಬರಲಿದೆ. ಕಾಂಗ್ರೆಸ್ ತ್ಯಜಿಸಿ ಹೋಗಿದ್ದ ಬಿ.ಶಿವರಾಂ ರೆಡ್ಡಿ, ಡಾ.ವೆಂಕಟ ಮಹಿಪಾಲ್ ಮುಂತಾದವರು ಮತ್ತೆ ಕಾಂಗ್ರೆಸ್‌ಗೆ ಬರಲಿದ್ದಾರೆಂಬ ಪುಕಾರುಗಳಿವೆ.

ಜಿಲ್ಲೆಯ ಹಿಂದುಳಿದ ವರ್ಗಗಳು ಹಾಗೂ ಇನ್ನಿತರ ವಲಯದಲ್ಲಿ ರೆಡ್ಡಿ ಎಂಬ ರೌಡಿ ಹಾಗೂ ರಾಮುಲು ಎಂಬ ಜೋಕರ್‌ನ ವಿರೋಧಿ ಅಲೆ ಒಳಗಿಂದೊಳಗೆ ಹರಿಯುತ್ತಿದೆ. ಸ್ಫೋಟಿಸಲು ಸಿದ್ಧವಾಗುತ್ತಿದೆ. ಈಗ ಸಿದ್ದರಾಮಯ್ಯ ಎಂಬ ಮಿಸೈಲ್ ರೆಡ್ಡಿಗಳ ಕೋಟೆಗೆ ಅಪ್ಪಳಿಸುವ ಮೂಲಕ ಅವರ ಪತನದ ಆರಂಭ....





# ಜೋಕರ್...!

• ಪಾರ್ವತೀಶ
bparvateesha@gmail.com

ಕರ್ನಾಟಕದ ನಿಸರ್ಗ ಸಂಪತ್ತನ್ನೆಲ್ಲಾ ಲೂಟಿ ಮಾಡಿ, ಬೆಟ್ಟಗುಡ್ಡಗಳನ್ನೆಲ್ಲ ಬೋಳಿಸಿರುವ ರೆಡ್ಡಿ ಗ್ಯಾಂಗ್ ಕೊನೆಗೆ ಬೋಳಿಸಲು ಏನೂ ಉಳಿದಿಲ್ಲವೆಂಬಂತೆ ತಮ್ಮ ನೌಕರ ಶ್ರೀರಾಮುಲುನ ತಲೆಯನ್ನೇ ಬೋಳಿಸಿದ್ದಾರೆ. ರಾಮುಲು ಈಗೊಬ್ಬ ಜೋಕರ್‌ನಂತೆ ಕಾಣಿಸುತ್ತಿದ್ದಾನೆ.

ಈ ತಲೆ ಬೋಳಿಸುವ ಕೆಲಸದ ಹಿಂದೆ ಬಳ್ಳಾರಿ ಗಣಿ ಕಳ್ಳರ ಅನೇಕ ಲೆಕ್ಕಾಚಾರಗಳಿವೆ. ಯಡ್ಡಿ-ರೆಡ್ಡಿಗಳ ನಡುವಿನ ಆಂತರಿಕ ಜಗಳವಿದೆ. ಬಹಳ ಮುಖ್ಯವಾಗಿ ರೆಡ್ಡಿ ಗ್ಯಾಂಗ್‌ನ ದಿಕ್ಕೆಟ್ಟ ಸ್ಥಿತಿಯೂ ಆಗಿದೆ. ಕಾಂಗ್ರೆಸ್ ಜನ ಸಿದ್ದರಾಮಯ್ಯ ನಾಯಕತ್ವದಲ್ಲಿ ಈ ಲೆವೆಲ್‌ನ ಯುದ್ಧ ಘೋಷಣೆ ಮಾಡುತ್ತಾರೆಂಬ ಅಂದಾಜೇ ರೆಡ್ಡಿಗಳಿಗಿರಲಿಲ್ಲ, ಅಷ್ಟೇ ಅಲ್ಲ, ಬಿಜೆಪಿ ಹಾಗೂ ಯಡ್ಡಿ ತಮ್ಮನ್ನು ಹೀಗೆ ನಡುನೀರಿನಲ್ಲಿ ಕೈ ಬಿಡುತ್ತಾರೆಂಬ ಕಲ್ಪನೆಯೂ ರೆಡ್ಡಿ ಗ್ಯಾಂಗ್‌ಗೆ ಇರಲಿಲ್ಲ.

ಈಗ ಯುದ್ಧರಂಗದಲ್ಲಿ ರೆಡ್ಡಿಗಳು ಏಕಾಂಗಿಗಳಾಗಿದ್ದಾರೆ.

ಒಂದು ಕಡೆ ಮುನ್ನುಗ್ಗಿ ಬರುತ್ತಿರುವ ಕಾಂಗ್ರೆಸ್ ಸೇನೆ, ಮತ್ತೊಂದೆಡೆ ಬಿಜೆಪಿಗಳಿಂದ ಬಹಿರಂಗವಾಗಿ ಸಿಗದ ಬೆಂಬಲ ಮಗದೊಂದೆಡೆ ರಾಜ್ಯದ ಎಲ್ಲಾ ಕಡೆ ಕ್ಯಾಕರಿಸಿ ಉಗಿಯುತ್ತಿರುವ ಜನ.

ರೆಡ್ಡಿಗಳಿಗೆ ನಿಜಕ್ಕೂ ಇದು ಕಷ್ಟಕಾಲ. ಇಂತರ ಸಂಕಷ್ಟ ಬಂದಾಗ 'ಬಳ್ಳಾರಿಯಿಂದ ಮೈಸೂರಿಗೆ ಪಾದಯಾತ್ರೆ ಮಾಡ್ತೀನಿ', 'ಸಿದ್ದರಾಮಯ್ಯ ಬಳ್ಳಾರಿಗೆ ಕಾಲಿಡಲಿ ನೋಡಿಕೊಳ್ತೀನಿ' ಎಂದೆಲ್ಲಾ ಆವಾಜ್ ಹಾಕಿದ್ದ ರಾಮುಲುಗೆ ರೆಡ್ಡಿಗಳು ಕೊನೆಗೀಗ ಮಾಡಿದ್ದೇನು?

'ಕೆಲಸವಿಲ್ಲದ ಕುಂಬಾರ ಮಗುವಿನ...: ತಟ್ಟಿದನಂತೆ' ಎಂಬಂತೆ ರಾಮುಲುವನ್ನೇ ಎತ್ತಾಕಿಕೊಂಡು ಹೋಗಿ ಅವನ ತಲೆ ಬೋಳಿಸಿ ಬಳ್ಳಾರಿಯ ಬೀದಿಗಳಲ್ಲಿ ಓಡಾಡಲು ಬಿಟ್ಟಿದ್ದಾರೆ.

ಜನ ರಾಮುಲುನನ್ನು ನೋಡಿ ಉರುಳಾಡಿ ನಗುತ್ತಿದ್ದಾರೆ. ಆದರೂ ಇದರ ಹಿಂದೆ ಕೆಲವು ಇಂಟರೆಸ್ಟಿಂಗ್ ಆದ ಲೆಕ್ಕಾಚಾರಗಳಿವೆ ಗಣಿಕಳ್ಳರಿಗೆ.

### ನ್ಯಾಷನಲ್ ಲೆವೆಲ್‌ಗೆ ಹೊರಟು ಬಳ್ಳಾರಿ ಲೆವೆಲ್‌ಗೆ ಬಂದರು.

ರೆಡ್ಡಿ ಗ್ಯಾಂಗ್ ಕಾಂಗ್ರೆಸ್ ಅನ್ನು ಮುಗಿಸಲು ಅಖಿಲ ಭಾರತ ಮಟ್ಟದಲ್ಲಿ ರಾಜಕೀಯ ಮಾಡಲು ಏನೇನು ಮಾಡಿದೆಯೆಂಬುದನ್ನು 'ಲಂಕೇಶ್' ಕಳೆದ ಸಂಚಿಕೆಯಲ್ಲಿ ವಿವರಿಸಿತ್ತು. ಈಗಾಗಲೇ ಕೋಮಾದಲ್ಲಿರುವ ಬಿಜೆಪಿಗಳ ಮೈತ್ರಿಕೂಟವಾದ ಎನ್‌ಡಿಎಗೆ ಟಾನಿಕ್ ಕುಡಿಸಲು ಓಡಾಡಿದ್ದರು ರೆಡ್ಡಿಗಳು. ಡಿಎಂಕೆ ಲೀಡರ್ ಕರುಣಾನಿಧಿ, ಮಹಾರಾಷ್ಟ್ರದ ಶರದ್ ಪವಾರ್, ಬಂಗಾಳದ ಮಮತಾ ಬ್ಯಾನರ್ಜಿಗೆ ಕಾಂಗ್ರೆಸ್ ವಿರುದ್ಧ ಸುಫಾರಿ ಕೊಡುವ ಕೆಲಸ ಇವರಿಂದ ಆಗಿತ್ತು, ಆದರೆ ಇದಾದ ಆರು ತಿಂಗಳಲ್ಲೇ ಪರಿಸ್ಥಿತಿ ಉಲ್ಟಾ ಹೊಡೆಯುತ್ತಿದೆ. ನ್ಯಾಷನಲ್ ಲೆವೆಲ್ ಪಾಲಿಟಿಕ್ಸ್ ಮಾಡಲು ಹೊರಟಿದ್ದ ರೆಡ್ಡಿ ಗ್ಯಾಂಗ್‌ಗೆ ಕರ್ನಾಟಕ ಲೆವೆಲ್‌ನಲ್ಲೂ ರಾಜಕೀಯದ ಕಂಟ್ರೋಲು ಸಿಗುತ್ತಿಲ್ಲ. ಹಾಗಾಗಿ ಅವರು ಈಗ ಬಳ್ಳಾರಿ ಲೆವೆಲ್ ಪಾಲಿಟಿಕ್ಸ್ ಮಾತ್ರ ಮಾಡುತ್ತಿದ್ದಾರೆ. ಬಳ್ಳಾರಿ ಬೌಂಡರಿ ದಾಟಿ ಆಚೆ ಬರಲಾಗದಂತಹ ಅವರ ದುಃಸ್ಥಿತಿ ಎದ್ದು ಕಾಣುತ್ತಿದೆ. ಶತ್ರು ಸೇನೆಗೆ ಹೆದರಿ ಕೋಟೆಯೊಳಕ್ಕೆ ಓಡಿಹೋಗಿ ಬಾಗಿಲು ಹಾಕಿಕೊಳ್ಳುವ ಪುಡಿ ಪಾಳೇಗಾರರಂತೆ ರೆಡ್ಡಿ ಗ್ಯಾಂಗ್ ಈಗ ಕಾಣಿಸುತ್ತಿದೆ. ಕರ್ನಾಟಕದ ಬಿಜೆಪಿಗಳಾಗಲಿ ಅಥವಾ ಯಡ್ಡಿ ಸರ್ಕಾರವಾಗಲೀ ಮೊದಲಿನಂತೆ ರೆಡ್ಡಿಗಳ ತಾಳಕ್ಕೆ ತಕ್ಕಂತೆ ಕುಣಿಯಲು ಒಪ್ಪುತ್ತಿಲ್ಲವಾದ್ದರಿಂದ ರೆಡ್ಡಿಗಳೀಗ ಅನಿವಾರ್ಯವಾಗಿ ತಮ್ಮ ಬಳ್ಳಾರಿ ಕೋಟೆಯನ್ನಾದರೂ ರಕ್ಷಿಸಿಕೊಳ್ಳಬೇಕಾಗಿ ಬಂದಿದೆ. ಅದಕ್ಕಾಗಿ ಅವರೀಗ ಬಳ್ಳಾರಿ ಬೌಂಡರಿಯೊಳಗೆ ಯಾತ್ರೆ ಹೊರಟಿದ್ದಾರೆ. ಆದರೆ ಈ ಯಾತ್ರೆಗೆ ರಾಮುಲುನ ತಲೆ ಬೋಳಿಸುವ ಅಗತ್ಯವಿತ್ತಾ?

### ಬಳ್ಳಾರಿ ಲೋಕಲ್ ರಾಜಕೀಯ

ಒಂದು ಕಾಲದಲ್ಲಿ ಕಾಂಗ್ರೆಸ್‌ನ ಭದ್ರಕೋಟೆಯಾಗಿದ್ದ ಬಳ್ಳಾರಿ ಈಗ್ಗೆ ಹತ್ತು ವರ್ಷಗಳಿಂದೀಚೆಗೆ ರೆಡ್ಡಿಗಳ ದುಡ್ಡಿನ ಹೊಡೆತಕ್ಕೆ ಸಿಲುಕಿ ಬಿಜೆಪಿಮಯವಾಗಿದೆ. 1999ರಲ್ಲಿ ಸೋನಿಯಾ ಗಾಂಧಿ ಇಲ್ಲಿಂದ ಸ್ಪರ್ಧಿಸಿ ಗೆದ್ದ ನಂತರ ತಕ್ಷಣ ರಾಜೀನಾಮೆ ನೀಡಿ ಹೊರಟು ಹೋದದ್ದು ಆಮೇಲೆ ಕಾಂಗ್ರೆಸ್‌ಗೆ ತಿರುಗುಬಾಣವಾಗಿ ಹೋಯಿತು.

2004ರ ಹೊತ್ತಿಗೆ ಪರಿಸ್ಥಿತಿ ಪೂರ್ತಿ ಬದಲಾಗಿ ಕರುಣಾಕರ ರೆಡ್ಡಿ ಪಾರ್ಲಿಮೆಂಟಿಗೆ ಆರಿಸಿಹೋದ. ಅಲ್ಲಿಂದಾಚೆಗೆ ಒಬ್ಬೊಬ್ಬರಾಗಿ ಜನಾರ್ದನ ರೆಡ್ಡಿ, ರಾಮುಲು, ಸೋಮಶೇಖರ ರೆಡ್ಡಿ ವಿಧಾನಸೌಧದ ಮೆಟ್ಟಿಲು ಏರುವಂತಾಯಿತು. 2008ರ ಅಸೆಂಬ್ಲಿ ಚುನಾವಣೆಯ ವೇಳೆಗೆ ಬಳ್ಳಾರಿ ಹೋಲ್‌ಸೇಲಾಗಿ ಬಿಜೆಪಿಗಳ ಕಪಿಮುಷ್ಟಿಯಲ್ಲಿ ಸಿಲುಕಿಹೋಗಿತ್ತು. ಒಟ್ಟು 8ರಲ್ಲಿ 7 ಬಿಜೆಪಿ ಶಾಸಕರೇ ಗೆದ್ದು ಬಂದಿದ್ದರು. ಇದಲ್ಲದೆ 32 ಜಿಲ್ಲಾ ಪಂಚಾಯತಿ ಕ್ಷೇತ್ರಗಳಲ್ಲಿ 30 ಸದಸ್ಯರು ರೆಡ್ಡಿ ಗ್ಯಾಂಗ್‌ನವರೇ ಇದ್ದಾರೆ. ಇರುವ ತಾಲ್ಲೂಕು ಪಂಚಾಯತಿಗಳಲ್ಲಿ ಎಂಟಕ್ಕೆ ಎಂಟೂ ರೆಡ್ಡಿ ಸಾಮ್ರಾಜ್ಯಕ್ಕೆ ಸೇರಿವೆ. ಜೊತೆಗೆ ಬಳ್ಳಾರಿ ನಗರ ಪಾಲಿಕೆ, ಇನ್ನುಳಿದ ಮುನ್ಸಿಪಾಲಿಟಿಗಳೂ ಹಾಗೂ ಒಂದಿಷ್ಟು ದಾರಿ ತಪ್ಪಿದ ಮಹಿಳಾ ರಾಜಕಾರಣಿಗಳೂ ಸೇರಿದಂತೆ ಸಮಸ್ತವೂ 'ರೆಡ್ಡಿ ಲ್ಯಾಂಡ್'ನ ಅಡಿಯಾಳಾಗಿ ಹೋಗಿವೆ. ಆದರೆ ರೆಡ್ಡಿಗಳ ನೆಮ್ಮದಿ ಕದಡುವಂಥ ಘಟನೆ ಕಳೆದ ವರ್ಷದ ಲೋಕಸಭಾ ಚುನಾವಣೆಯಲ್ಲಿ

## ರೆಡ್ಡಿಗಳ ತಮಾಷೆ ಯಾತ್ರೆ

ಕಾಂಗ್ರೆಸ್ ಪಾದಯಾತ್ರೆಗೆ ಪ್ರತಿಯಾಗಿ ರೆಡ್ಡಿ ಗ್ಯಾಂಗ್‌ನವರು ಬೋಡುಗುಂಡಾ ಶ್ರೀರಾಮುಲುನನ್ನು ಮುಂದೆ ಬಿಟ್ಟುಕೊಂಡು ನಡೆಸುತ್ತಿರುವ ಯಾತ್ರೆಯ ಸೀನ್‌ಗಳು ಸಖತ್ ತಮಾಷೆಯಾಗಿವೆ.

ಇವರ ಯಾತ್ರೆ ಮೊದಲ ದಿನ ಅಮೋಘ ಒಂದು ಕಿಲೋಮೀಟರ್ ನಡೆಯಿತು. ಮೋಕಾ ಬಳಿ ದುರ್ಗಮ್ಮ ದೇವಸ್ಥಾನಕ್ಕೆ ಹೋಗಿ ಅಡ್ಡಬಿದ್ದು ಬಂದರು ರೆಡ್ಡಿಗಳು. ನಂತರ 2ನೇ ದಿನ ಚೆಲುಗುರ್ತಿ, ಮೋಕಾ ಯಾತ್ರೆ.



ಅಸಲಿ ತಮಾಷೆ ಏನೆಂದರೆ, ಇವರ ಯಾತ್ರೆಗೆ ಸಾರ್ವಜನಿಕರು ಬರುತ್ತಿಲ್ಲ, ತಿರುಪೆ ದಾಸಯ್ಯನಂತೆ ರಾಮುಲು ಮುಂದೆ ಹೊರಟರೆ ಬೆನ್ನ ಹಿಂದೆ ಅವರದ್ದೇ 40 ಗಾಡಿಗಳು. ಅದರಲ್ಲಿ ಬಾಡಿಗಾರ್ಡ್‌ಗಳೇ ಐವತ್ತು ಜನ ಇರುತ್ತಾರೆ. ಜೊತೆಗೆ ಕೆಲವು ಹಿಂಬಾಲಕರು, ಶಾಸಕರು ಮತ್ತವರ ಚೇಲಾಗಳು... ಹೀಗೆ ಈ ಗ್ಯಾಂಗ್ ಎಷ್ಟು ದೂರ ನಡೆದರೂ ಅವೇ ಮುಖಗಳೇ ಕಾಣಿಸುತ್ತಿವೆಯಾಗಲಿ ಬಳ್ಳಾರಿಯ ಜನಸಾಮಾನ್ಯರ ಬೆಂಬಲ ಸಿಗುತ್ತಿಲ್ಲ, ಇನ್ನು ರಾಜ್ಯ ಬಿಜೆಪಿ ಲೀಡರ್‌ಗಳ ಪೈಕಿ ಒಬ್ಬನೇ ಒಬ್ಬನೂ ರೆಡ್ಡಿ ಯಾತ್ರೆಯಲ್ಲಿ ಕಾಣಿಸಿಕೊಳ್ಳುತ್ತಿಲ್ಲ.

ಈ ಯಾತ್ರೆ ಶುರುವಿಗೆ ಮುನ್ನ ರೆಡ್ಡಿಗಳ ಕೈಲಿ ತಲೆ ಬೋಳಿಸಿಕೊಂಡು ಬಂದಿದ್ದ ರಾಮುಲು ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಂತೂ ಮನೋರಂಜಕವಾಗಿತ್ತು. ಬಳ್ಳಾರಿ ರಾಘವರಂತಹ ಪ್ರಖ್ಯಾತ ಕಲಾವಿದನ ಹೆಸರನ್ನು ಸೇರಿಸಿ ಜಿಲ್ಲೆಯ ಸ್ವಾತಂತ್ರ ಹೋರಾಟಗಾರರ, ಹಿರಿಯರ, ಗಣ್ಯರ ಹೆಸರನ್ನೆಲ್ಲ ಎಳೆದು ತಂದ ರಾಮುಲು, ಸಿದ್ದರಾಮಯ್ಯನವರ ದಂಡಯಾತ್ರೆಯನ್ನು ಬಳ್ಳಾರಿ ಜಿಲ್ಲೆಯ ಜನರ ವಿರುದ್ಧದ ದಾಳಿ ಎಂಬಂತೆ ಬಿಂಬಿಸಲು ಯತ್ನಿಸಿದ್ದು ಹಾಸ್ಯಾಸ್ಪದವೂ-ಕರುಣಾಜನಕವೂ ಆಗಿತ್ತು.

# 'ಇದೊಂದು ಯೂನಿಕ್ ಅನುಭವ'

ಖ್ಯಾತ ಲೇಖಕ ದಿ. ಕೃಷ್ಣ ಆಲನಹಳ್ಳಿ ಅವರ ಪುತ್ರ ಪ್ರದ್ಯುಮ್ನ ಆಲನಹಳ್ಳಿ ಯುವ ಕಾಂಗ್ರೆಸ್‌ನ ರಾಜ್ಯ ಕಾರ್ಯಕಾರಿ ಸಮಿತಿಯ ಸದಸ್ಯ. 'ನಾಡ ಉಳಿಸಿ ನಡೆ'ಯಲ್ಲಿ ಭಾಗವಹಿಸಿರುವ ಪ್ರದ್ಯುಮ್ನ ತಾನು ಇಂತಹ ಪಾದಯಾತ್ರೆಯೊಂದರಲ್ಲಿ ಪಾಲ್ಗೊಳ್ಳುತ್ತೇನೆ ಎಂದು ಕನಸುಮನಸ್ಸಿನಲ್ಲೂ ಊಹಿಸಿರಲಿಕ್ಕಿಲ್ಲ. ಆದರೆ ಸಿದ್ಧರಾಮಯ್ಯನವರ ಅಪ್ಪಟ ...ನಾದ ಪ್ರದ್ಯುಮ್ನ ಇವತ್ತು NH ೪ ನಲ್ಲಿ ನಡೆಯುತ್ತಿದ್ದಾನೆ. ಈ ಅನುಭವದ ಬಗ್ಗೆ ಆತ ಹೇಳಿದ್ದು ಇಲ್ಲಿದೆ.

"ಮೊದಲನೆ ದಿನ ಎಷ್ಟು ಸುಸ್ತಾಗಿತ್ತೆಂದರೆ, ಕಾಲುಗಳು ಎಷ್ಟು ನೋಯುತ್ತಿದ್ದವೆಂದರೆ ಮೂರನೆ ದಿನ ನನಗೆ ನಡೆಯುವುದಕ್ಕೆ ಆಗುವುದಿಲ್ಲವೇನೋ ಅನ್ನಿಸಿತ್ತು. ಮಾರನೆ ... ಹೊಸ ಶೂ ಅನ್ನು ತೆಗೆದು ಹಳೆ ಶೂ ಅನ್ನು ಹಾಕಿಕೊಂಡೆ. ಈಗ ನಾಲ್ಕನೆ ದಿನವೂ ನಡೆಯುತ್ತಿದ್ದೇನೆ. ನನಗೆ ಇದೊಂದು ಯೂನೀಕ್ ಅನುಭವ. ಪ್ರಜಾಪ್ರಭುತ್ವದ ...ರೋಧಿಗಳನ್ನು ಮಣಿಸಲು ನಡೆಯುತ್ತಿದ್ದೇವೆ ಎಂಬುದೇ ನನ್ನಲ್ಲಿ ಹೆಮ್ಮೆ ಹುಟ್ಟಿಸುತ್ತಿದೆ.

ಎಲ್ಲೆಡೆ ಜನ ನಮ್ಮನ್ನು ಉತ್ಸಾಹದಿಂದ ಸ್ವಾಗತಿಸುತ್ತಿದ್ದಾರೆ. ಆರತಿ ಬೆಳಗುವುದು, ಹಾರ ಹಾಕುವುದು... ಇದೆಲ್ಲದರ ನಡುವೆ ಜನರ ಕಣ್ಣುಗಳಲ್ಲಿ ಕಾಣುತ್ತಿರುವ ಆಶೆ ...ಭವರಲ್ಲಾದರೂ ಪುಳಕ ಹುಟ್ಟಿಸುವಂತಿದೆ. ಜನರಿಗೂ ಇದೊಂದು ಕೆಟ್ಟ ಸರ್ಕಾರ, ದುಷ್ಟ ಸರ್ಕಾರ ಎಂಬುದು ಗೊತ್ತಾಗಿದೆ. ರೆಡ್ಡಿಗಳಿಂದಾಗಿ ರಾಜ್ಯಕ್ಕೆ ಕೆಟ್ಟ ಹೆಸರು ...ುವುದನ್ನು ತಡೆಯಿರಿ ಎಂದು ಜನ ಹೇಳುತ್ತಿದ್ದಾರೆ. ಅವರೆಲ್ಲ ನಮ್ಮ ನಡೆಗೆ ಉತ್ಸಾಹದಿಂದ ಸ್ಪಂದಿಸುತ್ತಿದ್ದಾರೆ.

ಕಾಂಗ್ರೆಸ್‌ನ ಹಿರಿಯ ನಾಯಕರು ಬರುವ ಮುನ್ನವೇ ಯುವ ಕಾಂಗ್ರೆಸ್‌ನ ನಾವು ಹಳ್ಳಿಗಳನ್ನು ಪ್ರವೇಶಿಸಿ ಬೀದಿ ನಾಟಕಗಳನ್ನು ಮಾಡುತ್ತಿದ್ದೇವೆ. ವ್ಯಂಗ್ಯಚಿತ್ರಗಳ ...ರ್ಶನ, ಕರಪತ್ರಗಳ ಹಂಚಿಕೆ ಎಲ್ಲಾ ನಡೆಯುತ್ತಿದೆ. ರಾತ್ರಿ ಹೊತ್ತು ನಾವು ತಂಗಿದಲ್ಲಿ ಗಣಿಗಾರಿಕೆ ಕುರಿತು ಸಾಕ್ಷ್ಯಚಿತ್ರದ ಪ್ರದರ್ಶನವೂ ನಡೆಯುತ್ತಿದೆ.

ಕಳೆದ ಚುನಾವಣೆಯಲ್ಲಿ ಸೋತ ನಂತರ ನಮ್ಮ ಕಾರ್ಯಕರ್ತರಲ್ಲಿ ಉತ್ಸಾಹವೇ ಉಳಿದಿರಲಿಲ್ಲ. ಆದರೀಗ ಎಲ್ಲರಲ್ಲಿ ಎಷ್ಟು ಕಿಚ್ಚು ಹೊತ್ತುಕೊಂಡಿದೆ ಎಂದರೆ ...ೇನಾಗಲಿ ಬಳ್ಳಾರಿ ತನಕ ಇಷ್ಟೇ ಉತ್ಸಾಹದಿಂದ ನಡೆಯುತ್ತೇವೆ ಎಂಬ ಹುಮ್ಮಸ್ಸು ಇದೆ.

ಬಿ.ಎಲ್. ಶಂಕರ್, ರಮಾನಾಥ್ ರೈ ತರದ ಹಿರಿಯ ನಾಯಕರು ಯುವಕರಿಗಿಂತ ಜೋರಾಗಿ ನಡೆಯುತ್ತಿದ್ದಾರೆ. ಮಹಿಳಾ ಕಾಂಗ್ರೆಸ್ ನಾಯಕಿಯರಂತೂ ಸುಸ್ತು ...ಡಿಕೊಳ್ಳದೇ ಮುನ್ನುಗ್ಗುತ್ತಿದ್ದಾರೆ. ಹಾಗೆಯೇ ಹೊಸ ತಲೆಮಾರಿನ ನಾಯಕರಾದ ಅಜಯ್ ಸಿಂಗ್, ದಿನೇಶ್ ಗುಂಡೂರಾವ್, ನಿವೇದಿತ್ ಆಳ್ವಾ, ಪ್ರಿಯಾಂಕ ಖರ್ಗೆ, ...ುಕೃಷ್ಣ ಸಂತೋಷ್ ಲಾಡ್, ಡಾ. ಸುಧಾಕರ್ ಎಲ್ಲರೂ ಉತ್ಸಾಹಭರಿತರಾಗಿದ್ದಾರೆ. ಯುವ ಕಾಂಗ್ರೆಸ್ ನಾಯಕ ಕೃಷ್ಣ ಭೈರೇಗೌಡ ಎಲ್ಲರಿಗಿಂತ ಹೆಚ್ಚು ಶ್ರಮ ಮತ್ತು ...ವಾಬ್ದಾರಿ ವಹಿಸಿಕೊಂಡು ಯುವ ಕಾಂಗ್ರೆಸ್ಸಿಗರಿಗೆ ಮಾದರಿ ಆಗಿದ್ದಾರೆ.

...ಹೋಯಿತು. ಅನಾಮಿಕಳಂತಿದ್ದ ಶಾಂತ ಎಂಬ ...ನ್ನು ಆಂಧ್ರದಿಂದ ಕರೆತಂದು ಬಳ್ಳಾರಿಯಲ್ಲಿ ನಿಲ್ಲಿಸಿ ...ಂಡರಾದರೂ ಅಲ್ಲೇ ಒಂದು ಅಪಾಯದ ರೆಡ್ ... ಹತ್ತಿಕೊಂಡಿತ್ತು. ಕಾಂಗ್ರೆಸ್ ಕ್ಯಾಂಡಿಡೇಟ್ ...ಹನುಮಂತಪ್ಪನವರ ವಿರುದ್ಧ ರೆಡ್ಡಿ ಕ್ಯಾಂಡಿಡೇಟ್ ...ಗೆ ಸಿಕ್ಕಿದ್ದು ಜುಜುಬಿ 2243 ಓಟುಗಳ ಲೀಡ್ ಆಗಿತ್ತು. 1999ರಲ್ಲಿ ಸುಷ್ಮ ಸ್ವರಾಜ್‌ಳ ವಿರುದ್ಧ



...ಯಾಗೆ 52 ಸಾವಿರ ಲೀಡ್ ಸಿಕ್ಕಿತ್ತು. ಆದಾದ ... ವರ್ಷದಲ್ಲಿ ಬಳ್ಳಾರಿ ಜಿಲ್ಲೆ ಪೂರಾ ಬಿಜೆಪಿ ...ನಿಯಂತ್ರಣದಲ್ಲೇ ಇದ್ದಾಗಲೂ ರೆಡ್ಡಿಗಳಿಗೆ ಸಿಕ್ಕಿದ್ದು ಕೇವಲ ...ಮುಕ್ಕಾಲು ಸಾವಿರ ಲಿಡ್. ಅವತ್ತು ಕಾಂಗ್ರೆಸ್ ಇನ್ನೊಂದಿಷ್ಟು ಕಷ್ಟ ಪಟ್ಟಿದ್ದಿದ್ದರೆ ಶಾಂತಾ ಸೋತೇ ಹೋಗಿರುತ್ತಿದ್ದಳು. ಹೀಗೆ ಸೋಲಿನ ಅಪಾಯದಿಂದ ಸ್ವಲ್ಪದರಲ್ಲಿ ಪಾರಾದ ರೆಡ್ಡಿಗ್ಯಾಂಗ್‌ಗೆ ಇತ್ತೀಚಿನ ರಾಜಕೀಯದಲ್ಲಿ ಬರೀ ಹಿನ್ನಡೆಗಳೇ ಆಗುತ್ತಿವೆ.

ಕಾಂಗ್ರೆಸ್ ನಾಯಕರು ಬಳ್ಳಾರಿಗೆ ದಂಡೆತ್ತಿ ಬರುವಂತಹ ಕಾರಣ ಸೃಷ್ಟಿಸಿಕೊಂಡಿರುವುದಂತೂ ರೆಡಿಗಳ ಪಾಲಿಗೆ ಒಂದು ಲಾರಿ ಲೋಡ್ ಅದಿರನ್ನು ಗಂಟಲಲ್ಲಿ ತುರುಕಿಕೊಂಡಂತಾಗಿ ಹೋಗಿದೆ.

### ಬಳ್ಳಾರಿ ಕಾಂಗ್ರೆಸ್‌ಗೆ ಬಲ

ಬಳ್ಳಾರಿಯಲ್ಲಿದ್ದ ಕಾಂಗ್ರೆಸ್ ಹಾಗೂ ಜೆಡಿಎಸ್ ಲೀಡರ್‌ಗಳನ್ನೆಲ್ಲಾ ಬಾಡಿಗೆ, ಕ್ರಯ, ಭೋಗ್ಯದ ಆಧಾರದ ಮೇಲೆ ಹೋಲ್‌ಸೇಲಾಗಿ ಖರೀದಿಸಿದ್ದ ರೆಡ್ಡಿಗಳು ಜಿಲ್ಲೆಯಲ್ಲಿ ಯಾರೂ ತಮ್ಮ ವಿರುದ್ಧ ದನಿ ಎತ್ತದಂತೆ ನೋಡಿಕೊಂಡಿದ್ದರು. ಆದರೆ ಈಗ ಬಳ್ಳಾರಿಗೆ ದಾಳಿ ಮಾಡುತ್ತಿರುವುದು ಸಿದ್ದರಾಮಯ್ಯ!

ಇದು ಬಳ್ಳಾರಿಯ ಸಮಸ್ತ ಹಿಂದುಳಿದ ಜನಾಂಗದವರಲ್ಲಿ ಸಂಚಲನ ಮೂಡಿಸಿಬಿಟ್ಟಿದೆ. ಸ್ವತಃ ಕುರುಬ ಜನಾಂಗೀಯರೇ ಬಳ್ಳಾರಿಯಾದ್ಯಂತ ಲಕ್ಷಾಂತರ ಜನರಿದ್ದಾರೆ. ಇದನ್ನೆಲ್ಲಾ ನೋಡಿ ಜಿಲ್ಲಾ ಕಾಂಗ್ರೆಸ್ ನಾಯಕರಿಗೆ ಮಾತ್ರವಲ್ಲ, ಈ ಹಿಂದೆ ಕಾಂಗ್ರೆಸ್ ಬಿಟ್ಟುಹೋಗಿದ್ದವರಿಗೂ ಮತ್ತೆ ಕಾಂಗ್ರೆಸ್ ಸೆಳೆತ ಶುರುವಾಗಿದೆ. ಹಾಲಿ ಕಾಂಗ್ರೆಸ್‌ನ ಬಿ.ರಾಮ ಪ್ರಸಾದ್, ಚಿಣಕಲ್ ಬಸವನಗೌಡ, ಪೂಜಾರಿ ಗಾಜಪ್ಪ ಮುಂತಾದ ಬಲಿಷ್ಠರು ಬಳ್ಳಾರಿಯಲ್ಲಿ ಮತ್ತೆ ಕಾಂಗ್ರೆಸ್ ಕಟ್ಟಲು ರೆಡಿಯಾಗಿದ್ದಾರೆ. ಸಂಡೂರಿನ ಕಾಂಗ್ರೆಸ್ ಶಾಸಕ ತುಕಾರಾಂ ಕೂಡಾ ಈಗ ಹುರುಪಿನಿಂದ ಓಡಾಡುತ್ತಿದ್ದಾರೆ.

ಇದನ್ನೆಲ್ಲ ಗಮನಿಸಿರುವ ರೆಡ್ಡಿಗಳಿಗೆ ನಿಜಕ್ಕೂ ಭಯ ಶುರುವಾಗಿದೆ. ಅವರಿಗೆ ಗೊತ್ತಿರದ ಸತ್ಯ ಏನೆಂದರೆ; ಅವರು ಗೆದ್ದಿರುವ ಎಲೆಕ್ಷನ್‌ಗಳೆಲ್ಲ ಜನರ ಪ್ರೀತಿ ಯಿಂದ ಬಂದದ್ದಲ್ಲ, ಬದಲಾಗಿ ದುಡ್ಡಿನ ಬಲದಿಂದ ಖರೀದಿಸಿರುವುದು. ಈಗ ಮತ್ತೆ ಕಾಂಗ್ರೆಸ್ ಚಿಗುರಿಕೊಂಡರೆ ತಮ್ಮ ಕೋಟೆ ಉರುಳುವುದು ಗ್ಯಾರಂಟಿ ಅನಿಸಿಬಿಟ್ಟಿದೆ ರೆಡ್ಡಿಗಳಿಗೆ. ಹಾಗಾಗಿ ಅವರು ತಾವೇ ನೇರವಾಗಿ ಕಾಣಿಸಿಕೊಳ್ಳದೆ ತಮ್ಮ ಸಾಮ್ರಾಜ್ಯದ ನೌಕರ ರಾಮುಲುವನ್ನೇ ಮುಂದೆ ನಿಲ್ಲಿಸಿಕೊಂಡು ಯಾತ್ರೆ ಹೊರಟಿದ್ದಾರೆ. ಅವರಿಗೆ ಮುಂದಿನ ಜಿಲ್ಲಾ ಪಂಚಾಯತಿ ಎಲೆಕ್ಷನ್‌ನಲ್ಲಿ ಮಾನ ಉಳಿಸಿಕೊಳ್ಳಬೇಕಿದೆ.

ಬಳ್ಳಾರಿಯಲ್ಲಿ ಈ ರೆಡ್ಡಿಗಳಿಗೆ ಸ್ವಂತದ ಜನ ಎಂದು ಯಾವನೂ ಇಲ್ಲ, ಇರುವ ಬೆಂಬಲದಲ್ಲಿ ಅರ್ಧ ದುಡ್ಡಿನ ಮೂಲಕ ಬಂದಿರುವುದು. ಇನ್ನರ್ಧ ರಾಮುಲುವಿನ ನಾಯಕ ಜನಾಂಗೀಯರದ್ದು. ಈ ಬೆಂಬಲ ಉಳಿಯಬೇಕೆಂದರೆ ಅವರಿಗೆ ಈಗ ರಾಮುಲು ಬೇಕೇಬೇಕು. ಅದಕ್ಕಾಗಿ, ಜನರ ಭಾವನೆ ಗಳನ್ನೂ ಕೆರಳಿಸಿ Emotionable ಮಾಡಲು ರಾಮುಲುವಿನ ತಲೆ ಬೋಳಿಸಿ ಭಿಕ್ಷುಕನಂತೆ ಬಳ್ಳಾರಿಯ ರಸ್ತೆಗೆ ಇಳಿಸಿದ್ದಾರೆ.

ಆದರೆ....

ರಾಮುಲುನ ತಲೆ ಕೂದಲು ತೆಗೆಸಿದಾಕ್ಷಣ ರೆಡ್ಡಿಗಳ ತಲೆ ಉಳಿಯುತ್ತದಾ ಹೇಳಿ?




# ಜೀವರಾಜ್ ಆಳ್ವಾ ಪುತ್ರಿ ಮದುವೆ ನಟ ವಿವೇಕ್ ಓಬೇರಾಯ್‌ನೊಂದಿಗೆ!

ಈಕೆಯ ಹೆಸರು ಪ್ರಿಯಾಂಕ ಆಳ್ವಾ ಎಂದಷ್ಟೇ ಹೇಳಿದರೆ ಬಹಳಷ್ಟು ಓದುಗರಿಗೆ ಗೊತ್ತಾಗುವುದಿಲ್ಲ. ಆದರೊದಿಗೆ ಈಕೆ ಜನತಾದಳದ ದಿವಂಗತ ನಾಯಕ ಜೀವರಾಜ್ ಆಳ್ವಾ ಮತ್ತು ನೃತ್ಯಗಾರ್ತಿ ಹಾಗೂ 'ಬೆಂಗಳೂರು ಹಬ್ಬ' ಎಂಬ ಸಾಂಸ್ಕೃತಿಕ ಕಾರ್ಯಕ್ರಮದ ರೂವಾರಿ ನಂದಿನಿ ಆಳ್ವಾರ ಪುತ್ರಿ ಎಂದರೇನೇ ಸೂಕ್ತ.

ಈಗ ಹದಿಹರೆಯದವಳಾದ ಸುಂದರ ಯುವತಿ ಪ್ರಿಯಾಂಕ ಎಲ್ಲರಲ್ಲಿ ಅಚ್ಚರಿ ಮೂಡಿಸುವಂತೆ ಬಾಲಿವುಡ್ ನಟ ವಿವೇಕ್ ಓಬೇರಾಯನೊಂದಿಗೆ ಮದುವೆಯಾಗುತ್ತಿರುವ ಸುದ್ದಿ ಬಂದಿದೆ.


ವಿವೇಕ್ ಓಬೇರಾಯ್ ಅದ್ಭುತ ನಟ. ರಾಮ್‌ಗೋಪಾಲ್ ವರ್ಮ ಎಂಬ ಖ್ಯಾತ ನಿರ್ದೇಶಕನ 'ಕಂಪನಿ' ಎಂಬ ಸಿನಿಮಾದ ಮೂಲಕ ಹಿಂದಿ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟ ವಿವೇಕ್ ಆ ಚಿತ್ರದಿಂದ ಜನಪ್ರಿಯತೆಯನ್ನೂ, ವಿಮರ್ಶಕರ ಮೆಚ್ಚುಗೆಯನ್ನೂ ಗಳಿಸಿದ. ಆದರೆ ಆನಂತರ ಆತ ಹೇಳಿಕೊಳ್ಳುವಂತಹ ಚಿತ್ರಗಳಲ್ಲೇನೂ ನಟಿಸಿಲ್ಲ. ಈ ಮಧ್ಯೆ ಸಾಮಾಜಿಕ ಕಾಳಜಿಯಿಂದ ವಿವೇಕ್ ಸುನಾಮಿ ನಿರಾಶ್ರಿತರಿಗಾಗಿ ದುಡಿದ. ಆನಂತರ ಕೆಲಕಾಲ ಕರ್ನಾಟಕದ ಕೌಬಾಯ್ ಸ್ವಾಮಿ ರಾಘವೇಶ್ವರನೊಂದಿಗೂ ಗುರುತಿಸಿಕೊಂಡಿದ್ದ.



ಇದೆಲ್ಲದರ ಮಧ್ಯೆ ಹಲವಾರು ಯಡವಟ್ಟುಗಳನ್ನು ಮಾಡಿಕೊಂಡ. ಆಗ ತಾನೇ ನಟ ಸಲ್ಮಾನ್ ಖಾನ್‌ಗೆ 'ಟೂ' ಹೇಳಿದ್ದ ನಟಿ ಐಶ್ವರ್ಯ ರಾಯ್ ವಿವೇಕನ ಸ್ನೇಹ ಗಳಿಸಿದಳು. ಇದನ್ನು ಕಂಡು ಕುಪಿತನಾದ ಸಲ್ಮಾನ್ ವಿವೇಕನಿಗೆ ಬೆದರಿಕೆಯ ಕರೆಗಳನ್ನು ಮಾಡಿದ್ದ. ಇಂತಹದ್ದನ್ನೆಲ್ಲ ಒಳಗೊಳಗೇ ಇತ್ಯರ್ಥ ಮಾಡಿಕೊಳ್ಳುವ ಬದಲು ಮಾಧ್ಯಮಗಳ ಮುಂದೆ ಹೇಳಿಕೊಂಡ ವಿವೇಕನದ್ದು 'ಎಳಸು ಬುದ್ಧಿ' ಎಂದು ಚಿತ್ರರಂಗದವರಿಂದ ಬೈಸಿ ಕೊಂಡಿದ್ದ.

ಇಂತಹ ವಿವೇಕ್ ಅದು ಹೇಗೆ, ಯಾವಾಗ ಪ್ರಿಯಾಂಕ ಆಳ್ವಾಳ ಪರಿಚಯ ಮಾಡಿಕೊಂಡನೋ ಗೊತ್ತಿಲ್ಲ. ಅಮೆರಿಕದಲ್ಲಿ ವಿದ್ಯಾಭ್ಯಾಸ ಮುಗಿಸಿದನಂತರ ತನ್ನ ತಾಯಿ ನಂದಿನಿ ನಡೆಸುವ ಬ್ಯೂಟಿ ಪಾರ್ಲರ್‌ಗಳ ಜವಾಬ್ದಾರಿ ವಹಿಸಿಕೊಂಡು, ಬೆಂಗಳೂರು ಹಬ್ಬ ಸಂದರ್ಭದಲ್ಲಿ ತಾಯಿಗೆ ನೆರವು ನೀಡುತ್ತಿರುವ ಪ್ರಿಯಾಂಕ ಮತ್ತು ವಿವೇಕ್ ನಡುವೆ ಪ್ರೇಮಾಂಕುರವಾಯಿತಂತೆ. ಈಗ ಅವರಿಬ್ಬರೂ ಬರುವ ಸೆಪ್ಟೆಂಬರ್ ತಿಂಗಳ 29 ರಂದು ಹಸೆಮಣೆ ಏರಲು ನಿಶ್ಚಯಿಸಿದ್ದಾರಂತೆ.

ವಿವೇಕ್ ಎಂಬ ಅದ್ಭುತ ನಟನಿಗೂ, ಪ್ರಿಯಾಂಕ ಎಂಬ ಸುಂದರ ಯುವತಿಗೂ ನಮ್ಮ ಶುಭ ಹಾರೈಕೆಗಳು.



# 'ಇದು ನಮ್ಮ ಭವಿಷ್ಯದ ಪ್ರಶ್ನೆ'



ಕೃಷ್ಣ ಭೈರೇಗೌಡರ ಅಧ್ಯಕ್ಷತೆಯಲ್ಲಿ ರಾಜ್ಯ ಯುವ ಕಾಂಗ್ರೆಸ್‌ನ ನೂರಾರು ಯುವಕರು ಈ ಪಾದಯಾತ್ರೆಯಲ್ಲಿ ಹುರುಪಿನಿಂದ ಭಾಗವಹಿಸುತ್ತಿದ್ದಾರೆ. ಅಷ್ಟೇ ಅಲ್ಲ, ಸ್ವತಃ ಕೃಷ್ಣ ಭೈರೇಗೌಡರಿಗೂ ...ದೊಂದು ಅರ್ಥಪೂರ್ಣವಾದ ಕಾರ್ಯಕ್ರಮವಾಗಿದೆ.


ಅವರೇ ಹೇಳಿದಂತೆ: "ನನ್ನ ಅಪ್ಪನ ಕಾರಣದಿಂದ ನಾನು ಸುಲಭವಾಗಿ ರಾಜಕೀಯಕ್ಕೆ ಪ್ರವೇಶ ...ಪಡೆದೆ. ನಾನೆಂದೂ ಇಂತಹ ಹೋರಾಟದಲ್ಲಿ ಭಾಗವಹಿಸಿದವನಲ್ಲ. ಆದ್ದರಿಂದ ಈ ಪಾದಯಾತ್ರೆ ನನ್ನ ಪಾಲಿಗೆ ಒಂದು ಐತಿಹಾಸಿಕ ಅವಕಾಶವಾಗಿದೆ. ವೈಯಕ್ತಿಕ ಮಟ್ಟಿಗೆ ಹೇಗೆ ಜನರಲ್ಲಿಗೆ ...ಹೋಗುವ ಮೂಲಕ ನನ್ನ ಅನುಭವದಲ್ಲಿದ್ದ ರಾಜಕೀಯ ಕೊರತೆಯನ್ನು ನೀಗಿಸಿಕೊಂಡಂತಾಗಿದೆ. ...ಜನರಲ್ಲಿಗೇ ಹೋಗುವ ಮೂಲಕ ನಮ್ಮಲ್ಲಿ ಇನ್ನಷ್ಟು ಪರಿಪಕ್ವತೆ ಖಂಡಿತವಾಗಿಯೂ ಮೂಡುತ್ತದೆ.

ಇನ್ನು ರಾಜಕೀಯ ಮಟ್ಟದಲ್ಲಿ ನೋಡುವುದಾದರೆ ನಮ್ಮ ಪಕ್ಷದಲ್ಲಿ ಒಗ್ಗಟ್ಟನ್ನು ಮೂಡಿಸಿದೆ, ...ಕಾಂಗ್ರೆಸ್‌ನಲ್ಲಿ ಸಂಚಲನವನ್ನು ತಂದಿದೆ. ಯುವ ಕಾಂಗ್ರೆಸ್ ಸದಸ್ಯರಲ್ಲಂತೂ ಒಂದು ಹೊಸ ತಾರುಣ್ಯವನ್ನು ...ಸೃಷ್ಟಿಸಿದೆ.

ಈ ಪಾದಯಾತ್ರೆ ಕೇವಲ ಬಿಜೆಪಿಯ ವಿರುದ್ಧದ್ದಲ್ಲ, ಬದಲಾಗಿ ಅಪ್ರಜಾತಂತ್ರದ ...ವಿರುದ್ಧವಾಗಿರುವುದರಿಂದ ಜನ ಕೂಡ ಸ್ಪಂದಿಸುತ್ತಿದ್ದಾರೆ. ಈ ಹೋರಾಟ ಸರಿಯಾದದ್ದು, ನಾವು ...ನಿಮ್ಮೊಂದಿಗಿದ್ದೇವೆ ಎನ್ನುತ್ತಿದ್ದಾರೆ. ಗೋಕಾಕ್ ಚಳವಳಿ ಮತ್ತು ನರಗುಂದ-ನವಲಗುಂದ ಹೋರಾಟಗಳ ...ನಂತರ ಕರ್ನಾಟಕದಲ್ಲಿ ದೊಡ್ಡ ಹೋರಾಟಗಳು ನಡೆದಿಲ್ಲ. ಆದ್ದರಿಂದ ಈ ಹೋರಾಟವನ್ನು ಬಳ್ಳಾರಿ ...ತನಕ ಮಾತ್ರ ತೆಗೆದುಕೊಂಡು ಹೋಗದೆ ಅಂತಿಮ ಗುರಿ ಮುಟ್ಟುವತನಕ ಕಾಂಗ್ರೆಸ್ ಹೋರಾಡಬೇಕು ಎಂದೇ ಜನ ಭಾವಿಸುತ್ತಿದ್ದಾರೆ ಎಂದು ನನಗನ್ನಿಸುತ್ತಿದೆ. ...ಸಾಧ್ಯವಾಗಬೇಕಾದರೆ ಈ ಹೋರಾಟದೊಂದಿಗೆ ಜನಸಾಮಾನ್ಯರೂ ಕೈಜೋಡಿಸಬೇಕಿದೆ.

ಈ ಪಾದಯಾತ್ರೆಯಲ್ಲಿ ಯುವ ಕಾಂಗ್ರೆಸ್ಸಿಗರು ಮುಂದೆ ನಿಂತಿರುವುದಕ್ಕೆ ಎರಡು ಕಾರಣಗಳಿವೆ. ಮೊದಲನೆಯದು ಅವರ ಉತ್ಸಾಹ, ಎರಡನೆಯದು ಈ ಹೋರಾಟ ಅವರ ಭವಿಷ್ಯ ಕೂಡ ಆಗಿರುವುದು."

# ಚಿತ್ರದುರ್ಗ: ತಹಶೀಲ್ದಾರ್ ಕುಮಾರಸ್ವಾಮಿಯ ಸ್ವಾಹಾ ಪುರಾಣ



ಚಿತ್ರದುರ್ಗದ ತಹಶೀಲ್ದಾರ್ ಕುಮಾರಸ್ವಾಮಿ ಹಾದಿ ಬೀದಿಯಲ್ಲಿ ಮಾತನಾಡುವವರಿಗೆ ಆಹಾರವಾಗುವಷ್ಟು ಅಗ್ಗದ ಕಲೆಕ್ಷನ್ ಗಿರಾಕಿಯಾಗಿಬಿಟ್ಟಿದ್ದಾನೆ. ಬಂದು ಇನ್ನೂ ವರ್ಷ ಕೂಡಾ ಕಳೆದಿಲ್ಲ, ಕುಖ್ಯಾತಿ ಮಾತ್ರ ಜನ್ಮಕ್ಕಾಗುವಷ್ಟು ಗಳಿಸುತ್ತಿದ್ದಾನೆ ಎರಡು ವರ್ಷಗಳ ಕಾಲ ಪ್ರಾಥಮಿಕ ಶಾಲೆಯ ಶಿಕ್ಷಕನಾಗಿ ಕಾರ್ಯನಿರ್ವಹಿಸಿರುವ ಈತ ದುಡ್ಡು ಬಾಚಲಿಕ್ಕೆಂದೇ ಕೆಎಎಸ್ ಪರೀಕ್ಷೆ ಪಾಸು ಮಾಡಿಕೊಂಡು ತಹಶೀಲ್ದಾರ್ ಹುದ್ದೆಗೆ ಬಂದಂತಿದೆ. ಅದ್ಯಾವುದೋ ವರಸೆಯಲ್ಲಿ ನಾನು ಕಡೂರು ಎಂಎಲ್ಎ ಸಂಬಂಧಿ ಅಂತಾ ಬೇರೆ ಹೇಳಿಕೊಳ್ಳುತ್ತಿರುತ್ತಾನೆ.

ಹತ್ತು ತಿಂಗಳ ಕೆಳಗೆ ಸಾಹೇಬರು ದುರ್ಗದ ತಹಶೀಲ್ದಾರ್ ಕಚೇರಿಗೆ ಬಂದಾಗ ತುಂಬಾ ಸ್ಟ್ರಿಕ್ಟು ಎಂಬಂತೆ ಫೋಜು ಕೊಟ್ಟಿದ್ದೇ ಕೊಟ್ಟಿದ್ದು. ಒಂದೇ ಒಂದು ಫೈಲು ಪೆಂಡಿಂಗ್ ಇಡೋ ಹಾಗಿಲ್ಲ, ಕಚೇರಿಯಲ್ಲಿದ್ದ ಫೈಲುಗಳೆಲ್ಲಾ ಖಾಲಿಯಾಗಿ ಬಿಡುತ್ತವೇನೋ ಎಂಬಷ್ಟು ಸ್ಪೀಡು. ಮೇಷ್ಟ್ರು ಕೆಲಸ ಮಾಡಿಕೊಂಡಿದ್ದವ ಜನಸಾಮಾನ್ಯರ ಕಷ್ಟಗಳ ಅರಿತವ ಇದ್ದರೂ ಇರಬಹುದು ಎಂದೇ ಕಚೇರಿ ನೌಕರರು ಭಾವಿಸಿದರು. ಎರಡು ತಿಂಗಳು ಕಳೆಯುವಷ್ಟರಲ್ಲಿ ಸಾಹೇಬರು ಫುಲ್ ಚೇಂಜ್. ಕಚೇರಿಯ ಪ್ರೊಸಿಜರುಗಳೆಲ್ಲಾ ಈತನಿಗೆ ಆದಾಯ ತರುವ ರಹದಾರಿಗಳಾದವು. ಈ ರಹದಾರಿಗಳನ್ನು ಶೋಧಿಸಲಿಕ್ಕೆ ಎದ್ದುಬಿದ್ದು ಫೈಲುಗಳನ್ನೆಲ್ಲಾ ತಡಕಾಡಿದನಾ ಎಂಬ ಸತ್ಯ ಆಗ ಹೊಳೆಯತೊಡಗಿತು. ಕೂದಲು ಹಣ್ಣಾಗುವಷ್ಟು ಸರ್ವೀಸ್ ಮಾಡಿರುವ ನೌಕರರೆಲ್ಲಾ ಗಾಬರಿಯಾಗುವಷ್ಟು ಚಾಕಚಕ್ಯತೆಯಿಂದ ಈತ ವಸೂಲಿ ದಂಧೆಗಿಳಿದ.

ಚಿತ್ರದುರ್ಗಕ್ಕೀಗ ಮೈನಿಂಗ್ ದಂಧೆಯಲ್ಲಿ ಬಳ್ಳಾರಿಯ ನಂತರದ ಸ್ಥಾನ. ಅಕ್ರಮ ದಂಧೆ ಮೇರೆ ಮೀರಿ ನಡೆಯುತ್ತಿದೆ. ಈ ದಂಧೆ ನಡೆಸುವ ಕಂಪನಿಗಳ ಲೂಪ್‌ಹೋಲ್ಸ್ ಹಿಡಿದು ತಿಂಗಳಿಗಿಷ್ಟು ಸಂದಾಯವಾಗುವಂತೆ ನೋಡಿಕೊಳ್ಳುತ್ತಿದ್ದಾನೆ. ಸೀಸಾಗೋವ, ಬಿಬಿಎಚ್ ಮೈನ್ಸ್‌ಗಳಂಥ ದೊಡ್ಡ ಕಂಪನಿಗಳಿಂದ ಹಿಡಿದು ಸಣ್ಣಪುಟ್ಟ ದಂಧೆ ನಡೆಸುವವರೆಗೂ ಈತನ ಕೈಚಳಕದ ಪ್ರದರ್ಶನವಾಗಿದೆ. ಚಿತ್ರದುರ್ಗದ ಮೈನ್ಸ್ ದಂಧೆಯಲ್ಲಿ ಮುಂಚೂಣಿಯಲ್ಲಿರುವ ಭೀಮಸಮುದ್ರದ ಅಡಿಕೆ ಧಣಿಗಳೇ ಅಸಮಾಧಾನ ವ್ಯಕ್ತಪಡಿಸುವಷ್ಟು ಅತಿಗೆ ಹೋಗಿದ್ದಾನೆಂದರೆ ಪರಿಸ್ಥಿತಿ ಹೇಗಿರಬಹುದು ಎಂಬುದನ್ನು ಊಹಿಸಿ.

ಅದಿರು ಮೈನಿಂಗ್ ದಂಧೆಯ ಜೊತೆಗೆ ದುರ್ಗದ ಸುತ್ತ ನಡೆಯುತ್ತಿರುವ ಕಲ್ಲುಗಣಿ ದಂಧೆ ಕೂಡಾ ಈತನ ಬೇನಾಮಿ ಆದಾಯದ ಮೂಲ. ಸೀಬಾರದ ಬಳಿ ಇರುವ ಸೌಭಾಗ್ಯಮ್ಮ W/o ನಿಂಗಪ್ಪ ಬುರುಜನಹಟ್ಟಿ ಇವರ ಹೆಸರಿನಲ್ಲಿರುವ ಆರ್.ಎನ್.ಆರ್. ಇಟ್ಟಿಗೆ ಭಟ್ಟಿ, ಎಸ್. ಈಶ್ವರಪ್ಪ ಬಿನ್ ಸಿದ್ದಪ್ಪ ಗುತ್ತಿನಾಡು ಇವರು ಕಲ್ಲುಗಣಿಗೆ ಪರ್ಮಿಟ್ ಪಡೆದಿರುವುದು ಕೇವಲ $2^1/_2$ ಎಕರೆಗೆ ಮಾತ್ರ. ಕಿರುಬನಕಲ್ಲು ಸ.ನಂ. 10/2 ರ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿಕೊಂಡು ಕಲ್ಲುಗಣಿಗಾರಿಕೆ ಮಾಡುತ್ತಿದ್ದಾರೆ. 6 ಎಕರೆ ವ್ಯಾಪ್ತಿಯಲ್ಲಿ ನಿರಂತರವಾಗಿ ಕ್ರಷಿಂಗ್ ವರ್ಕ್ ನಡೆಯುತ್ತಿದೆ.

ಈಚಲುನಾಗೇನಹಳ್ಳಿಯ ಬಂಡೆರುದ್ರಪ್ಪ 4 ಎಕರೆ ಪರ್ಮಿಟ್ ಪಡೆದು 10 ಎಕರೆಗೂ ಹೆಚ್ಚು ವಿಸ್ತೀರ್ಣದಲ್ಲಿ ಕಲ್ಲು ಗಣಿಗಾರಿಕೆ ಮಾಡುತ್ತಿದ್ದಾರೆ. ಜೆಡಿಎಸ್ ಮುಖಂಡ ಆನಂದಪ್ಪ ಅಲಿನೇಶನ್ ಇಲ್ಲದೇ 5–6 ಎಕರೆಯಲ್ಲಿ ಕ್ರಷಿಂಗ್ ವರ್ಕ್ ನಡೆಸುತ್ತಿದ್ದಾನೆ. ತಾಲ್ಲೂಕು ಪಂಚಾಯ್ತಿ ಸದಸ್ಯ ವೀರೇಶ್ ಸೀಬಾರದ ರಾಜೇಂದ್ರ ಕುಮಾರ್ ಎಂಬುವರ ಜಮೀನಿನಲ್ಲಿ ಜಲ್ಲಿ ಕ್ರಷರ್ ನಡೆಸುತ್ತಿದ್ದಾನೆ. ಅಮೃತ ಸ್ಟೋನ್ ಕ್ರಷರ್ಸ್‌ನ ವೆಂಕಟೇಶ್ ಅಲಿನೇಶನ್ ಒಂದು ಕಡೆ ಮಾಡಿಕೊಂಡು ಮತ್ತೊಂದು ಕಡೆ ಜಲ್ಲಿ ಕ್ರಷಿಂಗ್ ವರ್ಕ್ ಮಾಡುತ್ತಿದ್ದಾನೆ.

ಈ ಘಟಕಗಳು ಮೈನಿಂಗ್ ನಿಯಮಾವಳಿಗಳನ್ನೆಲ್ಲಾ ಗಾಳಿಗೆ ತೂರಿ ದಂಧೆ ನಡೆಸುತ್ತಿವೆ ಎಂಬ ಸತ್ಯವನ್ನು ತಹಸೀಲ್ದಾರ್ ಸಾಹೇಬ ಪತ್ತೆಹಚ್ಚಿದ್ದಾನಾದರೂ ಅವರ ಮೇಲೆ ಕ್ರಮ ಕೈಗೊಳ್ಳುವ ಕೆಲಸಕ್ಕೆ ಮುಂದಾಗುತ್ತಿಲ್ಲ, ಸುತ್ತಮುತ್ತಲ ರೈತರ ದೂರುಗಳನ್ನು ಪುರಸ್ಕರಿಸಿಲ್ಲ. ಕಡ್ಲೆಪುರಿ ತಿನ್ನುವ ಅಭ್ಯಾಸವಂತೂ ಸಾಹೇಬರಿಗಿಲ್ಲ, ಹಾಗಾಗಿ ಭರ್ಜರಿ ಭೋಜನವನ್ನೇ ಮಾಡುತ್ತಿದ್ದಾರೆ.

ಗಣಿ ದಂಧೆ ಬಿಟ್ಟರೆ ಸಾಹೇಬರ ಇನ್ನೊಂದು ಆದಾಯದ ಮೂಲ ಖಾತೆ ಬದಲಾವಣೆ. ರೆವಿನ್ಯೂ ನಿಯಮಾವಳಿ ಪ್ರಕಾರ ವಿಲೇಜ್ ಅಕೌಂಟೆಂಟ್ ನಂತರ ರೆವಿನ್ಯೂ ಇನ್ಸ್‌ಪೆಕ್ಟರ್ ಪರಾಮರ್ಶಿಸಿ ಖಾತೆ ಮಾಡುತ್ತಾರೆ. ಇದನ್ನು ದೃಢಪಡಿಸಿಕೊಂಡೇ ಸಬ್‌ರಿಜಿಸ್ಟ್ರಾರ್ ಆಸ್ತಿ ನೊಂದಣಿ ಮಾಡುತ್ತಾರೆ. ಆಕ್ಷೇಪಣೆಗಳೇನಾದರೂ ಇದ್ದಲ್ಲಿ ನೇರವಾಗಿ ಉಪ-ವಿಭಾಗಾಧಿಕಾರಿಗಳ ಬಳಿಗೆ ಹೋಗುತ್ತವೆ. ಆಸ್ತಿಗಳು ನೋಂದಣಿ ವಿವರ ಆನ್‌ಲೈನ್‌ನಲ್ಲಿ ನೋಂದಣಿಯಾದ ತಕ್ಷಣ ತಹಶೀಲ್ದಾರ್ ಸಾಹೇಬರು ಸಂಬಂಧಪಟ್ಟ ಫೈಲ್ ತರಿಸಿಕೊಂಡು ಅದರ ಮೇಲೆ 79 A&B ಎಂದು ಟಿಪ್ಪಣಿ ಬರೆಯುತ್ತಾರೆ. ಇದು ಕೃಷಿಯೇತರ ವರಮಾನ ಇರುವ ವ್ಯಕ್ತಿಗಳು ಜಮೀನು ಖರೀದಿಸುವುದನ್ನು ನಿರ್ಬಂಧಿಸುವ ನಿಯಮ.

ಖರೀದಿಸುವ ಕೃಷಿ ಜಮೀನಿನ ಮಾರುಕಟ್ಟೆ ದರವನ್ನು ಅಂದಾಜಿಸಿ ಕಪ್ಪಕಾಣಿಕೆ ಸಲ್ಲಿಸಬೇಕು. ಇದರಿಂದ ತಪ್ಪಿಸಿಕೊಳ್ಳುವ ದಾರಿಯೇ ಇರುವುದಿಲ್ಲ, ಇಂತಹ ಕಾಣಿಕೆಗಳು ಸಲ್ಲುವುದರಿಂದಲೇ ಕೃಷ್ಣಾ ನರ್ಸಿಂಗ್ ಹೋಂ ಎದುರು ಇರುವ ಕ್ಲಾತ್ ಸೆಂಟರ್ ಮಾಲೀಕ ಮೋತಿಲಾಲ್ ಎಂಬ ಮಾರ್ವಾಡಿಗೆ 21/4 ಸ.ನಂ.ನ ಎರಡು ಎಕರೆ ಜಮೀನನ್ನು ಖಾತೆ ಮಾಡಿಕೊಡಲಾಗಿದೆ.

ಒಂದು ಗುಂಟೆ ಜಮೀನಿನ ಮಾಲೀಕತ್ವವೂ ಇಲ್ಲದ SMST ಲಾರಿ ಟ್ರಾನ್ಸ್‌ಪೋರ್ಟ್‌ನ ರಿಯಾಜ್ ಉದ್ದೀನ್, ನಯಾಜ್ ಉದ್ದೀನ್ ಹಾಗೂ ಇನ್ನೊಬ್ಬ ಸಹೋದರನ ಹೆಸರಿಗೆ ಕಾಪ್ರಾ ಪೆಟ್ರೋಲ್ ಬಂಕ್ ಬಳಿ 4–5 ಎಕರೆ ಜಮೀನನ್ನು ಖಾತೆ ಮಾಡಲಾಗಿದೆ. ಈ ಪ್ರಕರಣದಲ್ಲಿ ಉಪವಿಭಾಗಾಧಿಕಾರಿಗಳ ಕಚೇರಿಯ ಮ್ಯಾನೇಜರ್ ಚಂದ್ರಶೇಖರ್ ಇಡೀ ಡೀಲ್ ಕುದುರಿಸಿದ್ದಾನೆ. ವಿಚಾರಣೆ ನಡೆಸಿದರೆ ಸತ್ಯಾಂಶ ಬಹಿರಂಗಗೊಳ್ಳುತ್ತದೆ.

ಮೈನ್ಸ್ ದಂಧೆಯಲ್ಲಿರುವ ಬಳ್ಳಾರಿಯ ನಾಗೇಶ್ವರರಾವ್ ಎಂಬಾತ 50–60 ಲಾರಿಗಳು, 10–15 ಜೆಸಿಬಿಗಳ ಮಾಲೀಕ. ಬಳ್ಳಾರಿಯ ತಹಸೀಲ್ದಾರ್ ಈತನಿಗೆ ಕೃಷಿಯೇತರ ವರಮಾನ ಇಲ್ಲ ಅಂತಾ ವರದಿ ಕೊಟ್ಟಿದ್ದಾರೆ. ಇದೇ ಆಸಾಮಿಗೆ ಸ.ನಂ. 15/1, 15/2, 15/3, 15/4, ರಲ್ಲಿ ಸುಮಾರು 26 ಎಕರೆ ಜಮೀನನ್ನು ಚಿತ್ರದುರ್ಗದ ತಹಸೀಲ್ದಾರ್ ಸಾಹೇಬ ಖಾತೆ ಮಾಡಿಕೊಟ್ಟಿದ್ದಾನೆ. ಇದನ್ನು ಹಾಗೆ ಸುಮ್ಮನೆ ಎಂಬಂತೆ ಮಾಡಿಕೊಟ್ಟಿಲ್ಲ. ಇಷ್ಟೆಲ್ಲಾ ಮಾಹಿತಿಯನ್ನು ತಲಾಶ್ ಮಾಡಿ ತನ್ನ ಪಾಲಿನ ವ್ಯವಹಾರವನ್ನು ದಕ್ಕಿಸಿಕೊಂಡೇ ಖಾತೆ ಮಾಡಿದ್ದಾನೆ.

ಚಿತ್ರದುರ್ಗದ ರಾಷ್ಟ್ರೀಯ ಹೆದ್ದಾರಿ 4, ರಾಷ್ಟ್ರೀ[ಯ] ಹೆದ್ದಾರಿ 13, ಚಳ್ಳಕೆರೆ, ಬೆಂಗಳೂರು ರಸ್ತೆಯ ಆಸುಪಾಸಿ[ನ] ಜಮೀನು ಖರೀದಿಸಿ-ಖಾತೆ ಮಾಡಿಕೊಳ್ಳುವ ಬಹುತೇಕ[ರಿ]... ತಹಶೀಲ್ದಾರ್ ಸಾಹೇಬರ ಬರೆಯುವ 79 A&... ಟಿಪ್ಪಣಿಯ ಅರ್ಥ ಏನೆಂದು ಅರಿವಾಗಿದೆ. ಪ್ರತಿ ಖಾ... ಅಲಿಯನೇಶನ್‌ಗೆ ಇಂತಿಷ್ಟು ಎಂದು ಮದಗಲೇಬೇ... ಕಚೇರಿಯ ಫೈಲುಗಳಿಗೆ ಹೆಜ್ಜೆಹೆಜ್ಜೆಗೂ ಟಿಪ್ಪಣಿ ದಾಖಲಿ... ಬೆನ್ನತ್ತುವ ಉದ್ದೇಶ ತಿಳಿದ ನಂತರ ಇಡೀ ಕಚೇರಿ... ನೌಕರರು ತಹಶೀಲ್ದಾರ್ ಸಾಹೇಬನ ಹೊಟ್ಟೆಬಾಕತನ... ದಂಗು ಹೊಡೆದು ಹೋಗಿದ್ದಾರೆ.

ಈತನ ನುಂಗುವ ಪರಿಯನ್ನು ತಿಳಿದು ಡಿ.ಸಿ. ಅ... ಅಮ್ಲಾನ್ ಬಿಸ್ವಾಸ್ ಮೂರ್ನಾಲ್ಕು ಬಾರಿ ಕರೆಸಿ ನೀರಿ... ಕಳುಹಿಸಿದ್ದಾರೆ. ಈತನ ವರ್ಗಾವಣೆಗೆ ಶಿಫಾರಸ್ಸು ಮಾಡಿದ್ದಾ... ಆದರೆ ಯಾವುದೂ ವರ್ಕ್‌ಔಟ್ ಆದಂತೆ ಕಾಣಿಸುತ್ತಿ... "ಜಿಲ್ಲಾ ಉಸ್ತುವಾರಿ ಸಚಿವ ಕರುಣಾಕರ ರೆಡ್ಡಿ ಹೇಳಿದ್ದಾ... ನಾನು ಇಲ್ಲೇ ಇರ್ತಿನಿ" ಅಂತಾ ರೈಲು ಬಿಡುತ್ತಾ ತ... ನುಂಗುವ ಕಾಯಕ ಮುಂದುವರೆಸುತ್ತಿದ್ದಾನೆ.


ಈ ನಡುವೆ ಕಳೆದ ಏಪ್ರಿಲ್ 14 ರಿಂದ ಮೊ... ಗ್ರಾಮ ಪಂಚಾಯ್ತಿ ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆ ಪ್ರಕ್ರಿ... ನಡೆಯುವವರೆಗೂ ಸುಮಾರು 18–20 ಗ್ರಾಮ ಪಂಚಾ... ಗಳಿಗೆ ಆಡಳಿತಾಧಿಕಾರಿಯಾಗಿದ್ದ ಈತ ಕೋಟಿಗಟ್ಟ... ಅನುದಾನ ಬಿಡುಗಡೆ ಮಾಡಿದ್ದಾನೆ. ಅದು ಉದ್ಯೋ... ಖಾತರಿ ಅನುದಾನ ಎಂದ ಮೇಲೆ ಕೇಳಬೇಕೆ? ಒಂದ... ಸಣ್ಣ ತನಿಖೆ ನಡೆದರೂ ಸಾಹೇಬರು ಕರ್ತವ್ಯದಲ್ಲಿ ಮುಂದು... ವರಿಯುವುದೋ ಬೇಡವೋ ಎಂಬುದು ತೀರ್ಮಾ... ವಾಗುತ್ತದೆ. ಇತ್ತೀಚೆಗೆ ತನ್ನ ಅತ್ತೆಯವರ ಹೆಸರಲ್ಲಿ ಸುಮಾ... 17 ಲಕ್ಷ ರೂಪಾಯಿ ಮೌಲ್ಯದ ಸೈಟೊಂದನ್ನು ಖರೀದಿ... ಲಾಗಿದ್ದು ಅದರ ನೋಂದಣಿ ಮಾತ್ರ ಬಾಕಿ ಇದೆ. ಸಂಬಂಧಿ... ರೊಬ್ಬರ ಹೆಸರಿನಲ್ಲಿ ಕಾರೊಂದನ್ನು ಸಹ ಖರೀದಿಸಿ, ಬ... ಮಾಡುತ್ತಿದ್ದಾನೆ. ಇದೆಲ್ಲವೂ ಡಿ.ಸಿ. ಬಿಸ್ವಾಸ್ ಗಮನ... ಬಂದಿದೆ.


ತನ್ನ ವಸೂಲಿ ದಂಧೆಗಳಿಗೆಲ್ಲಾ ಸೂಕ್ತವಾದವರ... ಆಯ್ಕೆ ಮಾಡಿಕೊಳ್ಳುವಲ್ಲೂ ಈತ ನಿಸ್ಸೀಮ. ಶಿವಾನಂ... ಎಂಬ ಸಜ್ಜನ ನೌಕರನನ್ನು ಭರಮಸಾಗರಕ್ಕೆ ಕಳುಹಿಸಿ ಪರ... ಫ್ರಾಡು ಗಿರಾಕಿ ಅಂತ ಚಳ್ಳಕೆರೆಗೆ ವರ್ಗಾವಣೆ ಮಾಡಿದ್ದ... ನೊಬ್ಬನನ್ನು ವಾಪಸು ಕರೆಸಿಕೊಂಡಿದ್ದಾರೆ. ಈತ ಡೀಲುಗಳ... ಕುದುರಿಸುವುದರಲ್ಲಿ ಸಿದ್ಧಹಸ್ತ. ಈತನ ಜೊತೆಗೆ ಹಣಕಾ... ವಸೂಲಿಗೆ ಬಳಕೆಯಾಗುತ್ತಿರುವವನು ತಹಶೀಲ್ದಾರ್... ಸಾಹೇಬನ ಡ್ರೈವರ್ ಶ್ರೀನಿವಾಸ್. ಈತನ ಮೇಲೆ ಅನುಮಾ... ಬಂದಾಗ ಸ್ಟೆಪ್ನಿಯಂತೆ ಬಳಕೆಯಾಗುವವನು ವಿಲೇಜ್... ಅಕೌಂಟೆಂಟ್ ವೇಣುಗೋಪಾಲ್. ಈತ ಮಾಜಿ ಬ... ಡ್ರೈವರ್. ಈಗ ಸಾಹೇಬರ ಅನಧಿಕೃತ ಜೀಪು ಚಾಲಕ...

ಇಷ್ಟೆಲ್ಲಾ ಕೈಚಳಕ ತೋರಿಸುತ್ತಿರುವ ಸಾಹೇಬನ ವಯಸ್ಸು ಇನ್ನೂ 30 ದಾಟಲ್ಲ. ಬೆಳೆಯುವ ಪೈರು ಮೊಳಕೆಯಲ್ಲಿ... ಎಂಬಂತೆ ಈತ ತನ್ನ ಅಡ್ಡಹಾದಿಯ ಬೆಳವಣಿಗೆಯ ದಾರಿಯನ್ನು ಈಗಲೇ ತೋರಿಸುತ್ತಿದ್ದಾನೆ. ಇಂತ... ಅಧಿಕಾರಿಗಳ ವಿಷಯದಲ್ಲಿ ಖಡಕ್ ನಿರ್ಧಾರಗಳನ್ನು... ಕೈಗೊಳ್ಳುವ ಡಿ.ಸಿ. ಅಮ್ಲಾನ್ ಬಿಸ್ವಾಸ್ ಈತನ ವಿಷಯದಲ್ಲೇ... ಮೀನ-ಮೇಷ ಎಣಿಸುತ್ತಿದ್ದಾರೆ?

• ವರದಿಗಾ...

# ಹುಬ್ಬಳ್ಳಿ ಐಟಿಐ ಕಾಲೇಜು ಉಪನ್ಯಾಸಕರೇ ಪ್ರಶ್ನೆ ಪತ್ರಿಕೆ ಬಿಕರಿಗಿಟ್ಟರು!





ಶಿಕ್ಷಣದ ಯಾವುದೇ ಹಂತದಲ್ಲಿರಲಿ, ಹಾದಿ ಬಿಟ್ಟ ವಿದ್ಯಾರ್ಥಿಗಳನ್ನು ತಿದ್ದಿ ಕಷ್ಟಪಟ್ಟು ಓದಲು ಪ್ರೇರೇಪಿಸಬೇಕಾದದ್ದು ಶಿಕ್ಷಕ ಸಮೂಹದ ಕರ್ತವ್ಯ. ಆದರೆ ಹುಬ್ಬಳ್ಳಿಯ ಐಟಿಐ ಕಾಲೇಜಿನ ಉಪನ್ಯಾಸಕ ಪ್ರಭೃತಿಗಳು ಇದಕ್ಕೆ ತದ್ವಿರುದ್ಧ, ಪಾಠ ಹೇಳುವುದನ್ನೂ ದಂಧೆಯ ಪರಿಧಿಗೆ ತಂದುಕೊಂಡಿರುವ ಈ ಅವಿವೇಕಿಗಳು ಪ್ರಶ್ನೆ ಪತ್ರಿಕೆಯನ್ನೇ ಬಿಕರಿಗಿಟ್ಟು ವಿದ್ಯಾರ್ಥಿಗಳನ್ನು ಹಾದಿತಪ್ಪಿಸಿದ್ದಾರೆ. ಕೆಲ ಸಂಘಟನೆಗಳ ಪ್ರಯತ್ನದಿಂದ ಚಿತ್ರಲಾಗಿ ಬೀದಿಗೂ ಬಂದಿದ್ದಾರೆ!

ಉತ್ತರ ಕರ್ನಾಟಕದ ತುಂಬೆಲ್ಲಾ ಪ್ರತಿಷ್ಠಿತವೆನಿಸಿಕೊಂಡಿರುವ ಹುಬ್ಬಳ್ಳಿಯ ವಿದ್ಯಾನಗರದಲ್ಲಿರುವ ಕೈಗಾರಿಕಾ ತರಬೇತಿ ಸಂಸ್ಥೆ ಈ ಭಾನಗಡಿಯ ಕಾರಸ್ಥಾನ. ಸರ್ಕಾರದ ಅಧೀನದಲ್ಲಿರುವ ಇದರಲ್ಲಿ ಸುಮಾರು 400 ವಿದ್ಯಾರ್ಥಿಗಳು ತರಬೇತಿ ಪಡೆಯುತ್ತಿದ್ದಾರೆ. ಧಾರವಾಡ ಜಿಲ್ಲೆಯಲ್ಲಿ ನೂರಾರು ಖಾಸಗಿ ತರಬೇತಿ ಸಂಸ್ಥೆಗಳಿದ್ದರೂ ಅಲ್ಲಿನ ಡೊನೇಷನ್ ಮಾಫಿಯಾಕ್ಕೆ ಹೆದರಿರುವ ಪೋಷಕರು ಈ ಸಂಸ್ಥೆಗೇ ಮಕ್ಕಳನ್ನ ದಾಖಲಿಸುತ್ತಾರೆ. ಇಲ್ಲಿ ಬಡ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ಸಿಗುವುದೂ ಇದಕ್ಕೆ ಪ್ರಮುಖ ಕಾರಣ.

ಆದರೆ, ಇದರೊಳಗಿನ ಹಣಬಾಕ ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗ ಪರೀಕ್ಷೆಗಳ ಸಂದರ್ಭದಲ್ಲಿ ಸಿಗುವ ಸಹಾಯಧನದಲ್ಲಿ ಒಂದಷ್ಟನ್ನು ನುಂಗಿ ನೊಣೆಯುತ್ತಿದೆ. ಈ ಧನದಾಹಿಗಳ ಹಸಿವು ಪ್ರಶ್ನೆಪತ್ರಿಕೆಯನ್ನೇ ಬಿಕರಿಗಿಡುವ ಮಟ್ಟಕ್ಕೂ ಬೆಳೆದು ನಿಂತಿದೆ.

ಹುಬ್ಬಳ್ಳಿ, ಧಾರವಾಡ, ಕಲಘಟಗಿ ಸೇರಿದಂತೆ ಐದು ಕೇಂದ್ರಗಳಲ್ಲಿ ಕಳೆದ ಸೋಮವಾರ ಪರೀಕ್ಷೆ ನಡೆಯುವುದರಲ್ಲಿತ್ತು. ಎಲೆಕ್ಟ್ರಿಷಿಯನ್, ಫಿಟ್ಟರ್, ಟರ್ನರ್, ಮಿಷಿನಿಸ್ಟ್ ಹಾಗೂ ಗ್ರೈಂಡರ್ ಕೋರ್ಸ್‌ಗಳ ದ್ವಿತೀಯ ವರ್ಷದ 309 ವಿದ್ಯಾರ್ಥಿಗಳು ಪರೀಕ್ಷೆ ಬರೆಯುವುದರಲ್ಲಿದ್ದರು. ಇವರಲ್ಲಿ ಕಷ್ಟಪಡದೇ ಪಾಸಾಗುವ ಹಪಾಹಪಿಯ ಒಂದಷ್ಟು ಬುರ್ನಾಸು ವಿದ್ಯಾರ್ಥಿಗಳೂ ಇದ್ದರು. ಇಂಥವರನ್ನೇ ನಂಬಿ ಅಖಾಡಕ್ಕಿಳಿದ ಉಪನ್ಯಾಸಕರಾದ ಎನ್.ಎಸ್. ಪಾಟೀಲ್, ಜಗದೀಶ್ ಕಾಲವಾಡ, ಚಿತ್ರಗಾರ. ಲಾಂಡೆ ಇತ್ಯಾದಿಗಳು ಸ್ಕೆಚ್ಚು ಶುರುವಿಟ್ಟರು.

ಅದರನ್ವಯ ಭಾನುವಾರದಂದು ಚಾಲುಕ್ಯ ಹೋಟೆಲ್‌ನ ರೂಂ ನಂಬರ್ 110 ನ್ನು ಬುಕ್ ಮಾಡಿಕೊಂಡ ಈ ದುಷ್ಟ ಪಡೆ, ಹಳಿಯಾಳದಲ್ಲಿ ಗ್ರಾಮ ಲೆಕ್ಕಿಗನಾಗಿರುವ ಸಂಜೀವ ಲಮಾಣಿಯೆಂಬಾತನನ್ನು ಏಜೆಂಟ್ ಆಗಿ ನೇಮಿಸಿತು. ನಂತರ ಈ ರೂಮಿಗೆ ಒಂದು ಪ್ರಶ್ನೆಪತ್ರಿಕೆಯ ಜೆರಾಕ್ಸ್ ಪಡೆದುಕೊಳ್ಳುವಂತೆ ಸೋಂಭೇರಿ ವಿದ್ಯಾರ್ಥಿಗಳ ಮೊಬೈಲ್‌ಗೆ ಮೆಸೇಜ್ ಪಾಸು ಮಾಡಲಾಯಿತು.

ಇಂಥ ಅಕ್ರಮದ ವಿರುದ್ಧ ಲಾಗಾಯ್ತಿನಿಂದಲೂ ದನಿಯೆತ್ತುತ್ತಾ ಬಂದಿರುವ ಡಿಎಸ್‌ಎಸ್‌ನ ಮಾರುತಿ ದೊಡಮನಿ ಇದರ ಸುಳಿವು ಸಿಕ್ಕಿದೆ. ಒಂದಷ್ಟು ಮಂದಿಯನ್ನು ಒಗ್ಗೂಡಿಸಿ ಚಾಲುಕ್ಯ ಹೋಟೆಲ್ ಮುಂದೆ ಕಾದು ಕೂತಿದ್ದಾರೆ. ಅದೇ ಸಂದರ್ಭದಲ್ಲಿ 50-60 ವಿದ್ಯಾರ್ಥಿಗಳು ಒಮ್ಮೆಲೆ ದಾಂಗುಡಿಯಿಟ್ಟಿದ್ದಾರೆ. ದೊಡಮನಿ ಗ್ಯಾಂಗ್ ರೇಡು ಬೀಳಲು ರೆಡಿಯಾಗುತ್ತಲೇ ದುಷ್ಟ ಉಪನ್ಯಾಸಕರು ಪರಾರಿಯಾಗಿದ್ದಾರೆ. ಆದರೆ ದುಡ್ಡೆಣಿಸುವ ಭರದಲ್ಲಿದ್ದ ಖದೀಮ ಸಂಜು ಲಮಾಣಿ ಪ್ರಶ್ನೆಪತ್ರಿಕೆಗಳ ಸಮೇತ ತಗುಲಿಕೊಂಡ. ನಂತರ ಪಿಎಸ್‌ಐ ಮಠಪತಿ ಈ ತರಬೇತಿ ಇಲಾಖೆಯ ಪ್ರಿನ್ಸಿಪಲ್ ರಮೇಶನನ್ನು ಕರೆಸಿಕೊಂಡು ಪರೀಕ್ಷಿಸಿ ಜೆರಾಕ್ಸ್ ಹಾಗೂ ಒರಿಜಿನಲ್ ಪ್ರಶ್ನೆಪತ್ರಿಕೆಗಳು ಒಂದೇ ಅಂತ ಖಚಿತಪಡಿಸಿಕೊಂಡಿದ್ದಾರೆ.

ವಾಸ್ತವವೆಂದರೆ, ಪ್ರಿನ್ಸಿಪಲ್ ರಮೇಶ ಕೂಡಾ ಈ ಅಕ್ರಮದ ಪಾಲುದಾರ. ಈ ವಿಚಾರ ಪೊಲೀಸರಿಗೆ ತಿಳಿಯದಿರುವುದೇನಲ್ಲ, ಇಲಾಖೆ ಯಾವ ಮುಲಾಜಿಗೂ ಕಟ್ಟುಬೀಳದೆ ಶಿಕ್ಷಣದ ಪಾವಿತ್ರ್ಯವನ್ನು ಬಿಕರಿಗಿಟ್ಟ ಹಲಾಲುಕೋರರಿಗೆ ತಕ್ಕ ಶಿಕ್ಷೆ ವಿಧಿಸಬೇಕಿದೆ. ಇಲ್ಲದಿದ್ದಲ್ಲಿ ಕಷ್ಟಪಟ್ಟು ಓದಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಮೋಸ ಮಾಡಿದಂತಾದೀತು.

• ಹುಬ್ಬಳ್ಳಿಯಿಂ...

# ತಹಶೀಲ್ದಾರ್ ಸವಿತಾ ನೆರಳಲ್ಲಿ ಮರಳು ದಂಧೆ!



ಮೈಸೂರು ಜಿಲ್ಲೆಯ ಟಿ. ನರಸೀಪುರದ ನಸೀಬು ಸದ್ಯಕ್ಕೆ ನೆಟ್ಟಗಾಗುವ ಲಕ್ಷಣಗಳಿಲ್ಲ. ಈ ತಾಲ್ಲೂಕಿನ ತುಂಬೆಲ್ಲಾ ನದಿಯಂಚು ಬಗೆದು ಮರಳು ಸಾಗಿಸುವ ಅಕ್ರಮ ದಂಧೆ ಅವ್ಯಾಹತವಾಗಿ ನಡೆಯುತ್ತಿದೆ. ಇದು ಸುತ್ತಲ ಪರಿಸರದ ಮೇಲೆ ಪ್ರತಿಕೂಲ ಪರಿಣಾಮವನ್ನೂ ಬೀರಲಿದೆ. ದುರಂತವೆಂದರೆ, ಇಂಥ ದಂಧೆಗೆ ಕಡಿವಾಣ ಹಾಕಬೇಕಿರುವ ತಹಶೀಲ್ದಾರ್ ಸವಿತಾ ಎಂಬಾಕೆ ಬಾಯಿಗೆ ಮುಸುರೆ ಮೆತ್ತಿಕೊಂಡು ತೆಪ್ಪಗಿದ್ದಾಳೆ.

ಮೂಲತಃ ಮಂಡ್ಯ ಜಿಲ್ಲೆ ಕೆ.ಆರ್. ಪೇಟೆ ತಾಲ್ಲೂಕಿನ ಬುಧುವನಕೋಡಿ ಗ್ರಾಮದವಳಾದ ಎಂ.ಕೆ. ಸವಿತಾ, 2006ರಲ್ಲಿ ಪಾಂಡವಪುರಕ್ಕೆ ತಹಶೀಲ್ದಾರ್ ಆಗಿ ನೇಮಕಗೊಂಡಿದ್ದಳು. ಅಲ್ಲಿ ಒಂದು ವರ್ಷ ಸವೆಸಿ ಟಿ. ನರಸೀಪುರಕ್ಕೆ ಅಟಕಾಯಿಸಿದಳು. ನಂತರ ಇಡೀ ತಾಲ್ಲೂಕಿನ ಅಡ್ನಾಡಿ ದಂಧೆಗಳನ್ನು ತಡಕಾಡಿದ ಈಕೆ ಅವೆಲ್ಲಕ್ಕೂ ಲೇಡಿ ಡಾನ್ ಆಗಿ ಮೆರೆದಾಡಲಾರಂಭಿಸಿದಳು.



ಹರ್ಷಗುಪ್ತ

ಅಂಥ ದಂಧೆಗಳಲ್ಲಿ ಪ್ರಮುಖವಾದದ್ದು ಅಕ್ರಮ ಮರಳು ಸಾಗಣೆ ಮಾಫಿಯಾ. ಟಿ. ನರಸೀಪುರದ ತಲಕಾಡು, ಬನ್ನೂರು, ಸೋಸಲೆ ಹಾಗೂ ನರಸೀಪುರ ಹೋಬಳಿಗಳು ಈ ಮಾಫಿಯಾದ ಮುಷ್ಟಿಯಲ್ಲಿವೆ. ವಾಸ್ತವವೆಂದರೆ, ಇದಿಷ್ಟು ಪ್ರದೇಶಗಳಲ್ಲಿ ಎರಡು ಪಾಯಿಂಟ್‌ಗಳಿಗೆ ಮಾತ್ರ ಪರವಾನಗಿಯಿದೆ. ಮಿಕ್ಕಿದ ಏಳು ಪಾಯಿಂಟ್‌ಗಳು ಪಕ್ಕಾ ಅಕ್ರಮ! ಇದೆಲ್ಲದರಿಂದಲೂ ದಿನನಿತ್ಯ ಲಕ್ಷಾಂತರ ಮೌಲ್ಯದ ಮರಳು ಕಳ್ಳ ಸಾಗಣೆಯಾಗುತ್ತಿದೆ. ತಹಶೀಲ್ದಾರ್ ಸವಿತಾ ಮಾತ್ರ ಕಾಲಕಾಲಕ್ಕೆ ಕಪ್ಪ ಪಡೆಯುತ್ತಾ ಆರಾಮಾಗಿದ್ದಾಳೆ!

ಹಿಂದೆ ಡಿಸಿಯಾಗಿದ್ದ ಮಣಿವಣ್ಣನ್ ಈ ಅಕ್ರಮ ಮರಳು ದಂಧೆಗೆ ಕಡಿವಾಣ ಹಾಕಲು ಮುಂದಾಗಿದ್ದರು. ಚಾಲಾಕಿ ಸವಿತಾ ಅದರ ನಡುವೆಯೂ ಭಕ್ಷೀಸು ಪಡೆದು ದಂಧೆಗೆ ದಾರಿ ಮಾಡಿಕೊಟ್ಟಳು. ಈ ಪರಿಯ ಸಹಕಾರದಿಂದ ಖುಷ್ ಆಗಿ ಹೋದ ಮರಳುಗಳ್ಳರು ಸವಿತಾಳಿಗೆ ಐಷಾರಾಮಿ ಕಾರನ್ನು ಗಿಫ್ಟ್ ಕೊಟ್ಟರು. ಇದರಿಂದ ಮತ್ತಷ್ಟು ಖುಷಿಯಾದ ಸವಿತಾ, ಅತಿಥಿ ಗೃಹ ತೊರೆದು ಮೈಸೂರಿನ ಸಿದ್ಧಾರ್ಥ ಲೇಔಟ್‌ನಲ್ಲೊಂದು ಬಂಗಲೆ ಖರೀದಿಸಿ ಅಲ್ಲಿಂದಲೇ ಓಡಾಡಿಕೊಂಡು ಹಾಯಾಗಿದ್ದಾಳೆ!



ಸವಿತಾ

ಅದು ಯಾವುದೇ ಏರಿಯಾ ಇರಲಿ, ಸೇತುವೆ ಸುತ್ತಲಿನ 2 ಕಿ.ಮೀ. ಪ್ರದೇಶದಲ್ಲಿ ಮರಳು ತೆಗೆಯಬಾರದು ಅಂತೊಂದು ನಿಯಮವಿದೆ. ಆದರೆ ಸವಿತಾ ದರ್ಬಾರಿನಲ್ಲಿ ಇದಕ್ಕೆಲ್ಲ ಬೆಲೆ ಸಿಗುತ್ತಿಲ್ಲ, ಜೊತೆಗೆ ಮರಳು ದಂಧೆ ವಿರುದ್ಧದ ಜನರ ಪ್ರತಿಭಟನೆಗೂ ಈಕೆಯ ಕಡೆಯಿಂದ ಕಿಮ್ಮತ್ತು ಸಿಗುತ್ತಿಲ್ಲ.

ಈಕೆ ಕೇವಲ ಭ್ರಷ್ಟೆ ಮಾತ್ರವಲ್ಲ, ಜಾತಿವಾದಿಯೂ ಹೌದು. ಈ ಕಾಯಿಲೆ ಎಷ್ಟು ಮಿತಿ ಮೀರಿದೆಯೆಂದರೆ, ತನ್ನ ವ್ಯಾಪ್ತಿಯ ಸ್ವಜಾತಿ ಬಂಧುಗಳಿಗೆ ಮನಸಾರೆ ಅನುಕೂಲ ಮಾಡಿಕೊಡುತ್ತಿದ್ದಾಳೆ. ಬೇರೆ ಜಾತಿಗಳಲ್ಲಿ ಬಡವರು ಪಡಬಾರದ ಪಾಡು ಪಡುತ್ತಿದ್ದರೂ ಅನುಕೂಲಸ್ಥ ಜಾತಿ ಬಾಂಧವರಿಗೇ ಸರ್ಕಾರದ ಹಣವನ್ನು ಧಾರೆಯೆರೆಯುತ್ತಿದ್ದಾಳೆ. ಇಂಥ ಜಾತಿಪ್ರೇಮದ ವಿರುದ್ಧ ಕೆಲ ಸಂಘಟನೆಗಳವರು ಪ್ರತಿಭಟನೆ ನಡೆಸಿ, ದೂರು ಜಿಲ್ಲಾಧಿಕಾರಿಗಳ ವರೆಗೂ ತಲುಪಿತು. ತಲೆ ಉಳಿಸಿಕೊಳ್ಳುವ ತುರ್ತಿಗೆ ಸಿಕ್ಕ ಸವಿತಾ ವಿ.ಎ.ಆರ್.ಐ.ಗಳಾಗಿದ್ದ ದಲಿತ ನೌಕರರನ್ನು ಸಸ್ಪೆಂಡ್ ಮಾಡಿದಳು!

ದಲಿತರನ್ನು ಕಂಡರೆ ಅದೊಂದು ರೀತಿಯ ಅಸಹ್ಯ ರೂಢಿಸಿಕೊಂಡಿರುವ ಸವಿತಾ ಒಂದಲ್ಲಾ ಒಂದು ಕಿರುಕುಳ ನೀಡುತ್ತಲೇ ಬಂದಿದ್ದಾಳೆ. ಬನ್ನೂರು ಹೋಬಳಿಯ ವಡ್ಗಲ್ ರಂಗನಾಥ ಬೆಟ್ಟದ ಬ್ರಹ್ಮಜ್ಞಾನಿ ಆಶ್ರಮ ದಲಿತರಿಗೆ ಸೇರಿದ್ದೆಂಬ ಏಕೈಕ ಕಾರಣಕ್ಕಾಗಿ 18 ವರ್ಷಗಳಿಂದ ಇದ್ದ ನೀರಿನ ವ್ಯವಸ್ಥೆಯನ್ನು ಏಕಾಏಕಿ ನಿಲ್ಲಿಸಿದಳು. ಇಂಥ ದುಷ್ಟತನಗಳ ವಿರುದ್ಧ ದಮನಿತರು ಪ್ರತಿಭಟಿಸಿದರೂ ಸವಿತಾ ಕ್ಯಾರೇ ಅನ್ನುತ್ತಿಲ್ಲ.

ಈಕೆಯ ದಲಿತ ವಿರೋಧಿ ಮನಸ್ಥಿತಿಗೆ ಇನ್ನೊಂದು ಉದಾಹರಣೆಯೂ ಇದೆ. ಬೇವಿನಹಳ್ಳಿ ಗ್ರಾಮದ ದಲಿತರಿಗೆ ಸ್ಮಶಾನಕ್ಕೆಂದು ಸರ್ಕಾರ ಹತ್ತಾರು ಎಕರೆ ಭೂಮಿ ಕೊಟ್ಟಿದೆ. ಆದರೆ ಮೇಲ್ವರ್ಗದ ಮಂದಿ ಅದನ್ನು ಆಕ್ರಮಿಸಿಕೊಂಡು ಲಕ್ಷಣವಾಗಿ ಸಾಗುವಳಿ ನಡೆಸುತ್ತಿದ್ದಾರೆ. ಇದನ್ನು ಬಿಡಿಸಿಕೊಡಿ ಅಂತ ದಲಿತರು ಮೊರೆಯಿಟ್ಟರೆ ವಂಚಕಿ ಸವಿತಾ ಬೆದರಿಸಿ ಹೊರಗಟ್ಟಿದಳು.

ಈಕೆಯ ಖಾತೆಯಲ್ಲಿ ಮರಳು ದಂಧೆ, ದಲಿತ ವಿರೋಧಿ ನೀತಿಗಳ ಜೊತೆಗೆ ಪಡಿತರ ಅಕ್ಕಿ ಕಳ್ಳತನವೂ ಜಮೆಯಾಗಿದೆ. ಜಿಲ್ಲೆಗೆ ಹೊಸದಾಗಿ ಡಿಸಿಯಾಗಿ ಬಂದ ಹರ್ಷಗುಪ್ತ ತಾಲ್ಲೂಕಿನ ಮೂರು ರೈಸ್‌ಮಿಲ್‌ಗಳ ಮೇಲೆ ದಾಳಿ ನಡೆಸಿದ್ದಾರೆ. ಕೋಟ್ಯಂತರ ಮೌಲ್ಯದ ಅಕ್ಕಿ ವಶಪಡಿಸಿಕೊಂಡಿದ್ದಾರೆ. ಜೊತೆಗೆ ಅಕ್ರಮ ಮರಳು ಮಾಫಿಯಾಕ್ಕೂ ಬಿಸಿಮುಟ್ಟಿಸಿ ದಂಧೆಕೋರರ ಮೇಲೆ ಕೇಸು ಜಡಿದಿದ್ದಾರೆ; ಈ ದಂಧೆಗಳ ರೂವಾರಿಯಾದ ಸವಿತಾಳನ್ನೂ ತರಾಟೆಗೆ ತೆಗೆದುಕೊಂಡಿದ್ದಾರೆ.

ಒಟ್ಟಾರೆಯಾಗಿ ಭ್ರಷ್ಟ ತಹಶೀಲ್ದಾರ್ ಸವಿತಾಳ ಎತ್ತಂಗಡಿಯಾಗಿ ಹಾತೊರೆದು ಈ ಭಾಗದ ಜನ ಹತಾಶರಾಗಿದ್ದಾರೆ.

ಇನ್ನು ಟಿ.ನರಸೀಪುರ ಹ್ಯಾಗೆ ಉದ್ಧಾರವಾದೀತು?

**• ಕೊಳ್ಳೇಗಾಲ ಚಿಕ್ಕಮಾಳಿಗೆ**

---

## ಹಾವೇರಿ

# ಉಪ್ಪಿನ್ಕಾಯ್ ಮಂಜಕ್ಕಳ ಹೊಸಾ ಕಿರಿಕ್ಕು!




ಮಂಜುಳಾ

ಪಾಟೀಲ ಪುಟ್ಟಪ್ಪ, ಚಂಪಾರಂಥವರಿಗೆ ಅಕ್ಷರದ ಬೆಳಕು ತೋರಿದ ಹಾವೇರಿಯ ಮುನ್ಸಿಪಲ್ ಹೈಸ್ಕೂಲ್ ಭ್ರಷ್ಟರ ಕೈಗೆ ಸಿಕ್ಕು ನರಳುತ್ತಿದೆ. ಜ್ಞಾನದೇಗುಲವನ್ನು ಈ ಸ್ಥಿತಿಗಿಳಿಸಿ ಹಣ ಹೊಡೆದುಕೊಂಡಾಕೆ ನಗರಸಭಾಧ್ಯಕ್ಷೆ ಮಂಜುಳಾ ಕರಬಸಮ್ಮನವರ್ ಅಲಿಯಾಸ್ ಉಪ್ಪಿನ್ಕಾಯ್ ಮಂಜಕ್ಕ!



ಉದಾಸಿ



ರುದ್ರಪ್ಪ

ಅಧ್ಯಕ್ಷೆಯಾಗಿದ್ದುಕೊಂಡು ನಗರಸಭೆಯನ್ನು ಸಪಾಟಾಗಿ ಗುಡಿಸಿಬಿಟ್ಟಿರುವ ಮಂಜುಳಾ, ಶಾಲೆಗೂ ಅಟಕಾಯಿಸಿಕೊಂಡಿದ್ದರ ಹಿಂದೆ ದೊಡ್ಡ ಕಥಾನಕವಿದೆ. ಈ ಮುನ್ಸಿಪಲ್ ಹೈಸ್ಕೂಲ್‌ನಲ್ಲಿ ಚಿತ್ರಕಲೆ, ವಿಜ್ಞಾನ, ದೈಹಿಕ ಶಿಕ್ಷಣ ವಿಭಾಗಗಳು ಶಿಕ್ಷಕರಿಲ್ಲದೆ ಖಾಲಿಯಿದ್ದವು. ಇದರಿಂದ ವಿದ್ಯಾರ್ಥಿ ಸಮೂಹ ತೊಂದರೆಗೀಡಾಗುವುದನ್ನು ತಪ್ಪಿಸುವ ಸದಾಶಯದೊಂದಿಗೆ 16.1.10 ರಂದು ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಅನುಮತಿಯೂ ದೊರೆತಿದೆ.

ನಗರಸಭೆಯನ್ನು ಒಂದು ಕಡೆಯಿಂದ ಸಾರಿಸಿ ಮುಗಿಸಿದ್ದ ಮಂಜುಳಾಗೆ ಇದರಲ್ಲೇ ಹಣ ಹೊಡೆಯುವ ಐಡಿಯಾ ಹೊಳೆದುಬಿಟ್ಟಿದೆ. ಇದರನ್ವಯ ಶಿಕ್ಷಣ ಇಲಾಖೆಯ ಆದೇಶವನ್ನಿಟ್ಟುಕೊಂಡು ಅಖಾಡಕ್ಕಿಳಿದ ಈಕೆ ಶಿಕ್ಷಕರ ನೇಮಕಾತಿಯನ್ನು ಅನುಮೋದಿಸಿ ಠರಾವು ಪಾಸು ಮಾಡಿದಳು.

ಇದಾದದ್ದೇ, ಭರ್ಜರಿಯಾಗಿ ಅರ್ಜಿಗಳು ಬಂದುಬಿದ್ದವು. ನೇಮಕಾತಿ ಪ್ರಕ್ರಿಯೆಯಲ್ಲಿ ನಗರ ಸಭಾಧ್ಯಕ್ಷರು ಪಾಲ್ಗೊಳ್ಳಬಾರದೆಂಬ ನಿಯಮವಿದ್ದರೂ ತಾನೇ ಮುಂದೆ ನಿಂತು ನೇಮಕಾತಿ ಸಂದರ್ಶನ ನಡೆಸಿದಳು. 26.4.10 ರಂದು ನಡೆದ ಈ ಸಂದರ್ಶನದಲ್ಲಿ ಮೂವರನ್ನು ಆಯ್ಕೆ ಮಾಡಿಕೊಳ್ಳಲಾಯಿತು.

ಈ ನೇಮಕದಲ್ಲಿ ಮಂಜುಳಾಳ ಅಗಾಧ ಹಸಿವಿನ ವಿರಾಟ್ ರೂಪ ಬಯಲಾಗಿದೆ. ಪಿ. ರೇಖಾ ಎಂಬಾಕೆಯನ್ನು ವಿಜ್ಞಾನ ವಿಷಯಕ್ಕೆ ಆಯ್ಕೆ ಮಾಡಿದ ಮಂಜುಳಾ ಆಕೆಯಿಂದ ಅಖಂಡ ಐದು ಲಕ್ಷ ಕಿತ್ತಿದ್ದಾಳೆ. ಏಳು ಲಕ್ಷ ಲಂಚ ಹೊಡೆದುಕೊಂಡು ಗಿರೀಶ್ ಯತ್ತಿನಹಳ್ಳಿಯೆಂಬಾತನಿಗೆ ದೈಹಿಕ ಶಿಕ್ಷಕ ಹುದ್ದೆ ಕರುಣಿಸಿದ್ದಾಳೆ. ಇದಲ್ಲದೇ ಅಶೋಕ್ ಎಣ್ಣೆಯವರ್ ಎಂಬಾತನೊಂದಿಗೆ ಎಂಟು ಲಕ್ಷಕ್ಕೆ ಡೀಲು ಕುದುರಿಸಿ ಚಿತ್ರಕಲೆ ಶಿಕ್ಷಕ ಹುದ್ದೆಯನ್ನು ಹರಾಜು ಹಾಕಿದ್ದಾಳೆ!

ಇಷ್ಟು ದೊಡ್ಡ ಮೊತ್ತದ ಅಪರಾತಪರಾ ನಡೆಸಿದ ಮಂಜುಳಾ ಮಳ್ಳಿಯಂತೆ ನಗರಸಭೆ ಹೊಕ್ಕು ತಣ್ಣಗಿದ್ದಳು. ಇನ್ನೇನು ಪ್ರಕರಣ ಮುಚ್ಚಿಹೋಯ್ತು ಅಂತಿರುವಾಗ ಪೌರಾಯುಕ್ತರಾಗಿ ಎಂಟ್ರಿ ಕೊಟ್ಟ ರುದ್ರಪ್ಪ ಈ ಹಗರಣವನ್ನು ಬಯಲಿಗೆಳೆದಿದ್ದಾರೆ. ಇದರ ಬೆನ್ನಲ್ಲೇ ಶಿಕ್ಷಕರ ನೇಮಕಾತಿಯಲ್ಲಿ ಮಂಜುಳಾಳ ಉಪಸ್ಥಿತಿ ಪ್ರಶ್ನಿಸಿ ನೋಟಿಸ್ ಜಾರಿ ಮಾಡಿದ್ದಾರೆ. ಇನ್ನೂ ಮುಂದುವರೆದು ಲಂಚ ಕೊಟ್ಟು ತೂರಿಕೊಂಡ ಮೂವರು ಅಭ್ಯರ್ಥಿಗಳನ್ನು ವಜಾ ಮಾಡಿ ಆದೇಶವನ್ನೂ ಹೊರಡಿಸಿದ್ದಾರೆ. ಅಲ್ಲಿಗೆ ಪಿಕಲ್ ಮಂಜಕ್ಕನ ಮಾನ ಹಾವೇರಿಯ ಬೀದಿಗಳಲ್ಲಿ ಹರಾಜಾದಂತಾಗಿದೆ!

ಇನ್ನೊಂದು ದುರಂತಮಯ ವಿಚಾರವೆಂದರೆ, ಈ ಮುನ್ಸಿಪಲ್ ಹೈಸ್ಕೂಲ್‌ನ ಮುಖ್ಯ ಶಿಕ್ಷಕ ಕರಬಸನಗೌಡರ್ ಎಂಬ ಖದೀಮನೂ ಈ ಅಕ್ರಮದ ಪಾಲುದಾರ! ಈತ ಅದೆಂಥಾ ಚಾಲಾಕಿಯೆಂದರೆ, ರುದ್ರಪ್ಪನವರು ಅಕ್ರಮ ಅಭ್ಯರ್ಥಿಗಳನ್ನು ಅಮಾನತ್ತು ಮಾಡುತ್ತಲೇ ಅಖಾಡಕ್ಕಿಳಿದುಬಿಟ್ಟಿದ್ದ. ಅಮಾನತುಗೊಂಡವರನ್ನು ಸಂಪರ್ಕಿಸಿ ತಲಾ ಇಪ್ಪತ್ತು ಸಾವಿರ ಕಿತ್ತುಕೊಂಡು ರಾತ್ರೋರಾತ್ರಿ ಮರುನೇಮಕ ಮಾಡಲೂ ಮುಂದಾದ! ಈ ವಿಚಾರ ತಿಳಿದ ರುದ್ರಪ್ಪ ತಕ್ಷಣ ಕರಬಸನಗೌಡರ್‌ಗೂ ನೋಟಿಸ್ ಕೊಟ್ಟಿದ್ದಾರೆ.

ಇಷ್ಟೆಲ್ಲಾ ಅಧ್ವಾನಗಳಿಗೆ ಕಾರಣವಾಗಿರುವ ಮಂಜುಳಾ ಕರಬಸಮ್ಮನವರ್ ನಗರಸಭೆ ಅಧ್ಯಕ್ಷಾವಧಿಯ ತುಂಬಾ ಕರಾಳ ಅಧ್ಯಾಯಗಳನ್ನು ಛಾಪಿಸಿಬಿಟ್ಟಿದ್ದಾಳೆ. ಈಗ್ಗೆ ಹತ್ತು ವರ್ಷಗಳ ಹಿಂದಷ್ಟೇ ಹಾವೇರಿಯ ಬೀದಿಗಳಲ್ಲಿ ಉಪ್ಪಿನಕಾಯಿ ಮಾರುತ್ತಿದ್ದ ಮಂಜುಳಾ ನಗರಸಭೆ ಅಧ್ಯಕ್ಷಗಾದಿ ಏರಿದಳು. ಇಷ್ಟು ತಳಮಟ್ಟದಿಂದ ಬಂದ ಹೆಣ್ಣುಮಗಳೊಬ್ಬಳು ಆ ಹಂತ ತಲುಪುವುದು ಸಂತಸದ ವಿಚಾರವೆ. ಆದರೆ ಆ ಸಂತಸ ಮಂಜುಳಾಳ ವಿಚಾರದಲ್ಲಿ ಮಣ್ಣು ಪಾಲಾಗಿದೆ.

ಯಾಕೆಂದರೆ ಅಧ್ಯಕ್ಷಗಾದಿಯ ಅಮಲೇರಿಸಿಕೊಂಡ ಮಂಜುಳಾ ಹಳೆಯದನ್ನೆಲ್ಲ ಮರೆತು ಮುಕ್ಕುವುದನ್ನೇ ಕಾಯಕ ಮಾಡಿಕೊಂಡಳು. ಸ್ವತಃ ಬಡವಿಯಾಗಿದ್ದ ಈಕೆ ಅಧ್ಯಕ್ಷೆಯಾಗಿ ಮಾಡಿದ ಮೊದಲ ಕೆಲಸ ಬಡವರನ್ನು ಬೀದಿಗೆ ಬೀಳಿಸಿದ್ದು! ಜಿಲ್ಲಾ ಸತ್ರ ನ್ಯಾಯಾಲಯಕ್ಕೆ ನೀಡಿದ್ದ ಜಮೀನಿನಲ್ಲಿ 50ಕ್ಕೂ ಹೆಚ್ಚು ಬಡ ಕುಟುಂಬಗಳು ಗುಡಿಸಲು ಹಾಕಿ ಬದುಕುತ್ತಿದ್ದವು. ಇಂಥವರನ್ನು ಎತ್ತಂಗಡಿ ಮಾಡಲು ಇಡೀ ಜಿಲ್ಲಾಡಳಿತ ಉತ್ಸುಕವಾಗಿತ್ತು. ದಿಕ್ಕು ತೋಚದ ಬಡ ಮಂದಿ ಪುನರ್ವಸತಿ ಕಲ್ಪಿಸಿದರೆ ಮಾತ್ರ ಬಿಡುತ್ತೇವೆಂದು ಪಟ್ಟು ಹಿಡಿದಿದ್ದರು. ಆದರೆ ಮಾರಿ ಮುತ್ತುವಿನ ಅವತಾರವೆತ್ತಿ ಗೂಂಡಾಪಡೆಯೊಂದಿಗೆ ದಾಂಗುಡಿಯಿಟ್ಟ ಮಂಜುಳಾ ನಿರ್ದಯವಾಗಿ ಗುಡಿಸಲುಗಳನ್ನು ನೆಲಸಮಗೊಳಿಸಿದಳು.



ಇಂಥವಳಿಂದ ಹಾವೇರಿಯ ನೆಲಕ್ಕೆ ಯಾವ ರೀತಿಯ ಉಪಯೋಗವೂ ಆಗಲಾರದೆಂಬುದು ಇದೀಗಲೇ ಸಾಬೀತಾಗಿದೆ. ಆದರೆ ಈ ಭ್ರಷ್ಟೆ ಶಿಕ್ಷಣವನ್ನು ಹಾಳುಮಾಡಿ ಹಣ ಗೆಬರಿದರೂ ಮಂತ್ರಿ ಉದಾಸಿಗೇಕೋ ಈಕೆಯ ಮೇಲಿನ ಅಭಿಮಾನ ಇಂಗಿದಂತಿಲ್ಲ.

ಇದೀಗ ಹಾವೇರಿ ಮಂದಿಯ ಮುಂದಿರುವ ಪ್ರಶ್ನೆ ಒಂದೇ; ಉಪ್ಪಿನ್ಕಾಯ್ ಮಂಜಕ್ಕನ ದರ್ಬಾರಿಂದ ಮುಕ್ತಿ ಸಿಗೋದು ಯಾವಾಗ?

**• ಹುರುಳಿಕುಪ್ಪಿ ವಿನಯ್**

## ಎಮ್ಮೆಲ್ಲೆ ಆಗ್ತಾಳಂತೆ!

ನಗರಸಭೆ ಅಧ್ಯಕ್ಷೆಯಾಗಿ ವಕ್ಕರಿಸಿದಂದಿನಿಂದಲೂ ಎಲ್ಲೆ ಮೀರಿ ಮುಕ್ಕುತ್ತಿರುವ ಮಂಜುಳಾ ಎಮ್ಮೆಲ್ಲೆ ಸೀಟಿನ ಮೇಲೆ ಕಣ್ಣಿಟ್ಟಿದ್ದಾಳೆ!

ಉದಾಸಿಯ ಬೆಂಬಲವಿರುವುದರಿಂದಲೇ ಇಂತಹದೊಂದು ಕನಸು ಹೊಂದಿರುವ ಮಂಜುಳಾ ಸ್ಥಳೀಯ ಬಿಜೆಪಿಗರಿಗೇ ತಲೆನೋವಾಗಿ ಪರಿಣಮಿಸಿದ್ದಾಳೆ. ಈಕೆಯ ಬಗ್ಗೆ ಅವರಲ್ಲೇ ಒಂದು ವಿರೋಧವೂ ಇದೆ. ನಗರಸಭೆಯಲ್ಲಿದ್ದುಕೊಂಡೇ ಈ ಪರಿ ಕೊಬ್ಬಿರುವ ಈಕೆ ಎಮ್ಮೆಲ್ಲೆ ಆದರೆ ತಮಗೆ ಉಳಿಗಾಲವಿಲ್ಲವೆಂಬುದಷ್ಟೇ ಅವರ ಅಳಲು.

ಆದರೂ ಮಂಜುಳಾ ಹೋದ-ಬಂದ ಕಡೆಯಲ್ಲೆಲ್ಲಾ ತನ್ನನ್ನು ತಾನು ಎಮ್ಮೆಲ್ಲೆ ಟಿಕೆಟ್ಟು ಅಂತ ಬಿಂಬಿಸಿಕೊಳ್ಳುತ್ತಿದ್ದಾಳೆ.

ಶಾಸಕೀಯ ಅಂತಃ[illegible]

ಲಂಕೇಶ್




'ದೇಶಕಾಲ'ದ ಹಿನ್ನೆಲೆ:

# ಜಾತಿಯೆಂಬ ಭೂತದ ಹಿಂದೆ?

ಭಾಗ 6

ಮೇಲ್ಜಾತಿ(?)ಯ ಮಂದಿ ತಮ್ಮ ತಮ್ಮ ಜಾತಿಯ ಬಗ್ಗೆ ಹೆಮ್ಮೆಪಡುವ ಕಾಲ ಒಂದಿತ್ತು. ತಾನು ಜೈನ ಧರ್ಮೀಯ ಎಂಬ ಬಗ್ಗೆ ಪಂಪನಿಗೆ ಅಂಥ ಹೆಮ್ಮೆ ಇದೆ. ಅವನ ತಂದೆ ಹೊಸದಾಗಿ ಜೈನ ಧರ್ಮಕ್ಕೆ ಮತಾಂತರಗೊಂಡವರು. ಪಂಪನಿಗೆ ತನ್ನ ತಾತನ ವೈದಿಕ ಧರ್ಮದ ಬಗ್ಗೆ ಕೂಡ ಅಭಿಮಾನ! ಆದರೆ ಪಂಪನ 'ವಿಕ್ರಮಾರ್ಜುನ ವಿಜಯ'ದಲ್ಲಿ ಜಾತಿಯು ಮೇಲುಕೀಳನ್ನು ಸೃಷ್ಟಿಸುವ ಬಗ್ಗೆ ಸ್ಪಷ್ಟ ವಿರೋಧವಿದೆ. ಇದು ಒಂದು ಅಂತರ್ವಿರೋಧವೇ? ಎರಡೂ ನಿಲುವಿನಲ್ಲೂ ಪಂಪನ ಭಾಷೆಯಲ್ಲಿ ವ್ಯಕ್ತವಾಗುವ ಪ್ರಾಮಾಣಿಕತೆಯ ದನಿ ನೋಡಿದರೆ ಇದು ಅಂತರ್ವಿರೋಧವಿರಲಾರದು.


ಪ್ರತಿಯೊಬ್ಬರೂ ತಮ್ಮ ತಮ್ಮ ಜಾತಿ (ಧರ್ಮ) ಪದ್ಧತಿಗಳನ್ನು ಆಚರಿಸಿಕೊಂಡು ಹೋದಲ್ಲಿ ತಪ್ಪಿಲ್ಲ. ಆದರೆ ತಮ್ಮ ಜಾತಿ ಮೇಲು ಇನ್ನೊಬ್ಬರದು ಕೀಳು ಎಂದು ನಂಬಿ ತನ್ನದಲ್ಲದ ಜಾತಿಯವರನ್ನು ಕೀಳಾಗಿ ಕಾಣುವುದಾಗಲೀ, ಅವಮಾನಿಸುವುದಾಗಲೀ ಪಂಪನಿಗೆ ಸಹ್ಯವಾಗುವುದಿಲ್ಲ. ಹೀಗೆ ವಿಚಾರ ಮಾಡುವ ಮಂದಿ ಇವತ್ತೂ ಬೇಕಾದಷ್ಟು ಸಂಖ್ಯೆಯಲ್ಲಿ ಇದ್ದಾರೆ. ಲೇಖಕರಲ್ಲೂ ಕೂಡ.

ಮಾಸ್ತಿ ಪುತಿನ ಅವರಂಥ ಹಿರಿಯ ಲೇಖಕರನ್ನು ಗಮನಿಸಿ. ಅವರೆಲ್ಲಾ ಜಾತಿಯ ಕಟ್ಟುಪಾಡಲ್ಲಿ ಬದುಕಿದವರೇ. ಜಾತಿಯು ವಿಧಿಸುವ ಆಚರಣೆಗಳನ್ನು ಯಾವತ್ತೂ ಬಿಟ್ಟವರಲ್ಲ, ಜಾತಿ ವಿಧಿಸುವ ಲಾಂಛನಗಳನ್ನು ತಪ್ಪದೆ ಮತ್ತು ನಿಸ್ಸಂಕೋಚದಿಂದ ಧರಿಸಿದವರು. ಆದರೆ ಅವರನ್ನು ಜಾತಿವಾದಿಗಳೆಂದು ಪೂರಕೆ ಹೇಳಿಕೆ ಮಾಡುವುದು ಕಷ್ಟ. ಅನ್ಯಧರ್ಮೀಯರನ್ನೂ (ಜಾತಿಬಾಂಧವರನ್ನು) ಹೇಗೆ ಅವರು ತಮ್ಮ ಒಳಬಾಳಿಗೆ ತೆಗೆದುಕೊಂಡಿದ್ದರು ಎಂಬುದನ್ನು ಬಲ್ಲವರೇ ಬಲ್ಲರು. ಅವರ ಬರವಣಿಗೆಯಲ್ಲಿ ಕೂಡ ಜಾತಿಯ ಅಹಂಕಾರ ಟೀಕೆಗೆ ಗುರಿಯಾಗಿದೆ. ಜಾತಿಯ ಅಹಮ್ಮಿನ ಬಗ್ಗೆ ನಾಚಿಕೆಯ ಭಾವ ಕೂಡ ಇದೆ. ಶೂದ್ರತಪಸ್ವಿಯ ಚರ್ಚೆಯ ಸಂದರ್ಭದಲ್ಲಿ ಮತ್ತೆ ಜಾತಿಯ ಭೂತಕ್ಕೆ ಧೂಪ ಹಾಕುವುದು ಬೇಡ ಎಂಬುದೇ ಮಾಸ್ತಿಯವರ ನಿಲುವು. ಮಾಸ್ತಿಗೆ ಅದು ಯುಕ್ತವಾದ ನಿಲುವೇ.

ಜಾತೀಯ ಭಾವನೆಗಳಿಂದ ಅವಮಾನಿತರೂ ನೊಂದವರೂ ಆದ ಕುವೆಂಪು ಕಹಿ ನೆನಪುಗಳನ್ನು ಸುಲಭವಾಗಿ ಮರೆಯಲು ಸಾಧ್ಯವಿಲ್ಲ, ಮರೆತಂತೆ ತೇಲಿಸಿ ಬರೆದರೆ ಅದು ಕೇವಲ ಮುಖವಾಡದ ಮಾತಾದೀತು. ಮರೆಯಲಾರೆವು, ಮರೆಯಿರಿ ಎಂಬೆರಡು ನಿಲುವುಗಳ ನಡುವಿನ ಘರ್ಷಣೆಯಂತಿದೆ ಶೂದ್ರತಪಸ್ವಿಯ ಸಂದರ್ಭ. ವರ್ಣಾಶ್ರಮಗಳನ್ನು ಹೊಡೆಯಲಿಕ್ಕೆ ಹೊರಟ ವೀರಶೈವವೂ ಭವಿಗಳ ಬಗ್ಗೆ ತಾಳುವ ಧೋರಣೆ ಜಾತೀಯತೆಯನ್ನೇ ಪ್ರಚೋದಿಸುವಂಥದಾಗಿದೆ.

ಬೇರೆ ಯಾವ ಧರ್ಮವೂ ಅದಕ್ಕೆ ಅಪವಾದವೇನಲ್ಲ. ವೈದಿಕ ಧರ್ಮದ ಚೌಕಟ್ಟಲ್ಲೇ ಬರುವ ಉಪಜಾತಿಗಳ ನಡುವಿನ ಅಸಹಿಷ್ಣು ಭಾವ ಅಸಹ್ಯ ಹುಟ್ಟಿಸುವಂತಿದೆ. ಸಿಡಿಲು ಹೊಡೆದರೂ ಶಿವಾಲಯಕ್ಕೆ ಹೋಗಬಾರದೆನ್ನುವ ವೈಷ್ಣವರ ನಿಲುವನ್ನು ಇಲ್ಲಿ ನೆನೆಯಬಹುದು. ಇದೇನು ಹಳೆಯ ಕಥೆಯಲ್ಲ. ಈಗಲೂ ಕೂಡ ಬದರಿಗೆ ತೀರ್ಥಯಾತ್ರೆಗೆ ಹೋದ ಸಂಪ್ರದಾಯವಂತ ವೈಷ್ಣವರು ಕೇದಾರಕ್ಕೆ ಹೋಗುವುದಿಲ್ಲ. ಕೇದಾರಕ್ಕೆ ಹೋಗಿ ಶಿವದರ್ಶನ ಮಾಡಿದ್ದೇ ಆದರೆ ಬದರೀ ಯಾತ್ರೆಯ ಪುಣ್ಯ ನಾಶವಾಗುವುದು ಎಂಬುದು ಅವರಲ್ಲಿ ಬೇರೂರಿರುವ ನಂಬಿಕೆ.

ನಾವು ತ್ಯಾಗರಾಜನಗರದಲ್ಲಿ ವಾಸವಾಗಿದ್ದಾಗ ನನ್ನ ಪತ್ನಿಗೆ ಬಹಳ ಆತ್ಮೀಯರಾದ ಗೆಳತಿಯರೊಬ್ಬರಿದ್ದರು. ಆ ಗೆಳೆತನ ಅವರ ಬಾಲ್ಯಕಾಲದಿಂದ ಬಂದದ್ದು. ಶೈವರಾದ ನಮ್ಮ ಮತ್ತು ವೈಷ್ಣವರಾದ ಅವರ ಮನೆಯ ನಡುವೆ ತುಂಬಾ ಅನ್ಯೋನ್ಯವಾದ ಭಾವವಿತ್ತು. ಪರಸ್ಪರ ಕಷ್ಟ ಸುಖದಲ್ಲಿ ಒಬ್ಬರಿಗೊಬ್ಬರು ಆಸರೆಯಾಗುವುದು ನಡೆದುಕೊಂಡು ಬರುತ್ತಾ ಇತ್ತು. ಆಗೆಲ್ಲಾ ಮಾಧ್ವ-ಸ್ಮಾರ್ತ ಭಾವನೆ ನಮ್ಮನ್ನು ಎಂದೂ ಕಾಡಿದ್ದಿಲ್ಲ. ಒಂದು ರಾತ್ರಿ ನಮ್ಮ ಮನೆಯವರ ಗೆಳತಿ ನಮ್ಮ ಮನೆಗೆ ಬಂದಾಗ 'ನಮಗೆ ಯಾರೋ ಶಂಕರಾಚಾರ್ಯರ ಫೋಟೋ ಕೊಟ್ಟಿದ್ದಾರೆ ಕಣ್ರೀ. ನೀವು ಬೇಕಾದರೆ ತೆಗೆದುಕೊಂಡು ಹೋಗಿ' ಅಂದರು. 'ಸರಿ, ನಾನು ಆ ಫೋಟೊ ತೆಗೆದುಕೊಳ್ಳುತ್ತೇನೆ' ಎಂದರು ನನ್ನ ಪತ್ನಿ. ಮಾರನೆ ಬೆಳಗ್ಗೆ ವೈಷ್ಣವ ದಂಪತಿಗಳ ಮನೆಗೆ ನನ್ನ ಪತ್ನಿ ಹೋಗಿ ಫೋಟೋ ಕೊಡಿ ಎಂದರೆ ಫೋಟೋನ ಗೇಟಿನ ಹೊರಗೇ ಆ ವೈಷ್ಣವಿ ಇಟ್ಟಿದ್ದರಂತೆ. ಶಂಕರಾಚಾರ್ಯರ ಫೋಟೋ ಮನೆಯ ಒಳಗೆ ಒಯ್ಯುವುದೂ ಆಕೆಗೆ ಸಾಧ್ಯವಾಗಿರಲಿಲ್ಲ!



ತಾನು ಆಕಸ್ಮಿಕವಾಗಿ ಹುಟ್ಟಿದ ಜಾತಿಯ ಬಗ್ಗೆ ತೀವ್ರ ವಿರೋಧೀಭಾವ ವ್ಯಕ್ತಪಡಿಸಿದ ವ್ಯಕ್ತಿ ಬಸವೇಶ್ವರ. ತಾನು ಉಚ್ಚವರ್ಣದವನು ಎಂದು ಯಾರಾದರೂ ಅಂದರೆ ಆತನಿಗೆ ತೀವ್ರವಾದ ಗಿಲ್ಟ್ ಕಾಡತೊಡಗುತ್ತದೆ. ಇದು ನಿಜವಾದ ಆಧುನಿಕ ಮನಸ್ಸು. ತನ್ನನ್ನು ಯಾರಾದರೂ ಬ್ರಾಹ್ಮಣ ಎಂದು ಗುರುತಿಸುವುದನ್ನು ಬಸವಣ್ಣ ಸಹಿಸುವುದಿಲ್ಲ. ಸಮಾಜದ ಅತ್ಯಂತ ಕೆಳಸ್ತರದ ವರ್ಣಗಳೊಂದಿಗೆ ತನ್ನನ್ನು ಸಂಬಂಧಿಸಿಕೊಳ್ಳಲು ಬಸವಣ್ಣ ಬಯಸುತ್ತಾನೆ. ಪಂಪನಿಂದ ಬಸವಣ್ಣನ ಬಳಿಗೆ ಬರುವಷ್ಟರಲ್ಲಿ ಆದ ಪಲ್ಲಟವಿದು. ಶ್ಲಾಘ್ಯವಾದ ಪಲ್ಲಟ.

● ಎಚ್.ಎಸ್.ವೆಂಕಟೇಶಮೂರ್ತಿ

ಇಷ್ಟಾಗಿಯೂ ನಮ್ಮ ಸಾವಿರ ವರ್ಷದ ಸಾಹಿತ್ಯ ಜಾತಿ ಮತ್ತು ಧರ್ಮದಿಂದ ಅಬಾಧಿತವಾದುದು ಎನ್ನುವಂತೆ ಇಲ್ಲ. ಅಲ್ಲಿ ಸ್ವಧರ್ಮ ಶ್ರದ್ಧೆ ಮಾತ್ರವಲ್ಲ, ಪರಮತ ಅಸಹಿಷ್ಣು ಭಾವ ಢಾಳಾಗಿ ಕಾಣುತ್ತದೆ. ಅದರ ಪ್ರತೀಕಾತ್ಮಕ ಅಭಿವ್ಯಕ್ತಿಯೆಂದರೆ ಜೈನರೂ, ವೀರಶೈವರೂ, ಶೈವರೂ, ವೈಷ್ಣವರೂ ತಮ್ಮ ತಮ್ಮ ದೈವಗಳ ನಡುವೆ ಏರ್ಪಡಿಸುವ ಜಿದ್ದಾಜಿದ್ದಿ.

ಒಬ್ಬರು ಮತ್ತೊಬ್ಬರನ್ನು ಮಣ್ಣುಮುಕ್ಕಿಸುವಂತೆ ಮಾಡುವ ಕಥಾಪ್ರಸಂಗಗಳ ಸೃಷ್ಟಿ. ಇದು ಕೆಲವು ಬಾರಿ ನಾಚಿಕೆ ಮತ್ತು ಹೇಸಿಗೆ ತರಿಸುವ ಸಂಗತಿಯಾಗುತ್ತದೆ. ಇಪ್ಪತ್ತನೇ ಶತಮಾನದಲ್ಲಿ ಒಂದು ತಂಗಾಳಿ ಬೀಸಿದಂತೆ ಜಾತಿನಿರಪೇಕ್ಷಭಾವ ಪ್ರಸರಿಸಿತೆನ್ನಬೇಕು. ನವೋದಯದ ಕಾಲದಲ್ಲಿ ಜಾತಿಯ ಒಳಸುಳಿಗಳು ತೀರ ಮಾಯವಾಗಿದ್ದವು ಎನ್ನುವಂತಿಲ್ಲವಾದರೂ, ಜಾತಿಯ ಹೆಸರೆತ್ತಿ ಮಾತಾಡುವುದು ಮುಜುಗರದ ಸಂಗತಿಯಾಗಿ ಪರಿಣಮಿಸಿದ್ದಂತೂ ಸುಳ್ಳಲ್ಲ.

ಇಪ್ಪತ್ತನೇ ಶತಮಾನದಲ್ಲಿ ಜಾತಿಯ ಹೆಸರು ಹೇಳಿ ಸಾಹಿತ್ಯವನ್ನು ಗುರುತಿಸಲಿಕ್ಕೆ ಬರುವುದಿಲ್ಲ ಅನ್ನುವುದು ಸಮಾಧಾನ ತರುವ ಸಂಗತಿ. ಅಲ್ಲಿ ಕುವೆಂಪು, ಬೇಂದ್ರೆ, ಮಧುರಚೆನ್ನ, ಮಾಸ್ತಿ, ಕಾರಂತ, ಎಲ್ಲರೂ ಕನ್ನಡ ಕಟ್ಟುವ ಕೆಲಸದಲ್ಲಿ ಹೆಗಲಿಗೆ ಹೆಗಲು ಹಾಕಿ ದುಡಿದಿದ್ದಾರೆ. ಬ್ರಾಹ್ಮಣ, ಲಿಂಗಾಯತ, ಶೂದ್ರ, ಮುಸ್ಲಿಮ್, ಕಿರಿಸ್ತಾನ ಧರ್ಮದ ಲೇಖಕರೆಲ್ಲಾ ಒಂದೇ ಕಾಲದಲ್ಲಿ ಕನ್ನಡದ ನವೋದಯದ ಕನಸು ಕಾಣುತ್ತಾ, ನವಕರ್ನಾಟಕಕ್ಕೆ ಕನವರಿಸುತ್ತಾ ದುಡಿದ ಚೇತೋಹಾರಿ ದೃಶ್ಯ ನಮಗೆ ಕಾಣುತ್ತದೆ. ನವೋದಯ ಸಂದರ್ಭದಲ್ಲಿ ಜಾತಿಯ ಪ್ರಕಟ ಒಳಭೇದಗಳಿಲ್ಲ. ಸಾರ್ವಜನಿಕವಾಗಿ ನಾವು ಜಾತಿಯ ಹೆಸರು ಹೇಳಿಕೊಂಡು ರಾಜಕೀಯ ಮಾಡುವುದಿಲ್ಲ ಎನ್ನುವುದೂ ಕೂಡ ತಕ್ಕಮಟ್ಟಿಗಿನ ಶ್ಲಾಘ್ಯವಾದ ನಿಲುವೇ.

ಪ್ರಗತಿಶೀಲ ಚಳವಳಿಯ ಸಂದರ್ಭದಲ್ಲೂ ನಾವು ಜಾತಿಗಳಿಂದ ಸಿಡಿದು ದೂರ ನಿಲ್ಲುವ ಲೇಖಕ ಸಮುದಾಯವನ್ನು ನೋಡುವುದಿಲ್ಲ. ಅನಕೃ, ಕಟ್ಟೀಮನಿ, ಚದುರಂಗ, ನಿರಂಜನ ಬೇರೆ ಬೇರೆ ಜಾತಿಪಂಥದವರಾಗಿದ್ದೂ ಅವರೆಲ್ಲಾ ಜಾತಿಕಟ್ಟಿಗೆ ಮೀರಿದ ಯಾವುದೋ ಆದರ್ಶಕ್ಕಾಗಿ ಒಟ್ಟಾಗಿ ದುಡಿದವರಂತೆ ಕಾಣುತ್ತಾರೆ. ಕೊನೆಕೊನೆಯಲ್ಲಿ ನಿರಂಜನ ಮತ್ತು ಅನಕೃ ನಡುವೆ ಉಂಟಾದ ಘರ್ಷಣೆ ಜಾತಿಮೂಲಕ್ಕಿಂತ ಹೆಚ್ಚಾಗಿ ಅಹಂಪ್ರಜ್ಞೆಯ ಜಗಳವೆನ್ನುವಂತೆಯೇ ನನಗೆ ತೋರುತ್ತದೆ.

ನವ್ಯ ಸಂದರ್ಭ ಕುರಿತಂತೆಯೂ ಇದು ಸತ್ಯ. ಅಡಿಗರೊಂದಿಗೆ ಕೈ ಜೋಡಿಸಿದವರಲ್ಲಿ ರಾಮಚಂದ್ರ ಶರ್ಮ, ಅನಂತಮೂರ್ತಿ, ಸುಮತೀಂದ್ರ ನಾಡಿಗ ಮೊದಲಾದ ಬ್ರಾಹ್ಮಣರಿರುವಂತೆಯೇ, ತೇಜಸ್ವಿ, ಲಂಕೇಶ್, ದೇಸಾಯಿ, ಚನ್ನಯ್ಯ ಮೊದಲಾದ ಅಬ್ರಾಹ್ಮಣರೂ ಇದ್ದಾರೆ. ಒಂದು ಜನಾಂಗದ ಕಣ್ಣು ತೆರೆಸಿದ ಕವಿ ಎಂದು ಲಂಕೇಶ್ ಮೊದಲು ಹೇಳಿದಾಗ ಇದ್ದ ಅರ್ಥ ಅದೇ ವಾಕ್ಯವನ್ನು ಎರಡನೇ ಬಾರಿ ಅವರು ವ್ಯಂಗ್ಯದ ಲೇಪನ ಹಚ್ಚಿ ಬಳಸಿದಾಗ ಆ ನಡುವಿನ ಕಾಲದ ಪಲ್ಲಟದ ಸೂಚನೆಯನ್ನು ನೀಡಬಹುದು.

ಆಮೇಲೆ ಬ್ರಾಹ್ಮಣ ವಿರೋಧೀ ಚಳವಳಿಯೊಂದು ಪ್ರಾರಂಭವಾದುದು ಈಗ ಇತಿಹಾಸದ ಸಂಗತಿ. 'ರುಜುವಾತು'ನ ಮೊದಲ ಸಂಗ್ರಹ ಬಂದಾಗ ಲಂಕೇಶ್ ತಮ್ಮ ಪತ್ರಿಕೆಯ ಸಂಪಾದಕೀಯದಲ್ಲಿ 'ರುಜುವಾತ'ಲ್ಲಿ ಎಷ್ಟು ಜನ ಬ್ರಾಹ್ಮಣ ಲೇಖಕರಿದ್ದಾರೆ ಎಂದು ತಲೆ ಎಣಿಸಿದ್ದು ನೆನಪಾಗುತ್ತಿದೆ. ಮುಂದೆ ದಲಿತ, ಬಂಡಾಯ ಚಳವಳಿಗಳು ಜಾತಿಧರ್ಮಗಳ ಬಗ್ಗೆ ಅವುಗಳ ರಾಜಕೀಯ ಹುನ್ನಾರಗಳ ಬಗ್ಗೆ ನಿಸ್ಸಂಕೋಚದಿಂದ ಮಾತಾಡತೊಡಗಿದ್ದನ್ನು ನಾವು ನೋಡುತ್ತೇವೆ. ವಿಮರ್ಶೆಯಲ್ಲಿ ಮಾತ್ರವಲ್ಲ, ಸೃಜನಶೀಲ ಕೃತಿಗಳಲ್ಲೂ ಜಾತಿಯ ಧ್ವನಿ ಸ್ಪಷ್ಟವಾಗಿ ಕೇಳತೊಡಗಿದ್ದನ್ನು ಯಾರೂ ಗಮನಿಸಬಹುದು.

ಅನೇಕ ವರ್ಷಗಳ ಒಳಗುದಿ, ಅಮಾನುಷವಾದ ಶೋಷಣೆಯ ಫಲ ಇದೆನ್ನಬೇಕು. ದಲಿತ ಕವಿ ಸಿದ್ಧಲಿಂಗಯ್ಯನವರ ಕೋಪ ಸಕಾರಣವಾದುದೂ ಸಹಜವಾದುದೂ ಆಗಿತ್ತು. ಕನ್ನಡ ಸಾಹಿತ್ಯ ಪ್ರಪಂಚವನ್ನು ಒಮ್ಮೆ ಅದು ಹಿಡಿದು ಅಲ್ಲಾಡಿಸಿದ್ದೂ ಕೂಡ ಈಗ ಐತಿಹಾಸಿಕ ಸತ್ಯ. ಪಾಪಪ್ರಜ್ಞೆ ಮತ್ತು ಶೋಧಕ ನೆಲೆಯಲ್ಲಿ ಮೇಲ್ಜಾತಿಯ ಜನ ಬರೆಯುವುದು ಅನಿವಾರ್ಯವಾದ ಸಂದರ್ಭವಿದು. ಈಗ ನಮಗೆ ಆದರ್ಶ ಪಂಪನಲ್ಲ; ಬಸವಣ್ಣ.

ಜಾತಿಯ ಕಿಡಿಗೇಡಿತನಗಳನ್ನು ಟೀಕಿಸುವ, ಲೇವಡಿಮಾಡುವ ಪ್ರವೃತ್ತಿ ಕಾರ್ಯಕಾರಣ ಫಲವೆಂದೇ ನಾನು ಭಾವಿಸುತ್ತೇನೆ. ಆದರೆ ಈವರೆಗೂ ಹಾಗೆ ಟೀಕಿಸುವ ಲೇಖಕರು ಬ್ರಾಹ್ಮಣರು ಬರೆದ ಗುಣಮಟ್ಟದ ಸಾಹಿತ್ಯ ಅಸಾಹಿತ್ಯ ಎಂದು ನೇತೀವಾದಕ್ಕೆ ಇಳಿದದ್ದು ನಾನು ನೋಡಿರಲಿಲ್ಲ. ಈಗ ಸಾರಾಸಗಟಾಗಿ ಇವನು ಈ ಜಾತಿಯವನೋ? ಹಾಗಾದರೆ ಅವನ ಮೇಲೆ ನಿರ್ಲೋಚನೆಯಿಂದ ಮಣ್ಣು ಎಳಿ ಎನ್ನುವ ಧೋರಣೆ ನಮ್ಮ ಆಕ್ರೋಶಿತ ಯುವಜನಾಂಗದಲ್ಲಿ ಕಂಡು ಬರುತ್ತಾ ಇದೆ.

ಜಾತಿಯ ಕಾರಣ ಹಿಡಿದು ಯಾರಾದರೂ ಕುಮಾರವ್ಯಾಸ, ಪುರಂದರ, ಕಾರಂತ, ಬೇಂದ್ರೆ, ಪುತಿನ, ಕೆಎಸ್‌ನ , ಅಡಿಗರನ್ನು ದೂರ ಇಡುವುದಾದರೆ, ಒಂದು ವರ್ಗ ನಿರ್ಮಿಸುವ ಒಟ್ಟು ಸಾಹಿತ್ಯದ ಬಗ್ಗೆಯೇ ಅರುಚಿಯನ್ನು ಬೆಳೆಸಲು ಇನ್ನೊಂದು ವರ್ಗ ಪಣ ತೊಡುವುದಾದರೇ ಅದು ನಿಜಕ್ಕೂ ಬಹಳ ದೊಡ್ಡ ಸಾಹಿತ್ಯಕ ದುರಂತ ಎಂದೇ ನಾನು ಭಾವಿಸುತ್ತೇನೆ.

ಪುತಿನ ಯಾವಾಗಲೂ ಹೇಳುತ್ತಿದ್ದರು, ಲೇಖಕರಲ್ಲಿ ಗುಂಪುಗಳಿರಲಿ, ಆ ಗುಂಪುಗಾರಿಕೆ ಸಾಹಿತ್ಯದ ವೈವಿಧ್ಯವನ್ನು ಬೆಳೆಸುತ್ತದೆ. ಆದರೆ ಓದುಗರಲ್ಲಿ ಗುಂಪುಗುಳಿತನ ಇರಕೂಡದು. ಆ ಗುಂಪುಗಾರಿಕೆ ಒಂದು ಸಂಸ್ಕೃತಿಯನ್ನೇ ಹಾಳುಗೆಡಹುತ್ತದೆ. ನಾವು ಈಗ ಹಿಡಿದಿರುವುದು ಓದುಗರನ್ನು ವರ್ಗೀಕರಿಸುವ ಅಪಾಯಕಾರಿ ದಾರಿಯನ್ನು. ಬೇಂದ್ರೆ, ಕುವೆಂಪು ಇವರನ್ನು ಕನ್ನಡ ಸಂಸ್ಕೃತಿ ನಿರ್ಮಿಸಿದ ಘನವಾದ ಎರಡು ಸಾಹಿತ್ಯಕ ಪ್ರತಿಮೆಗಳೆಂದು ನಾವು ಗ್ರಹಿಸುವುದಾದಲ್ಲಿ, ಈ ಎರಡು ಪ್ರತಿಮೆಗಳನ್ನು ಆರಾಧಿಸದ ಸಾಹಿತ್ಯ ಪ್ರಜ್ಞೆ ಕೊನೆಗೂ ಅಪೂರ್ಣವಾಗಿಯೇ ಉಳಿಯುತ್ತದೆ. ವಿವೇಕ ಶಾನಭಾಗರ 'ದೇಶಕಾಲ' ವಿಶೇಷ ಸಂಚಿಕೆಯನ್ನು ಕುರಿತು ನಡೆಯುತ್ತಿರುವ ಚರ್ಚೆ ಈ ನೆಲೆಯಲ್ಲಿ ನಡೆಯಬೇಕಾಗಿದೆ. ●


## ದೇಶಕಾಲ ಚರ್ಚೆ

## 'ದೇಶಕಾಲ' ಕುರಿತು ಬನ್ನಾಡಿಯವರ ತೀರ್ಪುಗಳು

ಪ್ರಿಯರೆ,

ದಯವಿಟ್ಟು ನಾನು 'ದೇಶಕಾಲ'ದ ರಕ್ಷಣೆಗೆ ಸದಾ ಧಾವಿಸಿ ಬರುವ ಸ್ವಯಂಸೇವಕ ಎಂದು ತಿಳಿಯಬೇಡಿ. ನನಗೆ ಅಂತಹ ಉತ್ಸಾಹವೇನೂ ಇಲ್ಲ, ಆದರೆ ಕಳೆದ ಕೆಲವು ವಾರಗಳಿಂದ 'ದೇಶಕಾಲ'ದ ಮೇಲೆ ಎಸೆಯಲಾಗುತ್ತಿರುವ ಕಲ್ಲುಗಳಲ್ಲಿ ಕೆಲವು ನನ್ನ ಮೇಲೂ ಬಿದ್ದಿವೆ. ಆ ಪತ್ರಿಕೆಯಲ್ಲಿ ಬರಹದ ಮುಖಾಂತರ ಹಲವು ಸಲ ಕಾಣಿಸಿಕೊಂಡವರಲ್ಲಿ ನಾನೂ ಒಬ್ಬ. 'ದೇಶಕಾಲ'ವೆಂದರೆ ಅದರ ಬೈಂಡುಗಳ ಒಳಗಿರುವ ಬರಹಗಳಲ್ಲದೆ ಬೇರೆ ಏನೂ ಅಲ್ಲ. ಹಾಗಾಗಿ ಅದಕ್ಕೆ ಬಿದ್ದ ಹೊಡೆತಗಳು ನನಗಲ್ಲ ಎಂದು ಸಾವರಿಸಿಕೊಂಡು ಕೂರುವುದಕ್ಕೆ ಆಗುತ್ತದೆಯೆ? ಕಳೆದ ವಾರ ಗೆಳೆಯ ವಸಂತ ಬನ್ನಾಡಿ, ಯಾರ್‍ಯಾರನ್ನೋ ಮನಸ್ಸಿನಲ್ಲಿ ಇರಿಸಿಕೊಂಡು 'ದೇಶಕಾಲ'ಕ್ಕೆ ಥಳಿಸಿದ್ದರಲ್ಲಿಯೂ ಒಂದೆರಡು ಪೆಟ್ಟು ನನಗೆ ಬಿದ್ದಿವೆ. ನಾನು ಇಂತಹದ್ದನ್ನೆಲ್ಲ ಬಾಕಿ ಇರಿಸಿಕೊಳ್ಳುವ ಪೈಕಿಯವನೇ ಅಲ್ಲವಾದ್ದರಿಂದ ಈ ಪತ್ರ.

ಬನ್ನಾಡಿ ತನ್ನ ಬರಹದಲ್ಲಿ "ಅಡಿಗ, ಅನಂತಮೂರ್ತಿ ಹಾಗೂ ಸುಬ್ಬಣ್ಣನವರ ಬಗ್ಗೆ ನನಗೆ ಈಗಲೂ ಗೌರವವಿದೆ" ಎಂಬ ಕೇವಿಯಟ್ಟನ್ನು ಮೊದಲೇ ಸಲ್ಲಿಸಿ, ನಂತರ ಆ ಮೂವರ ಗೌರವಕ್ಕೂ ಮಸಿ ಬಳಿದಿದ್ದಾರೆ. ಆ ಪ್ಯಾರಾದ ಕೊನೆಯಲ್ಲಿ "ಇದು ಯಾರನ್ನೂ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವ ಪ್ರಶ್ನೆ ಅಲ್ಲ ಸಂಬಂಧಪಟ್ಟವರು ತಮ್ಮ ನಿಲುವುಗಳನ್ನು ಹೇಳಬೇಕಾದ ಸಂದರ್ಭ" ಎಂಬ ಷರಾವನ್ನೂ ಬನ್ನಾಡಿ ಸೇರಿಸಿದ್ದಾರೆ. ಈಗಾಗಲೇ ಕನ್ನಡದಲ್ಲಿ ನಡೆದು ಹೋಗಿರುವ ಚರ್ಚೆಯನ್ನೇ ವಾದ ಪ್ರತಿವಾದ ಎಂದು ಪರಿಗಣಿಸಿ ಬನ್ನಾಡಿ ತಮ್ಮ ತೀರ್ಪನ್ನು ಪ್ರಕಟಿಸಿಬಿಟ್ಟಿದ್ದಾರೆ. ಆದರೆ ತಮ್ಮ ತೀರ್ಪಿಗೆ ಅವರು ಹೊಸತಾದ ಯಾವ ಸಾಕ್ಷ್ಯಾಧಾರವನ್ನೂ ಒದಗಿಸಿಲ್ಲ. ನಾನು ಆಡಿದ್ದನ್ನೇ ಆಡುವ ಕಿಸಬಾಯಿ ದಾಸಯ್ಯನ ಹಾಗೆ ಕಂಡ ರೂಪಕವಾಗಿಲ್ಲ. ವಿಮರ್ಶೆಯಲ್ಲಿ ಪ್ರತಿಯೊಂದು ತೀರ್ಮಾನಕ್ಕೂ ನಾನು ಪಕ್ಕದ ಸಾಕ್ಷ್ಯಾಧಾರಗಳನ್ನು ಕೇಳುವವನೇ. ತನ್ನ ಬರಹದಲ್ಲಿ ಬನ್ನಾಡಿ 'ದೇಶಕಾಲ'ವನ್ನು ನೆಪವಾಗಿಟ್ಟುಕೊಂಡು ಎಷ್ಟು ಜನ ಲೇಖಕರಿಗೆ ಜಾಡಿಸಿದ್ದಾರೆ! ಆ ಲೇಖಕರ ಸಾಧನೆ ನೆನೆಸಿಕೊಂಡರೆ, ತನ್ನ ತೀರ್ಮಾನಗಳಿಗೆ ಬನ್ನಾಡಿ ಕೊಡುವ ಆಧಾರ ಹಾಗೂ ವಿವರಣೆ ಏನೇನೂ ಸಾಲದು. ಬನ್ನಾಡಿ "ಸಾಕ್ಷಿ"



● ಜಿ.ರಾಜಶೇಖರ

# ಶಕಾಲ' ಒಂದು losed ircuit

ನಿದ ಐದು ವಾರಗಳಿಂದ 'ಲಂಕೇಶ್' ವಾರ ಮಲ್ಲಿ ಬರುತ್ತಿರುವ 'ದೇಶಕಾಲ' ಚರ್ಚೆಯು ರೆತು ಮಲಗಿರುವವರನ್ನು ಚಾಟಿ ಏಟು ಎಬ್ಬಿಸುವಂತಿದೆ. ಅದರಲ್ಲೂ ಈ ವಾರದ ಗರೆರ ಲೇಖನವಂತೂ ವೇಷ ಬದಲಿಸುವ ಬುತ್ತರ ನಿಜ ಮುಖವಾಡವನ್ನು ಬಗೊಳಿಸುತ್ತ ಇಂದಿನ ಸಾಹಿತ್ಯಿಕ, ರಾಜಕೀಯ ಕರಣದ ಅವಕಾಶವಾದಿ ಮನಸ್ಸುಗಳನ್ನು ಎತಿ classify ಮಾಡಿದೆ. ಐಜೂರ್ – ಕನಾಥ್ ಜೋಡಿ ಯಾವುದನ್ನು 'ಕಚ್ಚಾ' ಬಲ್ಲಿ ಊರಟಿದ್ದರೋ, ಬರಗೂರರು ಕ ಪರಿಭಾಷೆಯಲ್ಲಿ ಚರ್ಚೆಗೆ ವಿಸ್ತಾರ ದಗಿಸಿದ್ದಾರೆ.

ಧಾಟಿ ಲ್ಲವೆಂದು ಮೊದಲು ಚರ್ಚೆಯಿಂದ ದೂರ ವರು ಕೂಡಾ ಈಗ ಭಾಗವಹಿಸಬಹುದು.

ಡಲಿನ ಒಂದೆರಡು ಸಂಚಿಕೆ ಬಿಟ್ಟು ನಾನು ಲ'ದ ಎಲ್ಲ ಸಂಚಿಕೆಗಳನ್ನೂ ಓದಿದ್ದೇನೆ. ಕೆಲವು ಕನ-ಚರ್ಚೆಯನ್ನು ಇಷ್ಟಪಟ್ಟಿದ್ದೇನೆ. ಅನುವಾದಿತ ಳಿಂದ ಖುಷಿ ಪಟ್ಟಿದ್ದೂ ಉಂಟು. ಆದರೆ ುತ್ತ ಅದೇ ಧಾಟಿ ಏಕತಾನತೆ ತರಿಸತೊಡಗಿದ್ದೂ ಅದು ಬಹುಪಾಲು ಳಿಗೆ ಸ್ವಲ್ಪ ಕಾಲದ ದರೂ ಬಾಧಿಸುವ ರೋಗ ೊಂಡರೂ, ಮತ್ತೆಮತ್ತೆ ೊಡಗಿದ ಅವೆ ಅವೇ ಗಳು ಇದೊಂದು ಸಾಹಿತ್ಯಿಕ ಾರಿಕೆಯತ್ತ ವಾಲುತ್ತಿದೆ ಸ್ಪಷ್ಟ ಸೂಚನೆ ನೀಡಿತ್ತು.

ಸಮಯದಲ್ಲಿ ಬರಲಿರುವ ಂಕದ ಬಗೆಗೆ ನಿರೀಕ್ಷೆಯಿತ್ತು. ವಿಶೇಷಾಂಕ ಮಾತ್ರ ಬಿಡಿ ಗಳು ಕೊಟ್ಟಷ್ಟೂ ಾನವನ್ನು ತರಲಿಲ್ಲ. ೀರಿದ ಪ್ರಚಾರ ಅತಿ ಸುನ್ನು ಹುಟ್ಟು ಹಾಕಿದಾಗ ಉಂಟಾಗುವ ು ಇದು.


ಮುತ್ನಪೂರ್ವಕವೋ ಅಲ್ಲವೋ ಒಂದು ಜಾತಿ ಪ್ರಾಬಲ್ಯ ಅಲ್ಲಿರುವುದು ಸೂರ್ಯ ಸ್ಪಷ್ಟ. ದು closed circuit ವ್ಯವಸ್ಥೆ. ಅಲ್ಲಿ ಮುಕ್ತವಲ್ಲ, ಓದುಗರ ಪ್ರತಿಕ್ರಿಯೆ – ಹಿಸುವಿಕೆಗೆ ಎಂದೂ ಅವಕಾಶವಿಲ್ಲ. ಮು ಸಂಚಿಕೆ ನೋಡಿದ ಕೂಡಲೇ ಸಂಪಾದರಹಿತ ಪತ್ರಿಕೆ ಅದು ಎಂದೂ ಯಾರಿಗಾದರು ಹೊಳೆಯುತ್ತದೆ. 'ನಾವು ಪ್ರಕಟಿಸಿದ್ದೆಲ್ಲ ಅತ್ಯುತ್ತಮ ಸರಕೆ, ಅದನ್ನು ಓದುವುದಷ್ಟೇ ಸಾಹಿತ್ಯಾಸಕ್ತರ ಕೆಲಸ' ಎಂಬುದು ಆ ಪತ್ರಿಕೆಯ ಎಂದಿನ ಧೋರಣೆ.

ದೇಶಕ್ಕಾಗಲಿ ಅಥವಾ ವ್ಯಕ್ತಿಗಾಗಲಿ ಸಹಾಯ ಮಾಡುವುದೆಂದರೆ ಆರ್ಥಿಕ ಸಹಾಯವೇ ಎಂದುಕೊಂಡು, ಧನ್ಯತಾಭಾವ ಅನುಭವಿಸುವ ಮೇಲ್ಮಧ್ಯಮ ವರ್ಗದವರ ಪ್ರತಿನಿಧಿ ಅದು. ಈ ನೀತಿಯ ಜನರಿಗೆ ತಮ್ಮ ದುಡ್ಡಿನಲ್ಲಿ ತಾವು ಮಾಡಿಕೊಂಡ ಯಾವುದೂ ಪ್ರಶ್ನಾರ್ಹವಲ್ಲ. ಅಲ್ಲಿ ಕಷ್ಟವೆಂದರೆ ಆರ್ಥಿಕ ಸಂಕಷ್ಟ. ಅವಮಾನವೆಂದರೆ ಬಡತನದ ಅವಮಾನ. ಅನುಭವಿಸಿದ್ದು ಮಾತ್ರ ಪ್ರಾಮಾಣ್ಯ ಎಂದಾದರೆ ಉಳಿದ ಅವಮಾನ, ಸಂಕಟಗಳ ಅನುಭವವೇ ಇಲ್ಲದವರು ಅದನ್ನು ಊಹಿಸುವುದಾದರು ಹೇಗೆ? ಇಂತಹ ಮಂದಿಯೇ ತಮ್ಮ ಅಹಮಿನ ಪೋಷಣೆಗೋ ಎಂಬಂತೆ ಸಾಹಿತ್ಯ ಕಲೆ, ಆಧ್ಯಾತ್ಮ, ಇವುಗಳ ಉಳಿವಿಗೆ ಟೊಂಕಕಟ್ಟಿ ನಿಂತರೆ ಏನಾಗಬಹುದು ಎಂಬುದಕ್ಕೆ 'ದೇಶಕಾಲ', ಆರ್ಟ್ ಆಫ್ ಲಿವಿಂಗ್, Iskon ಇಂಥವು ಉದಾಹರಣೆಗಳಷ್ಟೇ.

ಇಂತಹ ನೆಲೆಯನ್ನು ಮೂಲವಾಗುಳ್ಳ ಪತ್ರಿಕೆಯಿಂದ ಸಾಮಾಜಿಕ ನ್ಯಾಯಕ್ಕೆ ಸಂಬಂಧಪಟ್ಟ ಬರಹಗಳನ್ನು ನಿರೀಕ್ಷಿಸುವುದೇ ಓದುಗರ ತಪ್ಪಿರಬಹುದು. ನೆಲಮೂಲದ ಬರಹಗಾರರ ಭಾಗವಹಿಸುವಿಕೆಯನ್ನು ಹುಡುಕುವುದು ಕೂಡ ಸಮಂಜಸವಲ್ಲವೇನೋ. ಜಿ.ರಾಜಶೇಖರ್ ಹೇಳಹೊರಟು ಸಮರ್ಥಿಸಿಕೊಂಡಿದ್ದು ಇದನ್ನೇ ಇರಬೇಕು. ಬಹುಶಃ ನಮ್ಮ ಸಂವೇದನೆ, ಕಾರ್ಯವೈಖರಿಗಳನ್ನು ನಮ್ಮ ನಮ್ಮ ವೃತ್ತಿಯು ನಿಯಂತ್ರಿಸುತ್ತದೆ ಎನ್ನುವುದಕ್ಕೆ 'ದೇಶಕಾಲ'ವು ಒಂದು ಸಾಕ್ಷಿ.

ದೇಶಕಾಲ ಚರ್ಚೆ

ಸಾಹಿತ್ಯದ ಗುಂಪುಗಾರಿಕೆ, ಜಾತೀಯತೆ, ತೋರಿಕೆಯ ಕಾಳಜಿಗಳು ಎಲ್ಲರಿಗೂ ಕಾಣುತ್ತಿದ್ದರೂ ಯಾರೂ ಏನೂ ಹೇಳದ, ಪ್ರತಿಕ್ರಿಯಿಸದ ಗೊಂದಲದಲ್ಲಿದ್ದ ಹಾಗೆ ತೋರುತ್ತಿತ್ತು. ರಾಜೀಸೂತ್ರಗಳೇ ನೀತಿಯಾದ ಜಡತೆಯ ಕಾಲದಲ್ಲಿ ಪಿ.ಲಂಕೇಶ್ ಇರಬೇಕಿತ್ತು ಎಂದೂ ಹಲವರಿಗೆ ಅನಿಸಿತ್ತು. ಹೀಗಿರುತ್ತ ಕಸಿವಿಸಿಗೊಳಿಸುವ ಸತ್ಯವನ್ನು ಹೇಳಲು ಐಜೂರ್ –ಲತಾ ಜೋಡಿಯೇ ಬರಬೇಕಾಗಿದ್ದು ಇಂದಿನ ಸಾಹಿತ್ಯ ಸಂದರ್ಭದ ವ್ಯಂಗ್ಯವಲ್ಲದೆ ಬೇರೇನಲ್ಲ. ಹೇಳಬೇಕಾದದ್ದನ್ನು ಒಗಟಾಗಿ ಹೇಳದೆ, ಅಗತ್ಯಕ್ಕಿಂತ ಹೆಚ್ಚು ನೇರ ಮತ್ತು ಕಟು ಮಾತುಗಳಲ್ಲಿ ಹೇಳಿರುವುದೇ ಅವರ ಅಪರಾಧವಾಗಿ ಕಂಡರೂ ಆಶ್ಚರ್ಯವಿಲ್ಲ.



ಅಂತೂ ಹೀಗೆ ಹುಟ್ಟಿರುವ ಚರ್ಚೆ ನನ್ನನ್ನೂ ಹಲವು ತೆರನ ಆತ್ಮ ಪರೀಕ್ಷೆಗೆ ಒಳಪಡಿಸಿದೆ. ಈ ಚರ್ಚೆ, ವಾಗ್ವಾದ ಕನ್ನಡ ಸಾಹಿತ್ಯಕ್ಕೆ ಏನು ಮಾಡಲು ಶಕ್ಯವಾಯಿತು ಎಂಬುದನ್ನು ಕಾಲವೇ ನಿರ್ಧರಿಸಲಿ. ಈ ಹೊತ್ತಲ್ಲಿ ಎಂದೋ ಓದಿದ ಸಾಲುಗಳು ನೆನಪಿಗೆ ಬರುತ್ತಿವೆ:

'ಜಾತೀಯತೆಯನ್ನು ವಿರೋಧಿಸಬೇಕೆ ಹೊರತು ಜಾತಿಯನ್ನಲ್ಲ,

ಪಾಪವನ್ನು ದ್ವೇಷಿಸಬೇಕೆ ಹೊರತು ಪಾಪಿಯನ್ನಲ್ಲ..'

ಬದುಕಿನ ಸಮೀಕರಣವು ಅಷ್ಟು ಸರಳವಲ್ಲ, ಬದಲಾವಣೆಗೆ ಕಾಯುವ ತಾಳ್ಮೆ ಕಳೆದುಕೊಳ್ಳದಿರೋಣ.

• ಡಾ. ಎಚ್. ಎಸ್. ಅನುಪಮಾ

---

ಕ ಅಡಿಗರು ನಡೆಸಿದ "ಅಗ್ರೆಸಿವ್ ಸಾಂಸ್ಕೃತಿಕ ರಣ"ದ ಬಗ್ಗೆ ಹೇಳುತ್ತಾರೆ. ಎಷ್ಟು ದೊಡ್ಡ ಎಷ್ಟು ದೊಡ್ಡ ಕವಿ! ಮತ್ತು ಎಷ್ಟು ದ ತೀರ್ಪು! ಆದರೆ ಆ ಬಗ್ಗೆ ಒಂದು ಸಣ್ಣ ಯೂ ಇಲ್ಲ! ಇದು ಬನ್ನಾಡಿಯವರ ಯ ಸ್ಟೈಲ್! ಅವರು ಅಡಿಗರ ಗೀತಕ್ಕೆ ಅನಂತಮೂರ್ತಿ ಬರೆದ ಡಿಯನ್ನು ಪ್ರಸ್ತಾಪಿಸಿದ್ದಾರೆ. ಅಡಿಗರ ಕಾವ್ಯದ ಆ ಮುನ್ನುಡಿ, ಕೈಮರದಂತಹ ಬರಹ. ುವರಿಗೆ ಆ ಲೇಖನದ ಬಗ್ಗೆ ಏನು ? ಅಡಿಗ ಮತ್ತು ಅನಂತಮೂರ್ತಿ ಕನ್ನಡಕ್ಕೆ ಕಾಮು, ಲಾರೆನ್ಸ್, ಎಲಿಯಟ್‌ರನ್ನು ಾಗಿ ತಂದಿದ್ದಾರೆ ಎಂದೂ ಬನ್ನಾಡಿ ್ದಿ. ತಂದಿದ್ದಾರೆ ಎಂದರೆ ಏನು? ಅದು ಾದವೆ? ಅನುಕರಣೆಯೆ? ಪ್ರಭಾವವೆ? ಬನ್ನಾಡಿ ಸುವುದಿಲ್ಲ, ನಮ್ಮೆದುರು ಅಡಿಗ ಮತ್ತು ಅನಂತಮೂರ್ತಿಯವರ ಬರಹಗಳಿವೆ. ಅವರಿಬ್ಬರ ಬಗ್ಗೆಯೂ ಕನ್ನಡದಲ್ಲಿ ಸಾಕಷ್ಟು ವಿಮರ್ಶೆಯೂ ಪ್ರಕಟವಾಗಿದೆ. ಬನ್ನಾಡಿಯವರ ಈ ಸಂಶೋಧನೆಯ ಮೂಲ ಯಾವುದು? ಆಕರಗಳು ಯಾವುವು? ಬನ್ನಾಡಿ ಸ್ಪಷ್ಟಪಡಿಸುವುದಿಲ್ಲ. ಅಡಿಗರ ಸಾಕ್ಷಿಯಲ್ಲೇ ಕಾಣಿಸಿಕೊಂಡ ಶ್ರೇಷ್ಠತೆಯ ವ್ಯಸನಕ್ಕೆ ಈಗ ದೇಶ ಕಾಲವೂ ಬಲಿಯಾಗಿದೆ ಎಂಬುದು ಬನ್ನಾಡಿಯವರ ತೀರ್ಮಾನ. 'ದೇಶಕಾಲ'ದ ಪಡಶಾಲೆಯ ಪಂಕ್ತಿಯಲ್ಲಿ ಜಾಗ ಸಿಗದೆ, ಹೊರಗೆ ಜಗಲಿಯಲ್ಲಿ ಕೂತವರು ಮತ್ತು ಪತ್ರಿಕೆಯಲ್ಲಿ ಪ್ರಕಟವಾಗಲು "ಸ್ವಾಭಿಮಾನ ಬಿಟ್ಟು ಕಾದು" ನಿಂತವರ ಬಗ್ಗೆ ಬನ್ನಾಡಿ ಬರೆದಿದ್ದಾರೆ. ಹೀಗೆ ನಿಂತ ಕೆಲವರನ್ನಾದರೂ ಬನ್ನಾಡಿ ಹೆಸರಿಸಬಹುದಾಗಿತ್ತು. 'ದೇಶಕಾಲ'ಕ್ಕೆ ದೇವರು ಆಯುಷ್ಯ ಕೊಟ್ಟರೆ ಸಂಪಾದಕರು ಮುಂದಾದರೂ ಆ ಹೆಸರುಗಳನ್ನು ಪರಿಶೀಲಿಸಬಹುದು. •

---

# ತೀ.ನಾ. ಶ್ರೀನಿವಾಸ್ ಅಪರೂಪದ ಕಾಂಗ್ರೆಸ್ಸಿಗ



ರಾಜ್ಯದ ರಾಜಕೀಯ ಗಣಿ ಮಾಫಿಯಾದಿಂದ ಕುಲಗೆಟ್ಟು ಹೋಗುತ್ತಿರುವಾಗ ಶಿವಮೊಗ್ಗ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷತೆಯ ಆಯ್ಕೆ ಪ್ರಕ್ರಿಯೆ ಆರಂಭವಾಗಿರುವುದು ಮತ್ತು ಅದಕ್ಕೆ ವಿಪರೀತ ಪೈಪೋಟಿ ಉಂಟಾಗುವ ಲಕ್ಷಣಗಳು ಕಾಣುತ್ತಿರುವುದು ಏಕಕಾಲಕ್ಕೆ ಅನೇಕ ಅರ್ಥಗಳನ್ನು ಹೊಳೆಯಿಸುತ್ತಿದೆ.

ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಅದು ತನಗೆ ತಾನೇ ಆರೋಪಿಸಿಕೊಳ್ಳುವ ಪ್ರಾಮಾಣಿಕತೆ, ಶಿಸ್ತು, ಸಂಸ್ಕೃತಿ ಇತ್ಯಾದಿಗಳ ಬಗ್ಗೆ ಬದ್ಧವಾಗಿರುತ್ತದೆಂಬ ಭ್ರಮೆ ಯಾರಿಗೂ ಇರಲಿಲ್ಲ. ಆದರೆ ಯಾವುದೇ ಎಗ್ಗಿಲ್ಲದೆ ಸಾವಿರಾರು ಕೋಟಿ ರೂಪಾಯಿಗಳನ್ನು ಈ ಪರಿಯಾಗಿ ಲೂಟಿ ಹೊಡೆಯುತ್ತದೆ ಎಂಬ ಕಲ್ಪನೆಯೂ ಇರಲಿಲ್ಲ. ಇದನ್ನು ನೋಡಿ ಸಾಮಾನ್ಯರಿಗೆ, ಅವಕಾಶ ಸಿಕ್ಕಾಗಲೆಲ್ಲ ಸಾಕಷ್ಟು ಗಂಟು ಮಾಡಿಕೊಳ್ಳುತ್ತಿದ್ದ ಕಾಂಗ್ರೆಸ್ ಮತ್ತು ದಳದ ಮುಖಂಡರಿಗೂ ದಿಗ್ಭ್ರಮೆಯಾಗಿರುವುದು ಢಾಳಾಗಿ ಕಾಣುತ್ತಿದೆ. ಯಾರ ಲೆಕ್ಕಕ್ಕೂ ಸಿಗದಂತೆ ಕೋಟಿ ಕೋಟಿ ಬಾಚಿಕೊಳ್ಳುವ 'ಸುವರ್ಣ ದಾರಿಗಳು' ಇಷ್ಟು ದಿನ ನಮ್ಮ ಕಣ್ಣಿಗೆ ಬಿದ್ದಿರಲೇ ಇಲ್ಲವಲ್ಲ ಎಂದು "ಭ್ರಷ್ಟಾಚಾರದ ವಿರುದ್ಧ ಸಮರ ಸಾರಿರುವ" ಎಲ್ಲ ರಾಜಕೀಯ ವ್ಯಕ್ತಿಗಳ ಅಂತರಂಗ ಸೀಳಿ ನೋಡಿದರೆ ಯಾರಿಗೂ ಗೋಚರಿಸಬಹುದು.

'ಭ್ರಷ್ಟಾಚಾರ'ವನ್ನು ನಿರ್ನಾಮ ಮಾಡುತ್ತೇವೆ, ಬಡವರ ಬದುಕನ್ನು ಹಸನು ಮಾಡುತ್ತೇವೆ ಎಂದು ನಾಮುಂದು ತಾಮುಂದು ಎಂದು ತಮ್ಮ ಸ್ವಂತ ಆಸ್ತಿಗಳನ್ನು ಪಣಕ್ಕಿಟ್ಟು ಗ್ರಾಮ ಪಂಚಾಯತಿಯೂ ಸೇರಿದಂತೆ ಕಂಡಕಂಡ ಚುನಾವಣೆಗಳಿಗೆ ಸ್ಪರ್ಧಿಸುತ್ತಿರುವ ಹುರಿಯಾಳುಗಳ ಅಂತರಂಗದಲ್ಲಿಯೂ ಕೂಡ ಬಿಜೆಪಿ ಶೋಭಿಸಿರುವ ಈ 'ಸುವರ್ಣ ಬಾಗಿಲನ್ನು' ಎಡತಾಕುವ ಹಂಬಲವೇ ಮುಖ್ಯವಾಗಿದೆ ಎಂದು ಯಾವ ಹುಂಬನೂ ಅನುಮಾನವಿಲ್ಲದೆ ಹೇಳಿಬಿಡಬಹುದು.

ಇಂತಹ 'ಸುವರ್ಣ ಕಾಲ'ದಲ್ಲಿ ಶಿವಮೊಗ್ಗ ಜಿಲ್ಲಾ ಕಾಂಗ್ರೆಸಿನ ಅಧ್ಯಕ್ಷತೆಯ ಹುದ್ದೆಗೆ ಆಯ್ಕೆ ಪ್ರಕ್ರಿಯೆ ನಡೆಯುತ್ತಿದೆ.

ಕಾಂಗ್ರೆಸ್ಸು ಎಂದಿನಿಂದಲೂ ಪಾಳೆಗಾರಿಕೆಗೆ ಹೆಸರಾದ ಪಕ್ಷ. ಈ ಕಾರಣದಿಂದಾಗಿಯೇ ಶಿವಮೊಗ್ಗ ಜಿಲ್ಲೆಯಲ್ಲಿ ಕಾಂಗ್ರೆಸ್ಸು ಸಾಕಷ್ಟು ನಿರ್ನಾಮವಾಗಿದೆ. ಪಾಳೆಗಾರಿಕೆ ಪರಂಪರೆ ಬೆಳೆಸಿದವರೇ ಸ್ವತಃ ನಾಶವಾಗಿರುವುದರಿಂದ ಈಗಲಾದರೂ ಅವರಿಗೆ ಆತ್ಮಾವಲೋಕನ ಸಾಧ್ಯವಾಗಬಹುದು. ಈ ಬಾರಿ ಶಿವಮೊಗ್ಗ ಜಿಲ್ಲಾಧ್ಯಕ್ಷತೆಗೆ ತೀ.ನಾ. ಶ್ರೀನಿವಾಸ್ ಅವರ ಹೆಸರು ಕೇಳಿಬರುತ್ತಿರುವುದು ಕಾಂಗ್ರೆಸ್ಸಿನ ನಾಯಕರಿಗೆ ಕೊನೆಯ ಹಂತದಲ್ಲಾದರೂ ಜ್ಞಾನೋದಯವಾಗಿರುವುದರ ಸೂಚನೆಯಂತಿದೆ.


ಭ್ರಷ್ಟಾಚಾರ, ಜಾತೀಯತೆ ತುಂಬಿಕೊಂಡಿರುವ ಸಮಕಾಲೀನ ರಾಜಕೀಯಕ್ಕೆ ಶ್ರೀನಿವಾಸ್ ಲಾಯಕ್ಕಾದ ವ್ಯಕ್ತಿಯಲ್ಲವೆಂದು ಅನ್ನಿಸಿದರೂ ಇಂತವರು ಮುನ್ನಲೆಗೆ ಬರುವುದು ಕಾಲದ ಅಗತ್ಯವಾಗಿದೆ. ಅತ್ಯಂತ ಹಿಂದುಳಿದ ಸಣ್ಣ ಜಾತಿಯಿಂದ ಬಂದ ಶ್ರೀನಿವಾಸರಿಗೆ ಜಾತಿಯ ಬೆಂಗಾವಲಿಲ್ಲ. ಈ ಕಾರಣಕ್ಕೆ ರಾಜ್ಯ ರಾಜಕೀಯದಲ್ಲಿ ಬರಲು ಅರ್ಹತೆಯಿದ್ದರೂ ಅದು ಸಾಧ್ಯವಾಗಿಲ್ಲ.

ಇಡೀ ಶಿವಮೊಗ್ಗ ಜಿಲ್ಲೆಯಲ್ಲಿ ಬಿಜೆಪಿಯ ಭ್ರಷ್ಟ ಹಾಗೂ ಕೋಮುವಾದಿ ರಾಜಕೀಯದ ಬಗ್ಗೆ ಎದೆಸೆಟೆಸಿ ಮಾತನಾಡುವ ಶ್ರೀನಿವಾಸ್ ಎಲ್ಲೆಲ್ಲಿ ಜನಪರ ಚಳವಳಿಗಳು ನಡೆಯುತ್ತಿವೆಯೋ ಅಲ್ಲಿಗೆ ತಾವಾಗೇ ಬಂದು ಕೈಜೋಡಿಸುವವರು. ಪ್ರಗತಿಪರ ಆಶಯಗಳ ವಿಚಾರಸಂಕಿರಣಗಳಲ್ಲಿ ವಿದ್ಯಾರ್ಥಿಯಂತೆ ಬಂದು ಆಲಿಸುವವರು.

ಸಾಗರದ ಪುರಸಭೆಯ ಅಧ್ಯಕ್ಷತೆಯನ್ನು ನೀಡಿದ್ದು ಬಿಟ್ಟರೆ ಕಾಂಗ್ರೆಸ್ ಶ್ರೀನಿವಾಸರ ಅರ್ಹತೆಗೆ ತಕ್ಕಂತಹ ಸ್ಥಾನಮಾನವನ್ನು ಇದುವರೆಗೂ ನೀಡಿಲ್ಲ. ಬಂಗಾರಪ್ಪ, ಕಾಗೋಡು ತಿಮ್ಮಪ್ಪ ಹಾಗೂ ಕು. ಬಂಗಾರಪ್ಪರವರನ್ನು ಎಡಬಿಡದೆ ಬೆಂಬಲಿಸಿಕೊಂಡು ಬಂದ, ಅವರ ಯಶಸ್ಸುಗಳಲ್ಲಿ ನಿರ್ಣಾಯಕ ಪಾತ್ರವಹಿಸಿದ ಶ್ರೀನಿವಾಸರನ್ನು ಬೆಂಬಲಿಸುವುದು ಇವರೆಲ್ಲರ ಕರ್ತವ್ಯವೂ ಹೌದು.

ತೀ.ನಾ. ಶ್ರೀನಿವಾಸ್ ಪ್ರಾಮಾಣಿಕ ಕಾಂಗ್ರೆಸ್ಸಿಗರು ಮಾತ್ರವಲ್ಲ ಕೋಮುವಾದವನ್ನು ವಿರೋಧಿಸುವ ಜಿಲ್ಲೆಯ ಎಲ್ಲಾ ಪ್ರಗತಿಪರರು, ಹೋರಾಟಗಾರರು ಇವರ ಹಿಂದೆ ಇದ್ದಾರೆಂಬುದು ಕಾಂಗ್ರೆಸ್ ಮುಖಂಡರ ಗಮನದಲ್ಲಿರಲಿ.

• ಸರ್ಜಾಶಂಕರ್ ಹರಳಿಮಠ





# ಬೆಂಗಳೂರು ವಿ.ವಿ. ಹಳೆಯದಕ್ಕೆ ಜೋತುಬೀಳುವ ಪಠ್ಯಕ್ರಮ

2010-11ರಿಂದ ಜಾರಿಯಾಗುವಂತೆ ಬೆಂಗಳೂರು ವಿಶ್ವವಿದ್ಯಾಲಯವು ತನ್ನ ಪದವಿ ತರಗತಿಗಳಿಗೆ "ಹೊಸ" ಪಠ್ಯಕ್ರಮವನ್ನು ಪ್ರಕಟಿಸಿದೆ. ಆದರೆ ಇದರಲ್ಲಿ ಹೊಸದೇನೂ ಇಲ್ಲ. 2007-2010ರ ಪಠ್ಯಕ್ರಮವನ್ನು ಇಂದಿನ ಜಾಗತಿಕ ಅಗತ್ಯಗಳಿಗೆ ಅನುಗುಣವಾಗಿ ತಯಾರಿಸಲಾಗಿತ್ತು. ಹತ್ತಾರು ಕಮ್ಮಟಗಳನ್ನು ನಡೆಸಿ, ನಾಡಿನ ಹಲವು ವಿದ್ವಾಂಸರ ಸಲಹೆಯ ಮೇರೆಗೆ ಸಂಶೋಧನಾತ್ಮಕವಾಗಿ ಆ ಪಠ್ಯಗಳನ್ನು ಸಿದ್ಧಪಡಿಸಲಾಗಿತ್ತು. ನಾಡಿನ ಖ್ಯಾತ ವಿದ್ವಾಂಸರೂ, ಚಿಂತಕರೂ ಆದ ಡಾ. ಯು.ಆರ್.ಅನಂತಮೂರ್ತಿ, ಡಾ. ಕೆ.ವಿ.ನಾರಾಯಣ, ಡಾ. ರಾಜೇಂದ್ರ ಚೆನ್ನಿ, ಪ್ರೊ. ಕಿ.ರಂ.ನಾಗರಾಜ, ಡಾ. ಎಚ್.ಎಸ್.ರಾಘವೇಂದ್ರರಾವ್, ಡಾ. ಓ.ಎಲ್.ನಾಗಭೂಷಣಸ್ವಾಮಿ, ಡಾ. ರಹಮತ್ ತರೀಕೆರೆ ಮೊದಲಾದವರನ್ನು ಕರೆಸಿ ಹಲವು ಬಾರಿ ಚರ್ಚಿಸಿ, ಪರಿಷ್ಕರಿಸಿ ಪಠ್ಯಗಳನ್ನು ರೂಪಿಸಲಾಗಿತ್ತು. ಆದರೆ ಇದೀಗ ಯಾವುದೇ ಮಾನದಂಡಗಳಿಲ್ಲದೆ ಆ ಪಠ್ಯಮಾದರಿಯನ್ನು ಬದಲಿಸಲಾಗಿದೆ.

ವಾಣಿಜ್ಯದ ರಾಜಕಾರಣ, ವಿಜ್ಞಾನದ ತಾತ್ವಿಕತೆ, ಜ್ಞಾನದ ರಾಜಕಾರಣ, ಪರಿಸರ ಚಿಂತನೆ, ಜಾಗತಿಕತೆ-ಸ್ಥಳೀಯತೆ, ಊರು-ಭಾಷೆ ಹೀಗೆ ಭಿನ್ನ ಥೀಮುಗಳ ಹಿನ್ನೆಲೆಯಲ್ಲಿ ಪಠ್ಯಗಳನ್ನು ಸಂಯೋಜಿಸಲಾಗಿತ್ತು. ಬಿ.ಎ., ಬಿ.ಎಸ್ಸಿ, ಬಿ.ಕಾಂ., ಬಿ.ಬಿ.ಎಂ., ಇತ್ಯಾದಿ ಆಯಾ ಕೋರ್ಸುಗಳಿಗೆ ಅನುಗುಣವಾಗಿ ಭಿನ್ನ ಥೀಮುಗಳ ಮೂಲಕ ಪಠ್ಯಗಳನ್ನು ನಿಗದಿಗೊಳಿಸಲಾಗಿತ್ತು. ಸಾಮಾಜಿಕ ನ್ಯಾಯವನ್ನು ಒಳಗೊಳ್ಳುತ್ತಲೆ ಪ್ರಸ್ತುತ ಜಾಗತಿಕ ಸವಾಲುಗಳಿಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ಮತ್ತು ಇಂದಿಗೆ ಕನ್ನಡವನ್ನೂ ಪ್ರಸ್ತುತಗೊಳಿಸುವ ಕೆಲಸವನ್ನು 07-10ರ ಪಠ್ಯಮಾದರಿಯು ಮಾಡುತ್ತಿತ್ತು. ಆದರೆ ಈಗ ತಯಾರಿಸಿರುವ ಪಠ್ಯವು ಒಂದು ರೀತಿಯಿಂದ ಇದನ್ನೆಲ್ಲ ನಿರಾಕರಿಸಿದ ಹಿನ್ನಡೆಯಾಗಿದೆ.

ಥೀಮ್ ಆಧಾರಿತ ಪಠ್ಯಮಾದರಿಯಲ್ಲಿ ಅನ್ಯಜ್ಞಾನ ಶಿಸ್ತುಗಳು ಮತ್ತು ಕನ್ನಡದ ನಡುವಿನ ಸಂಬಂಧಗಳು ವ್ಯಕ್ತವಾಗುವಂತೆ ಪಠ್ಯವನ್ನು ರೂಪಿಸಲಾಗಿತ್ತು. ಪೂರ್ವಪಠ್ಯ, ಪಠ್ಯ, ಪೂರಕಪಠ್ಯ ಹೀಗೆ ಅಂತರ್‌ಪಠ್ಯಗಳ ತುಲನಾತ್ಮಕ ಅಭ್ಯಾಸ ಏರ್ಪಡುವಂತೆ ಪಠ್ಯಗಳನ್ನು ಸಿದ್ಧಪಡಿಸಲಾಗಿತ್ತು. ಅಲ್ಲದೆ ಹೆಚ್ಚಿನ ಓದಿಗೆ ಮತ್ತು ಪೂರಕ ಓದಿಗೆ ಕೂಡ ಪಠ್ಯಗಳನ್ನು ಸೂಚಿಸಲಾಗಿತ್ತು. ಬಳಸಿದ ಪಾರಿಭಾಷಿಕ ಪದಗಳಿಗೆ ಅರ್ಥಕೋಶಗಳನ್ನು ಒದಗಿಸಲಾಗಿತ್ತು. ಪಠ್ಯದ ಅಭ್ಯಾಸಕ್ಕೆ ಬೇಕಾದ ಪೂರಕ ಟಿಪ್ಪಣಿಗಳನ್ನು ಕೂಡ ನೀಡಲಾಗಿತ್ತು. ಆದರೆ ಈಗಿನ ಪಠ್ಯಗಳು ಇವನ್ನೆಲ್ಲ ಕೈಬಿಟ್ಟು ವಿದ್ಯಾರ್ಥಿಗಳನ್ನು ಕತ್ತಲಲ್ಲಿ ಇಟ್ಟಿವೆ. ಅಧ್ಯಾಪಕರನ್ನು ಕೇವಲ ಸಾರಾಂಶೀಕರಣ ಮಾಡುವಂತೆ ಮಿತಿಗೊಳಿಸಲಿವೆ.


ಪಠ್ಯಗಳನ್ನು ವಿದ್ಯಾರ್ಥಿಗಳು ಸುಲಭ ಬೆಲೆಯಲ್ಲಿ ಕೊಳ್ಳಲು ಅನುಕೂಲವಾಗುವಂತೆ ಪ್ರಸಾರಾಂಗದಿಂದ ಎಲ್ಲವೂ ಪ್ರಕಟವಾಗುವಂತೆ ಈ ಮೊದಲು ಪಠ್ಯಗಳನ್ನು ರೂಪಿಸಲಾಗಿತ್ತು; ಆದರೆ ಈಗ ಖಾಸಗಿ ಪ್ರಕಟಣೆಗಳಿಗೆ ಹೆಚ್ಚು ಅವಕಾಶ ಒದಗುವಂತೆ ಪಠ್ಯಕ್ರಮ ನಿಗದಿಗೊಳಿಸಲಾಗಿದೆ. ಎರಡು ಸೆಮಿಸ್ಟರುಗಳಿಗೆ ಸೇರಿ ಭಾಷಾ ಪಠ್ಯಗಳಲ್ಲಿ ಒಂದೇ ಪುಸ್ತಕ ರೂಪಿಸಲಾಗಿತ್ತು. ಸುಮಾರು 40 ರೂಪಾಯಿಗಳಿಗೆ ಕೈಗೆಟಕುವ ಬೆಲೆಯಲ್ಲಿ ಸಿಗುವಂತೆ ಪುಸ್ತಕಗಳು ಪ್ರಸಾರಾಂಗದಿಂದಲೆ ಪ್ರಕಟವಾಗುತ್ತಿದ್ದವು. ಆದರೆ ಈಗ ಕಾದಂಬರಿ, ನಾಟಕ ಕತೆಗಳೆಂದು ವಿದ್ಯಾರ್ಥಿಗಳು ಒಂದೇ ಸೆಮಿಸ್ಟರಿಗೆ ಹಲವು ಪುಸ್ತಕಗಳನ್ನು ಕೊಳ್ಳಬೇಕಾಗಿದೆ. ಇದು ಆರ್ಥಿಕವಾಗಿ ಕೂಡ ವಿದ್ಯಾರ್ಥಿಗಳಿಗೆ ಹೊರೆಯಾಗುತ್ತಿದೆ.

ವಿದ್ಯಾರ್ಥಿಗಳನ್ನು ಕ್ರಿಯಾಶೀಲ ಪಾಲ್ಗೊಳ್ಳುವಿಕೆಗೆ ಉದ್ದೀಪಿಸುವಂತಹ ಅಭ್ಯಾಸಗಳನ್ನು ಈ ಹಿಂದಿನ ಪಠ್ಯಕ್ರಮದಲ್ಲಿ ರಚಿಸಿ ಅಳವಡಿಸಲಾಗಿತ್ತು. ವಿದ್ಯಾರ್ಥಿಗಳು ತರಗತಿಯಲ್ಲಿ ಓದುವ ಗ್ರಹಿಸುವ ಬರೆಯುವ ಮತ್ತು ಸ್ವತಂತ್ರವಾಗಿ ಆಲೋಚಿಸುವ ಕೌಶಲ್ಯಗಳನ್ನು ಪಡೆಯುವಂತೆ ಪಠ್ಯಮಾದರಿ ರೂಪಿಸಲಾಗಿತ್ತು. ಪಠ್ಯಗಳನ್ನು ಕೊಂಡು ತರಗತಿಗಳಿಗೆ ತರಲೇಬೇಕಿತ್ತು. ಪಠ್ಯಗಳಿಲ್ಲದೆ ತರಗತಿಯಲ್ಲಿ ಚರ್ಚೆಗೆ-ವಿಚಾರವಿನಿಮಯಕ್ಕೆ ತೊಂದರೆಯಾಗುತ್ತಿತ್ತು. ಹಾಗಾಗಿಯೆ ಇದುವರೆಗೆ ಪ್ರಸಾರಾಂಗದ ಚರಿತ್ರೆಯಲ್ಲೆ ಮಾರಾಟವಾಗದಷ್ಟು ಪಠ್ಯಪುಸ್ತಕಗಳು 07-10ರ ಸಾಲುಗಳಲ್ಲಿ ಮಾರಾಟವಾಗಿದ್ದವು. ಆದರೆ ಈಗಿನ ಪಠ್ಯಕ್ರಮದಿಂದಾಗಿ ಪ್ರಸಾರಾಂಗದ ಪುಸ್ತಕಗಳು ಮೂಲೆ ಸೇರಲಿರುವುದು ಮಾತ್ರ ಗ್ಯಾರಂಟಿ.

ಪಠ್ಯಗಳ ಸಾರಾಂಶೀಕರಣ ನೀಡುವ ಗೈಡುಗಳನ್ನು ಈ ಹಿಂದೆ ವಿದ್ಯಾರ್ಥಿಗಳು ಅವಲಂಬಿಸುತ್ತಿದ್ದರು. ಅನೇಕ ವಿದ್ಯಾರ್ಥಿಗಳು ಪಠ್ಯಗಳ ಬದಲು ಗೈಡುಗಳನ್ನು ಮಾತ್ರವೆ ಕೊಳ್ಳುತ್ತಿದ್ದರು. ನಾಟಕ, ಕಾವ್ಯ ಕಾದಂಬರಿ, ಪ್ರಬಂಧ-ಹೀಗೆ ಮೂರ್‍ನಾಲ್ಕು ಪಠ್ಯಗಳನ್ನು ನೂರಾರು ರೂಪಾಯಿ ನೀಡಿ ಖಾಸಗಿ ಪ್ರಕಾಶಕರಿಂದ ಪುಸ್ತಕಗಳನ್ನು ಕೊಳ್ಳುವುದಕ್ಕಿಂತ 40-50 ರೂಪಾಯಿಯ ಒಂದೇ ಗೈಡನ್ನು ಕೊಳ್ಳುವುದು ವಿದ್ಯಾರ್ಥಿಗಳಿಗೆ ಆರ್ಥಿಕವಾಗಿ ಕೂಡ ಅನುಕೂಲಕರವಾಗಿತ್ತು. ಹಾಗಾಗಿ ಈ ಮೊದಲು ಪಠ್ಯವು ಬಹುಪಾಲು ತಿರಸ್ಕಾರಕ್ಕೆ ಗುರಿಯಾಗಿತ್ತು! ವಿದ್ಯಾರ್ಥಿಗಳು ಹೀಗೆ ಪಠ್ಯಗಳನ್ನು ನಿರಾಕರಿಸುವುದಷ್ಟೆ ಅಲ್ಲ, ಗೈಡುಗಳಿದ್ದರೆ ಸಾಕು ಅಧ್ಯಾಪಕರೇ ಬೇಡ ಎನ್ನುವ ಹಂತಕ್ಕೂ ಬಂದಿದ್ದರು. ಇವನ್ನೆಲ್ಲ ನಿವಾರಿಸುವ ಉದ್ದೇಶದಿಂದ ಹೊಸ ಪಠ್ಯಮಾದರಿಯನ್ನು ತಯಾರಿಸಲಾಗಿತ್ತು. ಗೈಡುಗಳನ್ನು ತಪ್ಪಿಸುವ, ವಿದ್ಯಾರ್ಥಿಗಳು ಪಠ್ಯಪುಸ್ತಕಗಳನ್ನು ಕೊಳ್ಳುವಂತೆ ಮಾಡುವ, ಶಿಕ್ಷಕರನ್ನೂ ಪ್ರಸ್ತುತಗೊಳಿಸುವಂತೆ ರೂಪಿಸಲಾಗಿತ್ತು. ಆದರೆ ಈಗ ಮತ್ತೆ ಹಳೆಯ ಜಾಡಿಗೆ ಹೋಗಲಾಗುತ್ತಿದೆ.

* * * *

ಸಾಹಿತ್ಯ ಪಠ್ಯಗಳನ್ನು ವಿಚಾರದ ಪಾತ್ರಗಳಂತೆ, ಭಾಷೆಯ ಪ್ರತಿನಿಧಿಯಂತೆ, ಪ್ರಸ್ತುತ ಸಾಮಾಜಿಕ ಸಂಗತಿಗಳ ಚರ್ಚಾವೇದಿಕೆಯಂತೆ ಬಳಸಬಹುದಾದ ಸಾಧ್ಯತೆಗಳನ್ನು ಅಭ್ಯಾಸ ಚಟುವಟಿಕೆಗಳಲ್ಲಿ ಅಳವಡಿಸಲಾಗಿತ್ತು. ಅಲ್ಲದೆ ಭಾಷಾ ಮಾದರಿಗಳನ್ನು ಮತ್ತು ಭಾಷಿಕ ಕೌಶಲ್ಯಗಳನ್ನು ವಿದ್ಯಾರ್ಥಿಗಳು ಅರಿಯುವಂತೆ ರೂಪಿಸಲಾಗಿತ್ತು. ಆದರೆ ಈಗಿನ ಪಠ್ಯಮಾದರಿಯು ಅಭ್ಯಾಸ ಚಟುವಟಿಕೆಗಳನ್ನೆ ಕೈಬಿಟ್ಟಿದೆ. ಇದರಿಂದ ವಿದ್ಯಾರ್ಥಿಗಳಿಗೆ ಮತ್ತು ಅಧ್ಯಾಪಕರಿಗೆ ಪಠ್ಯವೆಂದರೆ ಸಾರ ಎಂಬಂತಾಗಿದೆ. ಸಾರಾಂಶೀಕರಿಸಿದರೆ ಸಾಕು ಎಂಬಂತಾಗಿದೆ.



ಹೊರಗಿನ ಕನ್ನಡ ಜಗತ್ತು ಸಾಕಷ್ಟು ಆಧುನಿಕವಾಗಿದೆ. ನಿರಂತರ ಆಗುತ್ತಿದೆ ಕೂಡ. ಆದರೆ ಈಗ ಗೊತ್ತುಪಡಿಸಿರುವ ಕನ್ನಡ ಪಠ್ಯಗಳು ಹೆಚ್ಚು ಹೆಚ್ಚು ಪ್ರಾಚೀನಕಾಲಕ್ಕೆ ಜೋತುಬೀಳುತ್ತಿವೆ. ಕನ್ನಡವನ್ನು ಉಳಿಸುವ ಮಾರ್ಗಗಳಲ್ಲಿ ಕನ್ನಡ ಶಿಕ್ಷಣ ಪಠ್ಯಕ್ರಮವು ಪ್ರಸ್ತುತತೆ ಒಳಗೊಳ್ಳುವುದು ಒಂದು ಮುಖ್ಯ ಮಾರ್ಗವಲ್ಲವೆ?

## ಈಗಿನ ಬದಲಾವಣೆ ಕುರಿತು ಇನ್ನಷ್ಟು ಪ್ರಶ್ನೆಗಳು

ಬಿ.ಎ. ಬಿಎಸ್ಸಿ, ಬಿ.ಎಚ್.ಎಂ.ಗಳಿಗೆ ಒಂದನೆ ಸೆಮ್‌ಗೆ ಕನ್ನಡ ನಾಟಕವನ್ನೂ ಮೂರನೆ ಸೆಮ್‌ಗೆ ಅನುವಾದಿತ ಕನ್ನಡ ನಾಟಕವನ್ನೂ ಇಡಲಾಗಿದೆ. ಆದರೆ ಬಿ.ಕಾಂ., ಬಿ.ಬಿ.ಎಂ, ಬಿ.ಸಿ.ಎ., ಬಿ.ಎಸ್. ಕೋರ್ಸ್‌ಗಳಿಗೆ ಅನುವಾದಿತ ನಾಟಕಗಳನ್ನು ಇಟ್ಟಿಲ್ಲ. ಎಲ್ಲ ಕೋರ್ಸುಗಳಿಗು ಒಂದು ಯೂನಿಫಾರ್ಮಿಟಿ ಬೇಡವೆ?

ಎಲ್ಲ ಕೋರ್ಸುಗಳ ವಿದ್ಯಾರ್ಥಿಗಳಿಗೂ ಎರಡನೆ ಸೆಮ್‌ನಲ್ಲಿ ಪ್ರಬಂಧಸಾಹಿತ್ಯ ಮತ್ತು ವಿಚಾರ ಸಾಹಿತ್ಯ ಎಂದು ಎರಡು ಘಟಕಗಳಲ್ಲಿ ಪ್ರಬಂಧಗಳನ್ನು ಇಡಲಾಗಿದೆ. ಹಾಗೆಯೆ ಮೂರನೆ ಸೆಮ್‌ನಲ್ಲು ವಿಮರ್ಶಾ ಪ್ರಬಂಧ ಮತ್ತು ಪ್ರಬಂಧಗಳೆಂದು ಎರಡೆರಡು ಘಟಕಗಳಿವೆ. ಪ್ರಬಂಧ ಪ್ರಕಾರವನ್ನು ನಾಲ್ಕು ಘಟಕಗಳಲ್ಲಿ ಕಲಿಸುವ ಅಗತ್ಯವಾದರೂ ಏನಿದೆ? ಬಿ.ಎ. ಬಿಎಸ್ಸಿ, ಬಿ.ಕಾಂ. ಹೀಗೆ ಎಲ್ಲ ಕೋರ್ಸುಗಳಲ್ಲು ವಿಮರ್ಶಾ ಲೇಖನಗಳನ್ನು ಪಠ್ಯಗಳನ್ನಾಗಿ ಗೊತ್ತುಪಡಿಸಲಾಗಿದೆ. ಐಚ್ಛಿಕ ಕನ್ನಡ ವಿದ್ಯಾರ್ಥಿಗಳಿಗೆ ಗೊತ್ತುಪಡಿಸಬೇಕಾದ ವಿಮರ್ಶಾ ಪಠ್ಯಗಳನ್ನು ಭಾಷಿಕ ವಿದ್ಯಾರ್ಥಿಗಳಿಗೆ ನಿಗದಿಪಡಿಸುವ ಔಚಿತ್ಯವಾದರೂ ಏನು? ಮೊದಲ ಸೆಮ್‌ನಲ್ಲಿ ವಿಮರ್ಶೆಯನ್ನು ಓದಿ ಮತ್ತೆ ಮೂರನೆ ಸೆಮ್‌ನಲ್ಲು ಎಲ್ಲ ಭಾಷಿಕ ವಿದ್ಯಾರ್ಥಿಗಳೂ ವಿಮರ್ಶೆಯನ್ನು ಯಾಕೆ ಓದಬೇಕು?

ಬಿ.ಎಸ್ಸಿ, ಬಿ.ಕಾಂ, ಬಿ.ಬಿ.ಎಂ, ಬಿ.ಸಿ.ಎ. ವಿದ್ಯಾರ್ಥಿಗಳಿಗೆ ವೈಜ್ಞಾನಿಕ ಪ್ರಬಂಧಗಳನ್ನೂ ಬಿ.ಎ. ಬಿ.ಎಚ್.ಎಂ. ವಿದ್ಯಾರ್ಥಿಗಳಿಗೆ ವೈಜ್ಞಾನಿಕವಲ್ಲದ ಪ್ರಬಂಧಗಳನ್ನೂ ನಿಗದಿಪಡಿಸಲಾಗಿದೆ. ಬಿ.ಎ. ಬಿ.ಎಚ್.ಎಂ. ವಿದ್ಯಾರ್ಥಿಗಳಿಗೆ ವೈಜ್ಞಾನಿಕತೆ ಬೇಡವೊ? ಹಾಗೆಯೆ ಬಿ.ಕಾಂ. ವಿದ್ಯಾರ್ಥಿಗಳಿಗೆ ಮಾತ್ರ ವ್ಯವಹಾರಿಕ ಕನ್ನಡವನ್ನು ಗೊತ್ತುಪಡಿಸಲಾಗಿದೆ. ಬಿ.ಬಿ.ಎಂ. ಬಿ.ಸಿ.ಎ. ಮತ್ತಿತರರಿಗೆ ವ್ಯವಹಾರ ಕನ್ನಡದ ಅಗತ್ಯವಿಲ್ಲವೊ? ಬಿ.ಎ. ಬಿ.ಎಸ್ಸಿ. ವಿದ್ಯಾರ್ಥಿಗಳೂ ಕೂಡ ಇದ... ತಕ್ಕಮಟ್ಟಿಗಾದರೂ ಕಲಿಯುವ ಅಗತ್ಯವಿಲ್ಲವೊ?

ಪ್ರತಿಯೊಂದು ಸೆಮ್‌ನಲ್ಲು ಕಾವ್ಯವನ್ನು ನಿಗದಿಗೊಳಿಸಲಾಗಿದೆ. ಬೇ... ಪ್ರಕಾರಗಳಿಗೆ 20 ಅಂಕಗಳಿದ್ದರೆ ಕಾವ್ಯಕ್ಕೆ 30 ಅಂಕಗಳನ್ನು ನಿಗದಿಸಲಾ... ನಾಲ್ಕು ಸೆಮ್‌ಗಳಲ್ಲಿ ಒಟ್ಟು 30x4=120 ಅಂಕಗಳಿಗೆ ಕಾವ್ಯ ನಿಗದಿಪಡಿಸಲಾ... ಯಾಕೆ? ಕಾವ್ಯ ಮತ್ತು ಇತರ ಪ್ರಕಾರಗಳ ನಡುವೆ ಯಾಕೆ ಈ ತಾರತಮ್ಯ...

ಪ್ರಕಾರಗಳ ಬೆನ್ನು ಹತ್ತಿ ಪಠ್ಯಗಳನ್ನು ಗೊತ್ತುಪಡಿಸಿದರೆ ಯಜಮಾ... ಪ್ರಕಾರಗಳು ಮಾತ್ರವೆ ಲೆಕ್ಕಕ್ಕೆ ಸಿಗುತ್ತವೆ. ಮಿಕ್ಕವು ಅವಜ್ಞೆಗೆ ಗುರಿಯಾಗುತ್ತ... ಕಾವ್ಯ ಕಾದಂಬರಿ, ನಾಟಕ, ಕತೆ, ವಿಮರ್ಶೆ, ಪ್ರಬಂಧ, ಜಾನಪದ, ಅನುವಾ... ಪ್ರವಾಸ, ಈ ಪ್ರಕಾರಗಳ ಆಚೆಗೂ ಸಾಹಿತ್ಯ ಇದೆಯಲ್ಲವೆ? ಜೀವನ ಚ... ಆತ್ಮಚರಿತ್ರೆ, ಒಡನಾಟಕಥನ, ವಿಮರ್ಶೆ, ಚಿಂತನೆ, ಗದ್ಯ ಹನಿಗವನ ಇವ್ಕ... ಈಗ ಪ್ರಾತಿನಿಧ್ಯವೆ ಇಲ್ಲವಲ್ಲ? ಎಷ್ಟೊ ಸಾಹಿತ್ಯ ನಮ್ಮಲ್ಲಿ ಅಪ್ರಕಾರವಾ... ಜನಿಸಿದೆ, ಜನಿಸುತ್ತಿದೆ. ಇನ್ನೂ ಎಷ್ಟು ದಿನ ಈ ಪ್ರಕಾರಗಳ ಬುಡ ಹಿಡಿ... ಸಾಗುವುದು?

## ಈಗಿನ ಐಚ್ಛಿಕ ಕನ್ನಡ ಪಠ್ಯಕ್ರಮಕ್ಕೆ ಕೆಲವು ಪ್ರಶ್ನೆಗಳು

ಐಚ್ಛಿಕ ಕನ್ನಡಕ್ಕೆ 5 ಗಂಟೆಗಳ ಬೋಧನಾ ಅವಧಿ ಇದ್ದರೂ ನಾ... ಘಟಕಗಳನ್ನು ಮಾತ್ರವೆ ಪಠ್ಯವಾಗಿ ನಿಗದಿಮಾಡಲಾಗಿದೆ! ಯಾಕೆ?

ಐಚ್ಛಿಕ ಕನ್ನಡ ವಿದ್ಯಾರ್ಥಿಗಳು ವಿಮರ್ಶಾ ಪ್ರಬಂಧಗಳನ್ನು 1,3,6,8 ಪತ್ರಿಕೆಗಳಲ್ಲಿ ಓದಲು ನಿಗದಿಪಡಿಸಲಾಗಿದೆ. ಅಲ್ಲದೆ ಮೀಮಾಂಸೆಯ ಹೆಸರಿನ... ವಿಮರ್ಶೆಯನ್ನು ಹೇರಲು ಹೊರಟಿರುವುದೇಕೆ?

ಐಚ್ಛಿಕದಲ್ಲಿ ಭಾಷಾಶಾಸ್ತ್ರವನ್ನು ಕೇವಲ ಇಪ್ಪತ್ತು ಅಂಕಗಳಿ... ನಿಗದಿಪಡಿಸಲಾಗಿದೆ. ಆದರೆ ಮೀಮಾಂಸೆ, ವ್ಯಾಕರಣ, ಶಾಸ್ತ್ರ ಸಾಹಿತ್ಯ ಗದ್ಯಸಾಹಿ... ಅನುವಾದ ಅಧ್ಯಯನ, ತೌಲನಿಕ ಅಧ್ಯಯನ ಇವುಗಳಿಗೆ ಸ್ಥಾನವೇ ಇಲ್ಲವ...

4,7 ಮತ್ತು 8ನೆ ಪತ್ರಿಕೆಗಳಲ್ಲಿ ಕ್ರಮವಾಗಿ ಆಯ್ದ ಕತೆಗಳು, ಸಣ್ಣ ಕತೆಗಳ... ಸಮಕಾಲೀನ ಕತೆಗಳು ಎಂದು ಒಂದೊಂದು ಘಟಕಗಳಿವೆ. ಕತೆಗಳಿಗೆ ಮೂ... ಸಾರಿ ಪ್ರಾತಿನಿಧ್ಯ ಕೊಡಬೇಕಾದ ಅಗತ್ಯವಿದೆಯೆ? ಕಾದಂಬರಿ ಸಣ್ಣಕತೆ ಹಳಗನ್ನ... ಗದ್ಯ-ಕಥೆಗಳನ್ನೆಲ್ಲ ಕಥನವೆಂಬ ಒಂದೇ ಘಟಕವಾಗಿ ರೂಪಿಸಬಹುದಿತ್ತಲ್ಲವೆ...

3ನೆ ಸೆಮ್‌ನಲ್ಲಿ ಮಹಿಳಾ ಕಾವ್ಯ 4ನೆ ಸೆಮ್‌ನಲ್ಲಿ ಮಹಿಳಾ ಸಾಹಿತ್ಯ 7... ಪತ್ರಿಕೆಯಲ್ಲಿ ಸ್ತ್ರೀಸಂವೇದನಾ ಬರಹಗಳು 8ನೆ ಪತ್ರಿಕೆಯಲ್ಲಿ ಮತ್ತೆ ಮಹಿ... ಬರಹ ಹೀಗೆ 4 ಘಟಕಗಳಲ್ಲಿ ಮಹಿಳಾ ಸಾಹಿತ್ಯವೆಂದು ಪ್ರತ್ಯೇಕಿಸಿ ಓದಿಸುವುದ... ಸರಿಯೆ? ಕಾವ್ಯವನ್ನು ಪ್ರಾಚೀನ ಮಧ್ಯಕಾಲೀನ ಆಧುನಿಕ (ನವೋದಯ, ನವ... ದಲಿತ ಬಂಡಾಯ, ಮಹಿಳಾ) ಎಂದು ಒಡೆಯುವ ಅಗತ್ಯವಿದೆಯೆ? ಎರಡ... ಮೂರನೆ ಪತ್ರಿಕೆಗಳಲ್ಲಿ ಆಧುನಿಕ ಕಾವ್ಯ ನಿಗದಿಪಡಿಸಿ 4, ... 6, 7ನೇ ಪತ್ರಿಕೆಗಳ ನಂತರ 8ನೇ ಪತ್ರಿಕೆಯಲ್ಲಿ ಮತ್ತೊಮ್ಮೆ... ಆಧುನಿಕ ಕಾವ್ಯ ನಿಗದಿಪಡಿಸಲಾಗಿದೆ. ಈ ಅಂತರ... ಏನಾದರು ಸಾಹಿತ್ಯಕ ಕಾರಣವಿದೆಯೆ?

ಐಚ್ಛಿಕ ಕನ್ನಡಕ್ಕೆ ಮೊದಲ ಸೆಮ್‌ನ... ಆದಿಪುರಾಣ, ರಗಳೆ, ಹರಿಶ್ಚಂದ್ರಕಾವ್ಯ, ಗದುಗಿ... ಭಾರತ, ಭರತೇಶ ವೈಭವ, ರಾಮಾಶ್ವಮೇಧ... ಹೀಗೆ ಆರು ಆಯ್ದ ಕಾವ್ಯಭಾಗಗಳನ್ನು ಮುವ್ವತ್ತು... ಅಂಕಗಳಿಗೆ ನಿಗದಿಪಡಿಸಲಾಗಿದೆ. ಆದರೆ 7... ಪತ್ರಿಕೆಯಲ್ಲಿ ಮಾತ್ರ ಯಶೋಧರ ಚರಿತೆಯ ಆಯ್ದ... ಕಾವ್ಯಭಾಗವನ್ನೆ ಮುವ್ವತ್ತು ಅಂಕಗಳಿಗೆ ನಿಗದಿಪಡಿಸಲಾಗಿದೆ... ಹೀಗೇಕೆ? ಇದರ ಹಿಂದಿನ ತಾತ್ವಿಕತೆ ಏನು? ಅಥವಾ ಅಲ್ಲಿ ಖಾಲಿಬಿದ್ದ... ಜಾಗಕ್ಕೆ ಏನು ತುಂಬಬೇಕು ಎಂದು ತಿಳಿಯಲಿಲ್ಲವೊ? ಒಟ್ಟಾರೆ ಪತ್ರಿಕೆಗಳು... ಬೋಧನೆಯ ಅವಧಿಗಳು, ಒಟ್ಟು ಸೆಮ್‌ಗಳ ಸಂಖ್ಯೆ ಇವುಗಳ ಹಿನ್ನೆಲೆಯಲ್ಲಿ... ಪಠ್ಯಕ್ರಮದ ಕಳೇಬರವನ್ನು ಮೊದಲು ತಯಾರಿಸಿಕೊಂಡು ಟ್ರಯಲ್ ಅಂಡ್... ಎರರ್ ರೀತಿ ಏಕಾಏಕಿ ಪಠ್ಯಗಳನ್ನು ಖಾಲಿ ಜಾಗಗಳಲ್ಲಿ ತುಂಬುತ್ತ ಹೋದರೆ... ಹೀಗೇ ಆಗುವುದು!


ಸಾಹಿತ್ಯ ಚರಿತ್ರೆಯನ್ನು 30 ಅಂಕಗಳಿಗೆ ನಿಗದಿಪಡಿಸಲಾಗಿದೆ. ಅಲ್ಲಿ... ಚಂಪು, ವಚನ, ರಗಳೆ, ಕೀರ್ತನೆ, ಷಟ್ಪದಿ, ತ್ರಿಪದಿ, ಸಾಂಗತ್ಯ, ಜಾನಪದ... ದೇಸಿ-ಮಾರ್ಗ, ವಿಮರ್ಶೆ ಮಾತ್ರ ಇವೆ! ಇದಾವ ಚರಿತ್ರೆಯ ಪರಿಕಲ್ಪನೆ... ಇಷ್ಟು ಮಾತ್ರ ಚರಿತ್ರೆಯೊ? ಅಂಚಿನ ಸಂಗತಿಗಳು ಚರಿತ್ರೆಯಲ್ಲಿ ಎಲ್ಲಿ ಹೋದವು...

ಈಗ ನಿಗದಿಪಡಿಸಿರುವ ಎಲ್ಲ ಆಧುನಿಕ ಪಠ್ಯಗಳೂ ಈ ಹಿಂದೆ ಓದಿಗೆ ನಿಗದಿಪಡಿಸಿದ್ದ ಪಠ್ಯಗಳೇ! ಒಂದೂ ಹೊಸವಿಲ್ಲ. ಅಂದರೆ ಇತ್ತೀಚೆಗೆ ಕನ್ನಡದಲ್ಲಿ ಹೊಸ ಪಠ್ಯಗಳೇ ರಚನೆಯಾಗಿಲ್ಲವೊ ಅಥವಾ ಪಠ್ಯ ರೂಪಿಸಿದವರು ಪಠ್ಯಪುಸ್ತಕಗಳನ್ನು ಬಿಟ್ಟು ಬೇರೇನನ್ನೂ ಓದಿಲ್ಲವೊ?

ನಮ್ಮನ್ನೆಲ್ಲ ಹಿಂದಕ್ಕೆ ಕರೆದುಕೊಂಡು ಹೋಗುವ ಪಠ್ಯಗಳು ನಮಗೆ ಬೇಕಾಗಿಲ್ಲ. ದುನಿಯಾ ತುಂಬಾ ಫಾಸ್ಟಾಗಿದೆ. ಈಗ ನಡೆದರೆ ಸಾಲದು ಓಡಬೇಕು ಕುಪ್ಪಳಿಸಬೇಕು. ಇಲ್ಲವಾದರೆ ಜಾಗತೀಕರಣದಲ್ಲಿ ಕನ್ನಡವೆ ಕಳೆದು ಹೋದೀತು.

• ಡಾ.ರಾಮಲಿಂಗಪ್ಪ.ಟಿ.ಬೇಗೂರು

# ಯಾವ ಮುಲಾಜು ಬೇಡ



ಮಹಾದ್ರೋಹಿ ಗೆಳೆಯನೇ
ಕಡದ ಅಂಗಿಯ
ಮೈಗಂಟಿಸಿಕೊಂಡಾಗ
ಕುಸಿಬೆ ಚಟ್ಟಿನ ಮೇಲೆ
ಬಸವನ ಹುಳು

ಚಾಕರಿಗಳ
ನೈವೇದ್ಯ ಬಯಸುವ ನಿನಗೆ
ಕಣ್ಣಲ್ಲಿನ ಜಿಸುಗು
ಹಾದದಲಿ ಬಿದ್ದ
ಗುಳ್ಳೆಗಳು ಕಾಣಿಸುವುದಿಲ್ಲ.

ಅಡ್ನಾಡಿ ಸೂರ್ಯನಿಗೂ
ಬೆದರದೆ
ಪೆಂಡಾಲಿನ ಹೆಣದ ಮೇಲೆ
ಹಲಗೆ ಬಾರಿಸುತ್ತ
ಕೂಗುತ್ತಿದ್ದವನಿಗೆ
ಇಪ್ಪತ್ನಾಲ್ಕು ಹಲ್ಲುಗಳ
ಚಕ ಚಕ ಹೊಳಪು

ಬೂಟುಧಾರಿಗಳು
ಬಂದೂಕು ಹಿಡಿದು ಬಂದಾಗ
ಜೋಪಡಿ ಪಟ್ಟಿಯ ಕೊನೆ
ಮೂಲೆಗೆ
ನಿನ್ನ ಬೆರಳುಗಳು
ಸೆಟೆ ನಿಲ್ಲುತ್ತವೆ

ಒಮ್ಮೆ ಆಜಮಾಸಿ ನೋಡು
ಮಹಲಿನ ಕಲ್ಲು ಕಲ್ಲುಗಳಲಿ
ಅಪ್ಪ ಅವ್ವನ ಕೈಚೆಟ್ಟವೆ
ಹಿತ್ತಲಲಿ ಮರಗಳ ತಂಪು ನೆರಳಿದೆ

ಮಹಾದ್ರೋಹಿ ಗೆಳೆಯನೇ
ನಿನ್ನ ಚಪ್ಪಲಿಗಳ ಗುರುತು
ನನ್ನ ತಲೆ ಮೇಲೆ
ಅಲ್ಲಿ ಕೂದಲೇ ಬೆಳೆದಿಲ್ಲ...

ಬೆಣ್ಣೆ ಸವರಿದ ಮಾತುಗಳ ತಿಂದು
ಗಾಳಿಯಲ್ಲೂ ಉಸಿರುಗಟ್ಟದೆ
ನಿನ್ನ ಬೆಳಕು ತಗೋ
ಎಂಜಲಿನ ಅಕ್ಷರಗಳನ್ನೂ
ಕಕ್ಕುತ್ತೇನೆ
ಯಾವ ಮುಲಾಜು ಬೇಡ....

• ಬಸವರಾಜ ಹಳ್ಳಿ, ಹಸಮಕಲ್

# ಮೈಗಳ್ಳ ಕಾಂಗ್ರೆಸ್ಸಿನೋರು ಬೆವರಿಳುಸ್ತಾ ಅವುರೆ

ಮುಗಿಲು ಊದಿಕೊಂಡು ವಾರವಾಗಿತ್ತು, ಮಳೆ ...ಯೊಡನೆ ಮುನಿಸಿಕೊಂಡಂತಾಗಿ ಇಷ್ಟ ಬಂದಾಗ ...ದಂತೆ ಉದುರುತ್ತಿತ್ತು. ಅದನ್ನು ನಚ್ಚಿ ಬಿತ್ತನೆ ಕಾರ್ಯ ...ವಂತಿರಲಿಲ್ಲ. ಆದ್ದರಿಂದ ಮಳೆಯನ್ನೇ ಬೈದ ...ವ,

ಯು ಲು ಸೀ ಮೆ

## ಕಟ್ಟೆಪುರಾಣ

▸ಬಿ. ಚಂದ್ರೇಗೌಡ

...ತ್ತರಿಸಿದಂಗೆ ಊದು ಬುಟ್ಕೊಗಕ್ಕೆ ಏನು ಬಂದದೆ ...ಳಿಗೆ?" ಎಂದ.

...ದ್ದಿಂದ ನ್ಯಡಕಂಡು ಬಂದಿರದು ಇಂಗೆ ಅಲವೇನೊ ... ಮಲ್ನಾಡಲ್ಲಿ ಮಳಿಯಾಯ್ತಯಿದ್ರೆ ಇಲ್ಲಿಂಗೆ ...ಡಿರತದೆ" ಎಂದ ಉಗ್ರಿ.

...ಂಗಳೂರಿಗೆ ಘನವಾದ ಮಳಿಯಂತೆ" ಎಂದ

...ೋಡಪ್ಪ, ಆ ಬೆಂಗಳೂರಿಗೆ ಯಾಕಪ್ಪ ಮಳೆ? ... ಬ್ಯಳದರೂ? ಇಲ್ಯಾರ ಊದ್ರೆ ಬಿತ್ನೆ ಕಾರ್ಯನಾರ ...ತ್ತಿವಪ್ಪ."

...ಂಗಳೂರಿಗೆ ಆ ತರ ಮಳೆ ಹುಯ್ಬೇಕು ...ವ. ಬ್ರಾಂಬ್ರು ದಿನ ಸ್ನಾನ ಮಾಡದೆಯಿದ್ರೆ ವಾಸನೆ ...ಡುತ್ತದಂತೆ. ಅದೇ ತರ ಬೆಂಗಳೂರಿಗೆ ಯಾವಾಗ್ಲೂ ...ಹುಯ್ತಾಯಿದ್ರೆ ಆ ಊರು ಚನ್ನಾಗಿರದು."

...ದೇನೊ ಸರಿ. ಬಳ್ಳಾರಿಗಂಟ ನ್ಯಡಕಂಡು ವಂಟೋರ ...ಳ."

...ವುರು ಮಳಿಗೆ ಸಿಕ್ಕಿರಬೇಕು."

...ಮಳೆಲೇನೊ ನ್ಯಡಿಬವುದು, ಆದ್ರೆ ಬಿಸ್ಲಲ್ಲಿ ನ್ಯಡಿಯ ..." ಎಂದ ಸೀರ.

...ಂತೂ ಕಾಂಗ್ರೆಸ್ಸಿನೋರು ಮದುಲ್ನೆ ಬಾರಿ ...ತಾ ಅವುರೆ."

...ಂಗರಿಲ್ಲಿಗಂಟ ಸುಖವಾಗಿದ್ರೇನ್ಲ?" ಎಂದಳು ...

...ೂ ಕಣೇ. ಅವುರಷ್ಟು ಯಾರೂ ಸುಖವಾಗಿರಲಿಲ್ಲ. ...ರ್ಷದಿಂದ ಅಧಿಕಾರದಲ್ಲಿದ್ದೋರು. ಆ ಪಾರ್ಟಿಲಿ ... ಬಡುವುರ್‍ಯಾರೂ ಇಲ್ಲ. ಅವುರಿಗೋಲಿಸಿದ್ರೆ ...ಳೆಯ ಬೀದಿಲಿದ್ದವು. ಆದ್ರೆ ಇವತ್ತು ಯಂಗಾಗ್ಯವುರೆ ...ಟೆಂಡಿಗೆ ನೀರುಬುಟ್ಟಂಗೆ ಸರಕಾರನೆ ಹೀರಿಕಂಡು ...ರೆ" ಎಂದು ಉಗ್ರಿ ನಕ್ಕ.

...ತಂತ್ರ ಬಂದಾಗ್ಲೆ ಬಿಜೆಪಿಗಳು ಅಧಿಕಾರಕ್ಕೆ ಬಂದಿದ್ರೆ ...ನೊ?"

...ನೂ ಇಲ್ಲ, ದೇಸದ ಕತೆನೆ ಮುಗದೋಗದು. ... ಪಾಕೀಸ್ತಾನ ಯಂಗಾಗ್ಯದೆ ಅದೇ ತರ ಆಗದು."

...ರುಷ್ನಿಂ ಕಿಸ್ಣೇನೊ ಪಾಕೀಸ್ತಾನಕೋಗಿದ್ನಂತೆ?" ಎಂದ ... ಅವನು ಸೋಮೇನಹಳ್ಳಿಗೋಗಿ ಬಂದಂತೆ ...ಗಿ ಹೇಳಿದ.

...ೂ ಹೋಗಿದ್ದ. ಅಲ್ಯಾವನೋ ಸಾಬಿನನ್ನಮಗನ ಕೈಲಿ ಸರಿಯಾಗಿ ಮಾತಾಡಕ್ಯಾಗದೆ ಮನಸ್ತಾಪ ಮಾಡಿಕಂಡು ಬಂದವುನೆ."

"ಅದ್ಯಾಕ್ ಮನಸ್ತಾಪ ಮಾಡಿಕಂಡಾ?"

"ಆ ಸಾಬಿನನ್ನಮಗನಿಗೆ ಇವುನಷ್ಟು ಚನ್ನಾಗಿ ಇಂಗ್ಲಿಷ್ ಬತ್ತಿರಲಿಲ್ಲವೇನೊ. ಅದಕಿಂತ ಕಿಸ್ಣನಿಗೂ ಆಗ್ಲೆ ಯಂಬತ್ತು ವರ್ಷ ನ್ಯಡಿತಾ ಅದಂತೆ. ಅಂಗಾಗಿ ಸ್ವಲುಪ ತ್ವಾಟಂದೂರ. ಅಂಗಾಗಿ ಅವುನೇನು ಹೇಳಿದ್ನೋ, ಇವುನೇನು ತಿಳಕಂಡನೊ, ಅಂತು ವಾದ ಕ್ಯಲಸಾಗಿಲ್ಲ."

"ಅಲ್ಲೇನು ಕ್ಯಲಸ ಮಾಡಕ್ಕೋಗಿದ್ದ ಇವುನೂ?" ಎಂದಳು ಜುಮ್ಮಿ.

"ಅಲ್ಲಿ ಸಾಬರ ಗಡ್ಡುಯರಿಯಕ್ಕೋಗಿದ್ದ ಅಲ್ಲ ಕಣೇ, ಕ್ಯಲಸ ಅಂದ್ರೆ ನಿನ್ನ ತಲಿಗೆ ಇನ್ನೇನು ಹ್ವಳಿಯದಿಲವೆ? 'ನೋಡ್ರಪ್ಪ, ನಿಮ್ಮ ದೇಶದಲ್ಲಿ ಕ್ಯಟ್ಟಜನವುರೆ, ಆಗಾಗ್ಗೆ ನಮ್ಮ ದೇಶಕ್ಕೆ ಬಂದು ಬಾಂಬು ಹಾಕಿ ಜನ ಸಾಯಿಸಿ ಓಡಿ ಬತ್ತರೆ, ಅವುರ ಹದ್ದುಬಸ್ತಲಿ ಇಡಕ್ಯಾಗದಿಲವೆ' ಅಂತ ಕೇಳಕ್ಕೋಗಿದ್ದ. ಅದ್ಕೆ ಆ ನನಮಕ್ಕಳು ಮದ್ಲು ಕಾಶ್ಮೀರದ ವಿಷಯ ಮಾತಾಡನ ಅಂದನಂತೆ. ಅದಕಿವುನಿಗೆ ಬೇಜಾರಾಗಿ ಬಂದವುನೆ ಅಂತ್ಲೂ ಅಂತರೆ."

"ಅಲ್ಲಾ ಕಂಡ್ರ, ಇರೋ ದೇಸನೆ ನ್ಯಟ್ಟಗೆ ಆಳಕ್ಯಾಗದೆ ಹಾಳು ಮಾಡಿಕಂಡು ಕುಂತಿರೊ ಆ ದ್ವಾಪುನನ್ನ ಮಗನವುಕೆ ಕಾಶ್ಮೀರ ಬ್ಯಾರೆ ಬೇಕೆ" ಎಂದ ಕಾಳಮಾವ.

"ಒಂದು ಸತಿ ಯುದ್ಧ ಮಾಡಿ ಸರಿಯಾಗಿ ನೇದು ಬುಡಬೇಕು ಕಂಡ್ರ ಅವುರಿಗೆ" ಎಂದು ಸೀರ ಪಕ್ಕದೂರಿನ ಪುಂಡರ ವಿಷಯದಂತೆ ಬಹಳ ಹಗುರವಾಗಿ ಹೇಳುತ್ತಿರುವಾಗ ವಾಟಿಸ್ಸೆ ಕಾಣಿಸಿಕೊಂಡು,

"ಯಾರಿಗೆ ನೆಯ್ತಿ ಚಿಗಪ್ಪ? ರೆಡ್ಡಿಗಳಿಗಾ?" ಎಂದ.

"ಅವುರಿಗೆ ನೆಯ್ಯಕ್ಕೆ ಯಾರ ಕೈಲಾದತ್ಲ? ಕ್ಯಟ್ಟ ಜನಕ್ಕೆ ದುಡ್ಡು ಸಿಕಿದ್ರೆ ಏನಾಗಬೇಕೊ ಅದೇ ಆಯ್ತಾ ಅದಪ್ಪ."

"ಪರವಾಗಿಲ್ಲ, ನಮ್ಮ ಸೀರ ಚಿಗಪ್ಪ ನಿಗೂ ನಾಲೆಡ್ಜದೆ. ಸೀರ ಚಿಗಪ್ಪನು ಕ್ಯಟ್ಟೋನಾದ್ರು ಅವುನಿಗೆ ದುಡ್ಡು ಸಿಗದೇ ಹೋದ ಕಾರಣಕ್ಕೆ ಪಾಪ ಅನಿವಾರ್ಯವಾಗಿ ವಳ್ಳೆ ಮನುಸಾಗಿ ಬದುಕಬೇಕಾಯ್ತು. ಸಾನೆ ಟೈಂ ರೆಡ್ಡಿಗಳೂ ವಳೆಯವರಾಗಿದ್ರಂತೆ. ಯಾವಾಗ ಗಣಿ ದುಡ್ಡು ಸಿಗತೊ ಅವತ್ತೇ ರೌಡಿಗಳಾದರಂತೆ."

"ಇದೇನೊ ವಾಟಿಸ್ಸೆ ಹಿಂಗಂತೀ? ಆ ರೆಡ್ಡಿಗಳ ಮಾತು, ನಡವಳಕೆ ನೋಡಿದ್ರೆ ಅವುರು ಯಾವತ್ತೂ ವಳ್ಳೆ ಜನಾಗಿರಕ್ಕೆ ಸಾಧ್ಯನೇಯಿಲ್ಲ ಕಣೊ."

"ಅಂಗರೆ ಕ್ಯಟ್ಟ ಜನ ಯಂಗೆ ಯಲಕ್ಷನ್ನಲಿ ಗೆಲ್ತರೊ?"

"ಕ್ಯಟ್ಟ ಜನ ಗೆಲ್ತಾಯಿರೋದು ದುಡ್ಡಿನಿಂದ ಕಣೊ. ಅದೂ ಅಲ್ದೆ ಮೈಜಾರಿಟಿ ಜನಾಂಗವೇ ಬಿಜೆಪಿಗಳಾದ್ರೆ ಯಂಥೋರು ಗೆದ್ದು ಬತ್ತರೆ? ಅಂಗಾಗಿ ಲಿಂಗಾಯಿತ್ರ ಓಟನಿಂದ್ಲೆ ರೆಡ್ಡಿಗಳು ಗೆದ್ದು ಬಂದ್ರೂ ಪಾಪ ಎಡೂರಪ್ಪನಿಗೆ ನೀರು ಕುಡಿಸಿಬುಟ್ರು."

"ನೀನು ಕಾಲ್ನಡಗೆಲಿ ಬಳ್ಳಾರಿಗೋಯ್ತಿನಿ ಅಂತ ಹೋಗಿದ್ದಲ್ಲ, ಯಾಕ್ಲ ಬಂದೆ?" ಎಂದಳು ಜುಮ್ಮಿ.

"ಬಳ್ಳಾರಿಗಂಟ ಹೋಯ್ತಿನಿ ಅಂತ ನಾನೆಲ್ಲಿ ಹೇಳಿದ್ನಕ್ಕ?"

"ಈ ಸೂಳೆಮಗನಿಗೂ ರೆಡ್ಡಿ ಗಾಳಿ ಬೀಸ್ಯದೆ ಕಂಡ್ರ ಉಗ್ರಿ."

"ರೆಡ್ಡಿಗಳ ಸುದ್ದಿ ಮಾತಾಡಿ, ಮಾತಾಡಿ ಇವುನೂ ಅವುರಂಗೆ ಆದ ಅನ್ನಂಗೆ ಕಾಣ್ತ ಅದೆ."

"ನನ್ನನ್ನ ರೆಡ್ಡಿಗಳಿಗೆ ಹೋಲಸ್‌ಬ್ಯಾಡ ಕಣೊ ಉಗ್ರಿ. ಕನಸಿನಲ್ಲೂ ಕೂಡ ನಾನಂತ ಕಂಪೇರ್ ಒಪ್ಪದಿಲ್ಲ."

"ಪ್ರವಾಹಕ್ಕೆ ಸಿಕ್ಕಿ ಮನೆ ಮಠ ಕಳಕಂಡೋರಿಗೆ ಐವತ್ತು ಸವುರ ಮನೆಕಟ್ಟಿಸಿ ಕೊಡ್ತಿನಿ ಅಂದಿದ್ದ ರೆಡ್ಡಿ. ಇವತ್ತು ಕೇಳಿದ್ರೆ 'ನಾನೆಲ್ಲಿ ಅಂಗಂದಿದ್ದೆ?' ಅಂತ ಕುಂತವುನೆ. ಅದೇ ತರ ನೀನು ಬಳ್ಳಾರಿಗಂಟ ಕಾಲ್ನಡಗೆಲಿ ಹೋಯ್ತಿನಿ ಅಂತ ಹೋದೋನು ಒಂದೇ ದಿನಕೆ ವಾಪಸ್ ಬಂದು 'ನಾನೆಲ್ಲಿ ಅಂಗಂದಿದ್ದೆ?' ಅಂತಿಯಲ್ಲಾ, ಇದು ರೆಡ್ಡಿಗಳ ವರಸೆ ಅಲವೇನೊ?"

"ಮಿಸ್ಟರ್ ಉಗ್ರಿ, ನನ್ನ ಲೈಪಲ್ಲೇ ನಾನು ಹೇಳಿದ ಮಾತ ಬದ್ಲಾಯಿಸಿರೊ ಮನ್ಸ ಅಲ್ಲ. ನಾನೇನೇಳಿದ್ದೆ? ಬಳ್ಳಾರಿ ಕಾಲ್ನಡಗೆಲಿ ನಾನೂ ಕಾಲ್ಹಾಕಿ ಬತ್ತಿನಿ ಅಂದಿದ್ದೆ. ಅದೇ ರೀತಿ ದಾಬಸ್‌ಪೇಟೆಲಿ ಹೋಗಿ ಜಾಯಿನ್ ಆದೆ. ತುಮಕೂರುಗಂಟ ನ್ಯಡದು ಸಭೆ ಮುಗಿಸಿಗಂಡು ಬಂದೆ. ಬಳ್ಳಾರಿಗಂಟ ನ್ಯಡಿಯಕ್ಕೆ ನಾನೇನು ಕಾಂಗ್ರೆಸ್ ಎಮ್ಮೆಲ್ಲೆನೆ?"



"ಹೋಗ್ಲಿ, ಅಲ್ಲಿ ಕಾಂಗ್ರೆಸ್ ಎಮ್ಮೆಲ್ಲೆಗಳು ನ್ಯಡಿತಾಯಿದ್ರ?"

"ಅದ್ಯಂಗೆ ನ್ಯಡಿತರೊ ಉಗ್ರಿ? ಮದ್ಲೆ ಕಾಂಗ್ರೆಸ್ಸಿನೋರು ಮೈಗಳ್ರು. ವಸಿ ಜನ ನ್ಯಡಿತಾ ಅವುರೆ. ವಸಿ ಜನ ಕಾಲಾಕಿ ಗುಂಪಲ್ಲಿ ಮರಿಯಾದ್ರು. ನಾನೂ ಕೂಡ ವಸಿದೂರ ನಮ್ಮ ಓಲ್ಡ್‌ಫ್ರೆಂಡ್ಸ್ ತೇಜಸ್ವಿನಿ, ಉಮಾಶ್ರೀ ಜೊತೆ ನ್ಯಡದು ಬಂದೆ. ಆದ್ರು ವಂಡ್ರುಫುಲ್ ಎಕ್ಸ್‌ಪೀರಿಯನ್ಸು."

"ಉಮಾಶ್ರೀ, ತೇಜಸ್ವಿನಿ ಜೊತೆ ನಡೆದದ್ದೇ ವಂಡ್ರುಫುಲ್ ಎಕ್ಸ್‌ಪೀರಿಯನ್ಸೆ?"

"ಅದಲ್ಲ ಕಣೊ. ಕಾಂಗ್ರೆಸ್ಸಿನವುಕು, ಜನಪರ ಹೋರಾಟಕ್ಕು ಸಂಬಂಧವೇ ಇರಲಿಲ್ಲ. ಅಂಥದ್ರಲ್ಲಿ ಬೀದಿಗೆ ಬಂದ್ರಲ್ಲ ಅದೇ ಒಂದಿದು. ಅದನ್ನ ನ್ಯನಿಸಿಗತ್ತ ಲೀಡ್ರುಗಳು ಏದುಸುರು ಬುಟಗಂಟು ನ್ಯಡಿಯದ ನೋಡ್ತ, ಕುಣಿತ ಹಾಡ್ತ ಹೋಯ್ತಾಯಿದ್ರೆ, ಗಣಿಗಾರಿಕೆ ರೆಡ್ಡಿಗಳು ಎಡೂರಪ್ಪ ಯಲ್ಲಾ ಮರತೋದ್ರು ಅತ್ತಗೆ."

"ಎಡೂರಪ್ಪ ಉದ್ದುಕೂ ಊಟದ ಯವಸ್ಥೆ ಮಾಡಿಸಿದ್ದ ನಂತಲ್ಲಾ?" ಎಂದ ಸೀರ.

"ಯಾರು ಚಿಗಪ್ಪ ನಿನಿಗೆ ಇಂತ ಸುಳ್ಳೇಳವುರಲ್ಲಾ?"

"ಸುಳ್ಳಲ್ಲ ಕಂಡ್ರ ನಿಜವಂತೆ. 'ಈ ರೆಡ್ಡಿ ನನಮಕ್ಕಳ ತಗಿಯಕ್ಕೆ ನನ್ನ ಕೈಲಾಗದಿಲ್ಲಾ, ನೀವೇ ಜಾತ ಮಾಡಿ, ಉದ್ದಕ್ಲೂ ಊಟ ಹಾಕ್ತಿನಿ, ಕಡಿಗವುರೇ ರಾಜೀನಾಮೆ ಕೊಟ್ಟು ಹೋಗಂಗಾಯ್ತದೆ' ಅಂತ ಹೇಳಿದ್ನಂತೆ. ಅದ್ಕೆ ನೋಡು ಈಗಾಗ್ಲೆ ರಾಮುಲು ತಲಿಕೆಟ್ಟು ತಲೆನೆ ಬೋಳಿಸಿಗಂಡವುನೆ" ಎಂದ ಸೀರ.

"ರಾಮುಲು ತಲಿಕೆಟ್ಟೋನು ಅಂತ ಇಡೀ ರಾಜ್ಯಕೇ ಗೊತ್ತು, ಅದು ಬಿಜೆಪಿಗೆ ಗೊತ್ತಾದುದ್ದು ಈಗ. ಕಾಂಗ್ರೆಸ್ ಜಾಥಾ ಬತ್ತಾಯಿರದ ನೋಡಿ ಅವುನು ರಾಜೀನಾಮೆ ಕೊಡಕ್ಕೆ ಹೋಗಿದ್ನಂತೆ. ಬ್ಯಾಡ ಅಂತ ತಲೆಕೂದ್ಲು ಕೊಟ್ಟು ಥೇಟ್ ರೌಡಿ ಲೀಡ್ರು ಕಂಡಂಗೆ ಕಾಣ್ತಾ ಅವುನತ್ತಗೆ" ಎಂದ ಉಗ್ರಿ.

"ಯಂತ್ಯಂಥಾ ಜನ ಮಂತ್ರಿಯಾಗಿಬುಟ್ರಲ್ಲಾ?" ಎಂದು ಕಾಳಮಾವ ಗೊಣಗಿಕೊಂಡ.

"ನನಿಗ್ಯಾಕೊ ಇಲ್ಲಿ ಬೋರಾಯ್ತಾ ಅದೆ. ತಿರಗ ಜಾಥಕ್ಕೋಗಿ ಸೇರಿಕತ್ತಿನಿ ಕಣಕ್ಕ" ಎಂದ ವಾಟಿಸ್ಸೆ.

"ನನ್ನನ್ನು ಕರಕಂಡೋಗ್ಲ" ಎಂದಳು ಜುಮ್ಮಿ.

"ಬಾರಕ್ಕ, ಅಲ್ಲಿ ನಿನ್ನಂಥೋರು ಭಾಳ ಜನ ಇದ್ರು. ಅವುರ ಜ್ವತಿಗೆ ಸೇರಿಕಳಿವೆ. ನನಿಗೂ ಒಬ್ಬಳು ಸಿಕ್ಕಿ ಒಸಿದೂರ ಜ್ವತೆಲಿ ಬಂದ್ಲು ಕಣಕ್ಕ. ಅಮ್ಯಾಲೆ ಪರಿಚಯಾದ್ಲು. ಯಾವೂರು ಅಂದೆ. ಚಿತ್ರದುರ್ಗ ಅಂದ್ಲು. ಆಮ್ಯಾಲೆ ಇದ್ದಕ್ಕಿದ್ದಂಗೆ ಜಾಥ ಹೋಯ್ತಾಯಿದ್ದೋರ ಟೀಕೆ ಮಾಡಕ್ಕೆ ಸುರುಮಾಡಿದ್ಲು. ಅದ್ಯಾಕಮ್ಮ ಕಾಮೆಂಟ್ ಮಾಡ್ತಿ ಅಂದೆ. ಅದಕವುಳು 'ಜಾಥ ಅಂದ್ರೆ ಗಂಭೀರವಾಗಿ ಇರಬೇಕು. ನೋಡು ಗಾಂಧಿ ವಿನೊಬ ಎಷ್ಟು ಗಂಭೀರವಾಗಿ ಮಾಡ್ತಿದ್ರು. ಇವುರ ಕುಣತ, ಹಾಡು, ತಮಟೆ ಡೊಳ್ಳಿನ ಶಬ್ದ ನನಗಾಗದಿಲ್ಲ' ಅಂದ್ಲು."

"ನೋಡವುಳಿನ್ಯಂಥ ಇವುಳು?"

"ಅದಕ್ಕೆ ನಾನೇಳಿದ. ವಿನೋಬಾ ಪಾದಯಾತ್ರೆ ಶವಯಾತ್ರೆತರ ಇರದು. ಗಾಂಧಿ ಯಾತ್ರೆ ಚನ್ನಾಗಿರೋದು. ಪಾದಯಾತ್ರೆ ಅಂದ್ರೆ ಅದು ಜನ ಪದಯಾತ್ರೆ. ಗಜಗುಂಭೀರವಾಗಿ ನ್ಯಡಿಯದೆ ಆದ್ರೆ ಒಂದೇ ಮೈಲಿಗೆ ಬೇಜಾರಾಯ್ತದೆ. ಜನಜಾತ್ರೆಗೆದಿರಿರೊ ಬಿಜೆಪಿಗಳ ತರ ಮಾತಾಡಬ್ಯಾಡ' ಅಂದೆ. ಹೋದ್ಲತ್ತಗೆ. ನೀನು ಬರದಾದ್ರೆ ಮಂಡ್ಯ ಜಿಲ್ಲೆಯೋರು ಹೋಗದಿನ ಹೋಗನ ಬಾರಕ್ಕ" ಎಂದ ವಾಟಿಸ್ಸೆ. ●

## ಪದ್ಮಾ ಮತ್ತು ರಾಜೇಶ್ವರಿಯವರು

...ನನಗೆ ಕಾಯಿಲೆಯಾದ ಮೇಲೆ ನನ್ನನ್ನು ನೋಡುವುದಕ್ಕಾಗಿಯೇ ನೂರಾರು ... ಬಂದವರನ್ನು ಕಂಡು ಅಂಥವರಿಗೆ ನನ್ನ ಕೃತಜ್ಞತೆ ತೋರಲಾಗದೆ ...ಚಿಸಿದ್ದೇನೆ. ಮೈಸೂರಿಂದ ಡಾ. ರಾಜಶೇಖರ್ ಮತ್ತು ಅವರ ಪತ್ನಿ ...ನದಿಂದ ಬಾನು ಮತ್ತು ಮುಷ್ತಾಕ್, ಮಂಗಳೂರಿಂದ ಸಾರಾ, ಅದಕ್ಕಿಂತ ...ಚೆ ಅನೇಕ ಗೆಳೆಯರು. ಈ ವಾರ ನಾನು ಮನೆಯಿಂದ ಬಂದು ...ನೆ ಯೋಚಿಸುತ್ತಾ ಮಲಗಿದ್ದಾಗ ನನ್ನ ಸಹಾಯಕ ಬಂದು, "ಸರ್, ...ಸೂರಿಂದ ಪದ್ಮಾ ಶ್ರೀರಾಮ್ ಮತ್ತು ತೇಜಸ್ವಿಯವರ ಪತ್ನಿಯವರು ...ನ್ನು ನೋಡಲು ಬಂದಿದ್ದಾರೆ" ಅಂದ. ತೇಜಸ್ವಿಯವರ ಪತ್ನಿ ರಾಜೇಶ್ವರಿ ...ರನ್ನು ನೋಡಿ ಬಹಳ ವರ್ಷಗಳೇ ಆಗಿತ್ತು, ನಾನು ಅವನು ಹೇಳಿದ್ದು 'ಇರಲಾರದು' ಎಂದುಕೊಂಡು "ಒಳಗೆ ಕಳಿಸು" ಅಂದು ಬಂದು ...ಸಿಸ ಹತ್ತಿರ ಕೂತೆ. ಹೌದು, ಪದ್ಮಾ ಮತ್ತು ರಾಜೇಶ್ವರಿಯವರು ಬಂದಿದ್ದರು. ... ಆಚ್ಚರಿಯಾಗಿ "ಬೇರೆ ಯಾವುದಾದ್ರೂ ಕೆಲಸಕ್ಕೆ ಬಂದಿದ್ದಿರಾ" ಅಂದೆ. ... ತಿಂಗಳಿಂದ ನಿಮ್ಮನ್ನು ನೋಡಬೇಕೂಂತಾನೇ ಮಾತಾಡಿಕೊಳ್ತಿದ್ದೆವು. ...ಲಿಲ್ಲ, ಇವತ್ತು ಹೊರಟುಬಂದೆವು. ನಿಮಗೆ ತೊಂದರೆ ಆಯ್ತು ಅಂತ ...ತ್ರೆ ಬರ್ತೀವಿ!" ಅಂತ ನಗುತ್ತ ಎದ್ದೇಬಿಟ್ಟರು. ಸಂಕೋಚದ ಅವರಿಬ್ಬರಿಗೆ ಹೇಳಿದೆ, "ನಿಜಕ್ಕೂ ನನ್ನನ್ನು ನೋಡುವುದಕ್ಕಾಗಿಯೇ ಮೈಸೂರಿಂದ ಬಂದಿದ್ದರೆ ದಯವಿಟ್ಟು ಕೂತ್ಕೊಳ್ಳಿ. ಕನಿಷ್ಠ ಅರ್ಧಗಂಟೆ ಹರಟೋಣ. ಕಾಫಿ ಕುಡೀರಿ. ಇದೆಲ್ಲ ಆಗುವಷ್ಟರಲ್ಲಿ ಊಟದ ವೇಳೆಯಾಗಿರುತ್ತೆ, ಊಟ ಮಾಡಿಕೊಂಡುಹೋಗಿ" ಅಂದೆ. ಕೂತರು. ಹರಟುತ್ತಾ ಕೂತದ್ದಾಯಿತು. ಮುಕ್ಕಾಲು ಗಂಟೆ ಆದ ಮೇಲೆ ಪದ್ಮಾ ಅವರು ಒಂದು ಪುಸ್ತಕ ಕಡ ತೆಗೆದುಕೊಂಡರು; ಇಬ್ಬರೂ ಎದ್ದರು. ನಾನು ಅಷ್ಟರಲ್ಲೇ ನನ್ನ ಹೆಂಡತಿಗೆ ಅಥವಾ ಅಲ್ಲೇ ಇದ್ದ ನನ್ನ ಮಗಳಿಗೆ ಹೇಳಿದರೆ ಇವರನ್ನು ಮನೆಗೆ ಊಟಕ್ಕೆ ಕರೆದೊಯ್ಯುತ್ತಾರೆ, ಎಲ್ಲರಿಗೂ ಕಾರ್ ಡ್ರೈವಿಂಗ್ ಬರುತ್ತೆ, ಆಮೇಲೆ ಬಸ್‌ಸ್ಟ್ಯಾಂಡ್‌ಗೆ ಅವರೇ ಕರೆದೊಯ್ದರಾಯಿತು ಎಂದುಕೊಂಡಿದ್ದೆ. ಆದರೆ ಅವರು ಹೊರಡುವ ವೇಳೆಯಲ್ಲಿ ಎಲ್ಲ ಮರೆತೆ. ಅವರು ಹೊರಟುಹೋದ ಮೇಲೆ, "ಮೈಸೂರು, ಮೂಡಿಗೆರೆಗೆ ಹೋದಾಗ ಮೂಗಾಗಟ್ಟಲೆ ತಿನ್ನುವ ಈ ಘಟಕ್ಕೆ ಬುದ್ಧಿಯೇ ಕಡಿಮೆ, ಸನ್ನಡತೆಯಂತೂ ಸೊನ್ನೆ" ಎಂದುಕೊಂಡು ಬೇಸರದಿಂದ ಮಲಗಿದೆ.... ●






ಮರೆಯುವ ಮುನ್ನ

▸ಪಿ. ಲಂಕೇಶ್

# ಶ್ರೀರಾಮುಲುಗೆ ಜೈಲು ನೋಡೋ ಆಸೆ

ಸನ್ಮಾನ್ಯ ಸಚಿವದ್ವಯರುಗಳಾದ ಶ್ರೀರಾಮುಲು ಅವರ 'ಜೈಲು ಪ್ರವಾಸ' ಹಾಗೂ ಜನಾರ್ದನ ರೆಡ್ಡಿಯವರ 'ಅಪರಂಜಿ ಚಿನ್ನ' ವ್ಯಾಖ್ಯಾನವು ಜನರ ಬಾಯಿಗೆ ಅಚ್ಚುಕಟ್ಟಾದ ತಾಂಬೂಲ ಆಗಿರುವುದು ವಿಸ್ಮಯಕಾರಿ ಸಂಗತಿ ಆಗಿದೆ. ಇಂತಹ ಜಿಹ್ವಾಚಾಪಲ್ಯವುಳ್ಳ ತಾಂಬೂಲ ಪ್ರಿಯರು ತಮ್ಮ ಮನದಾಳದ ಆಸೆಗಳನ್ನು ಅದುಮಿಟ್ಟು ಸನ್ಮಾನ್ಯರ ಈ ನಡವಳಿಕೆಗಳಿಗೆ ಕಾರಣವೇನೆಂಬುದನ್ನು ಪುರಾಣ ಪುಣ್ಯಕತೆಗಳಲ್ಲಿ ನಿವೇದಿಸುವಂತೆ ಹಂಸಕ್ಷೀರ ನ್ಯಾಯದಂತೆ ಪರಾಮರ್ಶಿಸಬೇಕೆಂಬುದಾಗಿ ಸವಿನಯವಿನಂತಿಯು.

## ಅಣಕ



▸▸ ಎಚ್.ಎಲ್. ಕೇಶವಮೂರ್ತಿ

ಗಣಿ ಶ್ರೀಮಂತರೂ, ಬಡವರಾ ಧಾರಿಗಳೂ ತಾವೆಂದು ಭಾವಿಸಿರುವ ಸನ್ಮಾನ್ಯ ಶ್ರೀರಾಮುಲು ಜೈಲಿಗೆ ಹೋಗಲು ಕಾರಣವೇನೆಂದರೆ..... ಬಸುರಿ ಹೆಂಗಸರಿಗೆ ಬಯಕೆ ಆಗುವುದು ಸರ್ವರಿಗೂ ವೇದ್ಯ ಸಂಗತಿಯೇ ಆಗಿದೆ. ಇಂತಹ ಕೆಲವರಿಗೆ, ಮಣ್ಣಿನಿಂದ ಕೌರವ ಕೆಟ್ಟ, ಹೆಣ್ಣಿನಿಂದ ಪಾಂಡವ ಕೆಟ್ಟ ಎಂಬ ಅಂಶ ತಿಳಿಧಿದ್ದರೂ, ಮಣ್ಣನ್ನೇ ತಿನ್ನಬೇಕೆಂಬ ಬಯಕೆ ಆಗುತ್ತದೆ. ಅದು ತೀವ್ರ ಆದಾಗ ಕದ್ದುಮುಚ್ಚಾದರೂ ಸೇವಿಸಿ ತಮ್ಮ ಬಯಕೆಯನ್ನು ಈಡೇರಿಸಿಕೊಳ್ಳುತ್ತಾರೆ. ಈ ತೀವ್ರತೆ ಅನ್ನೋದು ಹುಲು ಮಾನವರನ್ನು ಬಲೇ ಕಾಡಿಸುತ್ತೆ... 'ಕಾಮಾತುರಾಣಾಂ ನಲಜ್ಜಾನ ಭೀತಿಃ' ಎಂದು ಸಂಸ್ಕೃತದಲ್ಲೇ ಹೇಳಿಲ್ವಾ... ಮಾನಮರ್ಯಾದೆ ಎಲ್ಲವನ್ನೂ ಬಿಟ್ಟು ಆಸೆಯನ್ನು ಪೂರೈಸಿಕೊಳ್ಳುವುದು ಮಾನವ ಸಹಜ ಗುಣ. ಸನ್ಮಾನ್ಯ ಸಚಿವರಿಗೂ ಇಂತಹ ತೀವ್ರತೆ- ಜೈಲು ನೋಡಬೇಕೆಂಬ ತೀವ್ರತೆ ಅತಿಯಾಗಿ ಕಾಡಿತಂತೆ. ಅದಕ್ಕೆ 'ಕಾಮಾತುರಾಣಾಂ' ದಾರೀನೆ ಹಿಡಿದರಂತೆ.

ಜೈಲನ್ನು ನೋಡಲೇಬೇಕೆಂಬ ತೀವ್ರತೆ ಅವರನ್ನು ಕಾಡಲು ಕಾರಣವೇನಿರಬಹುದು? ಅವರು ಹುಟ್ಟಿದಾರಭ್ಯ ಜೈಲಿನ ಮುಖವನ್ನೇ ಕಂಡಿರಲಿಲ್ಲವೆ? ಮುಂತಾದ ಪ್ರಶ್ನೆಗಳು ವಾಚಕಮಹಾಶಯರನ್ನು ಕಾಡಬಹುದು. ಅಂತಹವರ ಕುತೂಹಲ ತಣಿಸುವುದಾದರೆ... ಸನ್ಮಾನ್ಯರಿಗೆ ಜೈಲೆಂಬ ಜೈಲು ನೆಂಟರ ಮನೆ ಇದ್ದಂತೆ. ಜೈಲಾತಿಥ್ಯ ಪಡೆಯುವ ಸೌಭಾಗ್ಯವೂ ಈ ಮಹಾ ಪುರುಷರಿಗೆ ದೊರೆತಿತ್ತು, ಅದೆಲ್ಲ ಪೂರ್ವಾಶ್ರಮದ ಸಂಗತಿಯು. ಸಚಿವರಾದ ನಂತರವೂ 'ಜೈಲಾಶ್ರಮ'ದ ವಾಸನೆ ಸೆಳೆತವೇನಾದರೂ ಇದಕ್ಕೆ ಪ್ರಚೋದಿಸಿತೆ ಅಂದರೆ ಅದು ಇರಲಾರದು. ಯಾಕೆಂದರೆ ಮಂತ್ರಿವರ್ಯರಿಗೆ ಬಯಕೆ ಬಂದದ್ದು ಬಳ್ಳಾರಿ ಜೈಲನ್ನು ನೋಡಬೇಕೆಂದಲ್ಲ, ಪರಪ್ಪನ ಅಗ್ರಹಾರ ಜೈಲನ್ನು ನೋಡಬೇಕೆಂದು! ಈ ಜೈಲು ಅಂದರೆ ಹೊಸದು ನೋಡಿ. ಏನೇನು ಸೌಲಭ್ಯಗಳಿವೆ ಎಂಬುದನ್ನು ತಿಳಿಯಲು ಹೋಗಿರಬೇಕು. ಗಣಿ ಹಗರಣದ ನಿರ್ದಿಷ್ಟವಾದ ತನಿಖೆ ನಡೆದರೆ ತಮ್ಮ ವಾಸ ಅಲ್ಲಿಯೇ ಅಲ್ಲವೆ ಎಂಬ ಮುಂಜಾಗ್ರತಾ ಕ್ರಮವಾಗಿ ಪರಿಶೀಲಿಸಲು ಹೋಗಿರಬಹುದು ಎಂದು ಯಾರೂ ಕುಹಕ ಆಡಬೇಕಿಲ್ಲ. ಈ 'ಬಳ್ಳಾರಿ ಬಿಡ್ಡ' ಆಯ್ಕೆ ಬಳ್ಳಾರಿ ಜೈಲಾಗಿರುತ್ತದೆಯೇ ಪರಂತು ಪರಪ್ಪನ ಅಗ್ರಹಾರ ಜೈಲಲ್ಲ! ಅಲ್ಲಿಯ ಮಣ್ಣು ಅಂದರೆ ಅಗಾಧವಾದ ಪ್ರೀತಿ ಅವರಿಗೆ!

ಇನ್ನು ಜನಾರ್ದನ ರೆಡ್ಡಿ ವಿಷಯ ಪರಾಮರ್ಶಿಸೋಣ.

ಸನ್ಮಾನ್ಯರು ಈ ಹಿಂದೆ ಹಲವು ಬಿರುದು ಬಾವಲಿಗಳನ್ನು ಘೋಷಿಸಿಕೊಂಡದ್ದು ಸರಿಯಷ್ಟೆ. ಆ ಸಂಪ್ರದಾಯಕ್ಕನುಗುಣವಾಗಿ 'ನಾನು ಅಪರಂಜಿ ಚಿನ್ನ' ಎಂದು ಘೋಷಿಸಿಕೊಂಡಿದ್ದಾರೆ. ಇದರಲ್ಲಿ ಅಪರೂಪದ್ದೇನೂ ಇಲ್ಲ. ಇಂತಹ ಪ್ರಶಂಸೆಯ ಮಾತುಗಳನ್ನು ಇತರರು ಹೇಳಬೇಕು. ತನಗೆ ತಾನೇ 'ಬೋಪರಾಕ್' ಹೇಳಿಕೊಳ್ಳುವುದು ಸಭ್ಯತೆಯ ಲಕ್ಷಣ ಅಲ್ಲ ಅನ್ನಬಹುದು. ಅವರ ಸಂಕಟವನ್ನೂ ಅರ್ಥಮಾಡಿಕೊಳ್ಳಬೇಕು. ಹಿಂದೆ ಇದ್ದ ವಂದಿಮಾಗದರು ತಲೆ ಮರೆಸಿ ತಿರುಗ್ತಿದ್ದರೆ.... ರೆಡ್ಡಿ ದೊರೆಗಳು ಎಡಗೈಲಿ ಬಿಸಾಕಿದ್ದನ್ನು ಜೇಯಾ ಹಸಾದ ಎಂದು ಸ್ವೀಕರಿಸುತ್ತಾ ನಾಯಿಗಳಂತೆ ಬಿದ್ದಿದ್ದ ಶಾಸಕರೂ ಗುರುಗುಟ್ಟಲು ಪ್ರಾರಂಭಿಸಿದರೆ.... ಶುನಕಗಳೂ ಶಾರ್ದೂಲದಂತೆ ಘರ್ಜಿಸತೊಡಗಿದರೆ.... 'ಸ್ವಯಂ ಬಿರುದು ಪ್ರದಾನ' ಅನಿವಾರ್ಯವಾಗುತ್ತದೆ. ಮುಖ್ಯಮಂತ್ರಿಗಳೇನೋ ರೆಡ್ಡಿ ಸಹೋದರರು 'ಶೇಕಡ ನೂರ ಒಂದು' ಪರಿಶುದ್ಧರು ಎಂಬ ಸರ್ಟಿಫಿಕೇಟ್ ನೀಡಿದ್ದಾರೆ. ಇನ್ನೂ ಹೆಚ್ಚಿಗೆ ಅಂಕ ನೀಡಬಹುದಾಗಿತ್ತು. ಕನಿಷ್ಠ ನೂರ ಹನ್ನೊಂದರವರೆವಿಗಾದರೂ ಹೋಗಬಹುದಿತ್ತು! ಯಾಕೋ ನೂರಾ ಒಂದಕ್ಕೇ ನಿಲ್ಲಿಸಿದ್ದಾರೆ. ಇರಲಿ ಸಂಪೂರ್ಣವಾಗಿ ಅವರನ್ನೇ ಅವಲಂಬಿಸುವಂತೆ ಇಲ್ಲ. ಯಾವ ಗಳಿಗೆಯಲ್ಲಾದರೂ 'ಹೀಗೆ ಅಂಕ ನೀಡಿದ್ದಕ್ಕೆ ಕ್ಷಮೆ ಕೋರುತ್ತೀನಿ' ಎನ್ನಬಹುದಾದ ಅಂಜುಬುರುಕರವರು. ಈಗಾಗಲೇ 'ಅಕ್ರಮ ಗಣಿಗಾರಿಕೆ ನಡೆದಿಲ್ಲ' ಎಂದು ಮಾಧ್ಯಮಗಳ ಮುಂದೆ ವೀರಾವೇಶದಿಂದ ಹಾರಾಡಿದವರು 'ಇವರೇ ತೀರ್ಪು ನೀಡುವುದಾದರೆ ತನಿಖೆಯ ಅವಶ್ಯಕತೆಯಾದರೂ ಏನು?' ಎಂದು ಲೋಕಾಯುಕ್ತ ಗರಂ ಆದ ತಕ್ಷಣ ಬೀದಿನಾಯಿ ತರಹ ಬಾಲ ಮುದುರಿಕೊಂಡು 'ಇನ್ನು ಮುಂದೆ ಗಣಿ ವಿಷಯ ಮಾತಾಡಲ್ಲ' ಎಂದರು! ಇಂತಹ ಹಲವಾರು ಕಾರಣಗಳಿಂದಾಗಿ 'ಸ್ವಯಂ ಬಿರುದು ಪ್ರದಾನ' ಅನಿವಾರ್ಯವಾಯಿತೆಂಬುದನ್ನು ಅರಿಯಬೇಕಾಗಿ ಸವಿನಯಪೂರ್ವಕವಿನಂತಿ.....

### ಎಲ್ಲ ನಿನ್ನ ದಯೆ!

ಆಹಾ ದರಿದ್ರ ದೇವತೆಯೆ ಎನಿತು ವರ್ಣಿಸಲಿ ನಿನ್ನ ಮಹಾತ್ಮೆಯ!

ಸಿರಿವಂತರ ಅಧಿದೇವತೆ ನೀನು!

ಹಲವರ ಬಡತನ, ಕೆಲವರ ಶ್ರೀಮಂತಿಕೆಗೆ ನಿನ್ನ ಆರ್ಶಿರ್ವಾದ ಕವಚ.

ಎಲ್ಲ ನಿನ್ನ ದಯೆ!

ರೈಲು ಅಪಘಾತ. ನೂರಾರು ಮಂದಿ ಸಾವು ನೋವು. ಓಡಿ ಬರುವರು ರೈಲು ಮಂತ್ರಿ. ಹೇಳುವರು ಸಾಂತ್ವನ. ಘೋಷಿಸುವರು-ಮರಣ ಹೊಂದಿದವರಿಗೆ ಐದು ಲಕ್ಷ ಪರಿಹಾರ.

ಒಂದು ಹೆಣಕ್ಕೆ ಐದು ಲಕ್ಷ! ಎರಡಾದರೆ ಹತ್ತು ಲಕ್ಷ!!

ಸಂಬಂಧಿಕರ ಚಿಂತೆ- ಒಬ್ಬನೇ ಸತ್ತನಲ್ಲಾ, ಇನ್ನೊಬ್ಬನೂ ಸಾಯಬಾರದಿತ್ತೆ....

ಹಿಂದೆ ಸೋದರ ಸಂಬಂಧಿ ಸತ್ತರೆ ತೊಡಿಸುತ್ತಿದ್ದರು ಹೊಸಬಟ್ಟೆ. ಅದರ ಆಸೆಯಲಿ ಮರೆಯಲಿ ಸಾವ ಎಂದೇನೋ. ಈಗ ನೀಡುವರು ಪರಿಹಾರ ಧನ!

ದಿನ ಇಪ್ಪತ್ತು ರೂಪಾಯಿ ದುಡಿಯಲಾಗದವನ ಸಾವಿಗೂ ಪರಿಹಾರ ಐದು ಲಕ್ಷ!

ಮರೆಸಿದೆ ಅಸಾಮರ್ಥ್ಯವ. ಮೆರೆಸಿದೆ ಧಾರಾಳತನವ.

ದೇವರಾಗಿ ಕಂಡರು ಮಂತ್ರಿ.

'ಕೊಲೆ' ಎಂದಾಗಬೇಕಾದ್ದು ಆಗಿತ್ತು ಅಪಘಾತ!

ಎಲ್ಲ ನಿನ್ನ ದಯೆ!

ಬಸ್ಸು ಅಪಘಾತ. ಗುಳೆ ಹೊರಟಿದ್ದ ಜನರ ಸಾವು. ಓಡೋಡಿ ಬಂದರು ಸಾರಿಗೆ ಮಂತ್ರಿ. ಹೇಳಿದರು ಸಾಂತ್ವನ. ನೀಡಿದರು ಪರಿಹಾರ ಹಣ.

ಸಂತೃಪ್ತವಾಯಿತು ಜನ!

ಕೊಂಡಾಡಿದರು-'ದಯಾಮಯ'

ಎಲ್ಲ ನಿನ್ನ ದಯೆ!

ಹೆದ್ದಾರಿ ಅಪಘಾತ. ತರಾತುರಿಯಲ್ಲಿ ಬಂದರು ಲಾಯರು-

ಕೊಡಿಸಲು ಪರಿಹಾರ. ಬಡವರ ಕಣ್ಣಲ್ಲಿ ಅವ ಸಾಕ್ಷಾತ್ ದೈವ!

ಕೊಲೆ ಅಪಘಾತವಾಯಿತು

ಎಲ್ಲ ನಿನ್ನ ದಯೆ!

ಅದಿರು ಲಾರಿಯ ರಕ್ಕಸ ಚಕ್ರಕ್ಕೆ ಸಿಕ್ಕಿ ಸತ್ತ, ಬಿಸಾಕಿದರು ಹಣ. ಖುಷಿಯಾಯ್ತು ಜನ.

ಇದು ಕೊಲೆ ಅಲ್ಲ ಅಪಘಾತ!

ಎಲ್ಲ ನಿನ್ನ ದಯೆ!

ವಿದ್ಯುತ್ ತಂತಿ ಹರಿದುಬಿದ್ದು ನಡೆಯಿತು ದುರಂತ. ಘೋಷಿಸಿದ ಅಧಿಕಾರಿ-ಪರಿಹಾರ ಒಂದು ಲಕ್ಷ.


ಜೈಜೈ ಎಂದಿತು ಜನ.

ಎಲ್ಲ ನಿನ್ನ ದಯೆ!

ರೋಗಕ್ಕಿಂತ ಅಪಘಾತದಲ್ಲೇ ಹೆಚ್ಚಿನ ಸಾವು. ರೋಗ ಬಂದರೆ ಖರ್ಚಾಗುವುದು ಹಣ. ಅಪಘಾತವಾದರೆ ಬರುವುದು ಹಣ!

ರೋಗ ಬೇಡ, ಅಪಘಾತ ಬೇಕು!

ಎಲ್ಲ ನಿನ್ನ ದಯೆ!




# ಭೈರಪ್ಪನ ಬಗ್ಗೆ ಬರೆದದ್ದು ನೂರಕ್ಕೆ ಇನ್ನೂರರಷ್ಟು ಸತ್ಯ!

ಮಂತ್ರಿ ಪಾಲೇಮಾರ್ ಮಂಗಳೂರಿನ ಮಾಫಿಯಾಕ್ಕೆ ಮಾತ್ರ ಡಾನ್ ಅಲ್ಲ (ಲಂಕೇಶ್ ಆಗಸ್ಟ್ 4). ಇಡೀ ಕರಾವಳಿಯನ್ನು ಬೆಂಗಳೂರಿನ ಮಟ್ಟಕ್ಕೆ ಗಬ್ಬೆಬ್ಬಿಸಿರುವ ಭೂಮಾಫಿಯಾಕ್ಕೂ ಅವನೇ ಡಾನ್. ಮಂಗಳೂರಿನಲ್ಲಿ ಮೊದಲು ಮರಳು ವ್ಯಾಪಾರ ಮುಸ್ಲಿಮರ ಕೈಯಲ್ಲಿತ್ತು, ಪಾಲೇಮಾರ್ ಮಂತ್ರಿಯಾದ ನಂತರ ಮರಳು ದಂಧೆಯನ್ನು ಬಿಜೆಪಿ ಚೇಲಾಗಳು ಕೈವಶ ಮಾಡಿಕೊಂಡು ಬಿಹಾರಿ ಕೆಲಸಗಾರರಿಂದ ಜಿಲ್ಲೆಯ ಎಲ್ಲಾ ನದಿಗಳಿಂದಲೂ ಅಕ್ರಮ ಮರಳು ಬಗೆಯುತ್ತಿದ್ದಾರೆ. ಕಾರ್ಕಳದ ಬಿಜೆಪಿ ಮಾಜಿ ಶಾಸಕನೇ ಕೇರಳಕ್ಕೆ ಅಕ್ರಮ ಮರಳು ಸಾಗಾಣಿಕೆಗೆ ಟ್ರಕ್‌ಗಳನ್ನು ಪೂರೈಸುವುದು.

ಹಿಂದಿದರೂ ಒಂದಿಷ್ಟು ಇಂಗ್ಲಿಷ್ ಬಾರದ ಈ ಮೆಟ್ರಿಕ್ ಫೇಲ್ ಪಾಲೇಮಾರ್ 30 ವರ್ಷಗಳ ಹಿಂದೆ ಕಾಂಗ್ರೆಸ್ ನೇತಾರರ ಚೇಲಾಗಿರಿ ಮಾಡುತ್ತಿದ್ದ. ಒಂದು ಬ್ಯಾಂಕ್ ಸಾಲದ ಫಾರ್ಮ್ ತುಂಬಿಸಲಾಗದೇ ನಮ್ಮಿಂದ ತುಂಬಿಸಿಕೊಂಡು, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದಿಂದ ಒಂದು ಲಕ್ಷ ರೂ.ಸಾಲ ಪಡೆದು, ನಂತರ ಅದನ್ನು ಕಟ್ಟಲಾಗದೆ ಕೇಂದ್ರ ಮಂತ್ರಿ ಜನಾರ್ದನ ಪೂಜಾರಿಯವರ ಕಾಲು ಹಿಡಿದು ಆ ಸಾಲವನ್ನು ಮನ್ನಾ ಮಾಡಿಸಿಕೊಂಡಷ್ಟು ದೈನೇಸಿ ಸ್ಥಿತಿಯಲ್ಲಿದ್ದಾತ, ಇಂದು 50 ಕೋಟಿ ತೂಗುತ್ತಾನೆ! ಈತನಿಗೆ ವಿದ್ಯೆ ಹೆಚ್ಚಿಲ್ಲದಿದ್ದರೂ ಮಾಧ್ಯಮದ ಶಕ್ತಿ ಚೆನ್ನಾಗಿ ಗೊತ್ತಿದೆ. ಹಾಗಾಗಿ ಸ್ಥಳೀಯ ಪತ್ರಕರ್ತರನ್ನೆಲ್ಲಾ ಕುಡಿಸಿ, ತಿನ್ನಿಸಿ, ಖರೀದಿಸಿ ತನ್ನ ಪರವಾಗಿ ಸುದ್ದಿಗಳನ್ನು ಪತ್ರಿಕೆಗಳಲ್ಲಿ ಪ್ಲಾಂಟ್ ಮಾಡುವಲ್ಲಿ ನಿಷ್ಣಾತ. ಈಗ ಎಲ್ಲಾ ಮೀನುಗಾರಿಕೆ ಬಂದರುಗಳ ಹೂಳೆತ್ತುವ ಬೃಹತ್ ಯೋಜನೆ ಹಾಕಿಕೊಂಡಿದ್ದಾನೆ. ಹೂಳೆತ್ತಿದ ಮರಳು ಏನಾಗುತ್ತದೆ ಎಂದು ಎಲ್ಲರಿಗೂ ಗೊತ್ತಿದೆ. ಅದರಂತೆ ಮಂಗಳೂರಿನ ಶತಮಾನದಷ್ಟು ಹಳೆಯ ಸೆಂಟ್ರಲ್ ಮಾರ್ಕೆಟ್ ಕೆಡವಿ ಹೊಸದಾಗಿ ಕಟ್ಟುವ ನೂರು ಕೋಟಿಯ ಪ್ಲಾನ್ ಸಹ ಹಾಕಿಕೊಂಡಿದ್ದಾನೆ. ಕೇವಲ ಒಂದೆಕರೆ ಇಕ್ಕಟ್ಟಾದ ಸ್ಥಳದಲ್ಲಿರುವ ಈ ಕೇಂದ್ರ ಮಾರುಕಟ್ಟೆಯನ್ನು ಎಷ್ಟೇ ಭವ್ಯವಾಗಿ ಮರುನಿರ್ಮಾಣ ಮಾಡಿದರೂ 30 ಕೋಟಿಗಿಂತ ಹೆಚ್ಚು ಖರ್ಚಾಗಲಾರದು. ಹಾಗಾದರೆ ಉಳಿದ 70 ಕೋಟಿ ಯಾರ್‍ಯಾರ ಪಾಲಿಗೆ ಪಾಲೇ'ಮಾರ್'? ಸೆಂಟ್ರಲ್ ಮಾರ್ಕೆಟ್‌ನ ಸಣ್ಣ ವ್ಯಾಪಾರಿಗಳಲ್ಲಿ ಶೇ.80 ವ್ಯಾಪಾರಿಗಳು ಮುಸ್ಲಿಮರು ಕ್ರೈಸ್ತರು. ಇವರನ್ನು ಒಕ್ಕಲೆಬ್ಬಿಸುವ ಪ್ಲಾನೇ ಇದು?

ಬಳ್ಳಾರಿ ರೆಡ್ಡಿಗಳಂತೆ ಪಾಲೇಮಾರ್‌ನೂ 'ಲ್ಯಾಂಡ್‌ಲಿಂಕ್' ಎಂಬ ಕನ್‌ಸ್ಟ್ರಕ್ಷನ್ ಕಂಪೆನಿಯ ಲಾಭದಾಯಕ ಹುದ್ದೆ ಹೊಂದಿದ್ದಾನೆ. ರೆಡ್ಡಿಗಳಂತೆ ಮಂತ್ರಿ ಪದವಿಗೆ ಈತನೂ ಕಾನೂನುಪ್ರಕಾರ ಯೋಗ್ಯನಲ್ಲ, ಚುನಾವಣಾ ಆಯೋಗ ಇದನ್ನೂ ಪರಿಶೀಲಿಸಬೇಕು.

-ಸೋಮಚಂದರ್ ಎಸ್.ಬೈಕಂಪಾಡಿ, ಮಂಗಳೂರು




ಜುಲೈ 28ರ 'ಕಂಡಹಾಗೆ' ಕಾಲಂನಲ್ಲಿ ಭೈರಪ್ಪ ಎಂಬ ಗತಕಾಲದ ಸಾಹಿತಿಯ 'ಕವಲು' ಕಾದಂಬರಿಯ ಬಗ್ಗೆ ಗೌರಿ ಲಂಕೇಶ್ ಬರೆದದ್ದು ನೂರಕ್ಕೆ ಇನ್ನೂರರಷ್ಟು ಸತ್ಯ. ಭೈರಪ್ಪರವರಿಗೆ ಸ್ತ್ರೀಯರ ಬಗ್ಗೆ ಮಾತ್ರವಲ್ಲ, ಈ ನೆಲದ ದಲಿತರ, ಹಿಂದುಳಿದವರ, ಅಲ್ಪಸಂಖ್ಯಾತರ ಬಗ್ಗೆಯೂ ಯಾವುದೇ ಪ್ರೀತಿ ಇರಲಿ, ಗೌರವ ಸಹ ಇಲ್ಲ. ಇವರ್‍ಯಾರನ್ನೂ ಅವರು ತಮ್ಮಂತೆಯೇ ಜನ್ಮತಾಳಿದ ಮನುಷ್ಯರು ಎನ್ನುವ ಅಭಿಪ್ರಾಯವನ್ನೂ ಹೊಂದಿಲ್ಲ. ತಮ್ಮ ಪ್ರತಿಗಾಮಿ ಸಿದ್ಧಾಂತಗಳನ್ನು ಪ್ರಚಾರ ಮಾಡುವ ಮತ್ತು ಸನಾತನ ವಾದಿಗಳನ್ನು ಸಂಪ್ರೀತಗೊಳಿಸಲು ಭೈರಪ್ಪನವರು ಕಾಲ-ಕಾಲಕ್ಕೆ ಇಂತಹ ಪುಸ್ತಕಗಳನ್ನು ಬರೆದೆಸೆಯುತ್ತಿದ್ದರೆ, ಅವರ ಕುಲ ಬಾಂಧವರು ಅವನ್ನು ಪ್ರಸಾದವೆಂಬಂತೆ ಸ್ವೀಕರಿಸುತ್ತಾ ಬರುತ್ತಿದ್ದಾರೆ. ಇಂತಹವರ ಬಗ್ಗೆ ತಮ್ಮ ಎಚ್ಚರಿಕೆಯ ನುಡಿಗಳು ಪ್ರಸ್ತುತ. ನನ್ನ ಗೆಳತಿಯೊಬ್ಬಳು ಈ ಕಾದಂಬರಿಯನ್ನು ಓದಿ ಎಷ್ಟು ಅಪಸೆಟ್ ಆದಳೆಂದರೆ, ನಾನು ತಮಾಷೆಗೆ ಭೈರಪ್ಪನವರ ಪರ ಮಾತಾಡಿದ್ದಕ್ಕೆ ನನ್ನೊಂದಿಗೆ ಸದ್ಯ ಮಾತು ಬಿಟ್ಟಿದ್ದಾಳೆ!

ಬೇಜಾರೆಂದರೆ ನನ್ನ 250 ರೂಪಾಯಿ ವ್ಯರ್ಥವಾಗಿ ಬಿಟ್ಟಿದೆ. ಆ ಹಣವಿದ್ದರೆ ಇನ್ನೊಂದು ನಾಲ್ಕು ತಿಂಗಳು ತಮ್ಮ ಪತ್ರಿಕೆ ಕೊಳ್ಳಲು ನಾನು ನನ್ನ ಜೇಬುಗಳನ್ನು ತಡಕಾಡುವ ಪರಿಸ್ಥಿತಿ ಬರುತ್ತಿರಲಿಲ್ಲ.


-ಕು.ಸ.ಮಧುಸೂದನ, ರಂಗೇನಹಳ್ಳಿ

# ಡಬ್ಬಿಂಗ್ ಟಾನಿಕ್!

ದತ್ತು ವರ್ಷಗಳ ಹಿಂದೆ 'ಟಿಪ್ಪು ಸುಲ್ತಾನ್' ಧಾರಾವಾಹಿಯನ್ನು ಕನ್ನಡಕ್ಕೆ ಡಬ್ ಮಾಡಿದಾಗ ಅದನ್ನು ದರೆಲ್ಲ ನಾಗಾಭರಣರ ನೇತೃತ್ವದಲ್ಲಿ ಉಗ್ರವಾಗಿ ಧಿಸಿದರು. ಈಗ ಅದೇ ನಾಗಾಭರಣ ಸಿನಿಮಾ ಮಿಯ ಅಧ್ಯಕ್ಷರಾಗಿ "ಸರ್ಕಾರ ಪರಭಾಷಾ ಚಿತ್ರಗಳನ್ನು ಡಬ್ ಮಾಡಲು ಅವಕಾಶ ನೀಡಬೇಕು" ಎಂದು ದ್ದಾರೆ.

ಣರ ಮಾತು ಇಡೀ ಗಾಂಧಿನಗರದಲ್ಲಿ ಗೊಂದಲದ ರಣವನ್ನು ಸೃಷ್ಟಿಸಿದೆ. "ಉದ್ಯಮಕ್ಕೆ ಒಳ್ಳೇದು ಮಾಡಿ ನಿಮ್ಮನ್ನು ಅಧ್ಯಕ್ಷ ಸ್ಥಾನದಲ್ಲಿ ಕುಳ್ಳಿರಿಸಿದರೆ, ನೀವು ದ ಸರ್ವನಾಶಕ್ಕೆ ಹೊರಟಿ " ಎಂದು ಕಾರ್ಮಿಕ ಒಕ್ಕೂಟದ ಅಶೋಕ್ ಕಿಡಿಕಾರಿದ್ದಾರೆ.

ಡಾ.ರಾಜ್ ನೇತೃತ್ವದಲ್ಲಿ ಆ ದಲೂ ಕಲಾವಿದರು ಮತ್ತು ಗಳು ಡಬ್ಬಿಂಗ್‌ಅನ್ನು ವಿರೋ ರು. ಆ ಕಾಲಘಟ್ಟದಲ್ಲಿ ಆ ಯು ಸರಿಯೆನ್ನಿಸಿರಬಹುದು. ತ ಯಾವುದೇ ಒಂದು ವನ್ನು ಬದಲಾದ ಸಾಮಾಜಿಕ ತಿಯಲ್ಲಿ ಪುನರ್‌ವಿಮರ್ಶೆ ಳ್ಳದೆ ಇರಲು ಸಾಧ್ಯವಿಲ್ಲ. ನ್ನೆಲೆಯಲ್ಲಿ 1968ರಿಂದಲೂ ಲ್ಲಿರುವ ಡಬ್ಬಿಂಗ್ ವಿರೋಧಿ ನ್ನು ಸುಮಾರು 42 ವರ್ಷಗಳ ಈಗ ಪುನರ್‌ಪರಿಶೀಲಿಸಿದರೆ ಲ್ಲ.



ಕ್ಕೂ ನಮ್ಮ ನೆರೆಯ ರಾಜ್ಯಗಳಾದ ಆಂಧ್ರ ಮತ್ತು ನಾಡು ಸರ್ಕಾರ ಡಬ್ಬಿಂಗ್ ಮೇಲೆ ನಿರ್ಬಂಧ ಇಲ್ಲ, ಆ ರಾಜ್ಯಗಳು ಡಬ್ಬಿಂಗ್ ಚಿತ್ರಗಳಿಗೆ ಶ ಮಾಡಿಕೊಟ್ಟಿದ್ದರಿಂದ ಅಲ್ಲಿನ ಚಿತ್ರರಂಗಗಳೇನು ಶವಾಗಿದೆಯೇ? ಅಥವಾ ಡಬ್ಬಿಂಗ್ ವಿರೋಧಿ ಬದ್ಧವಾಗಿರುವುದರಿಂದ ಕನ್ನಡ ಚಿತ್ರರಂಗವೇನು ಗಿ ಮಿಂಚುತ್ತಿದೆಯೇ? ಎಂದು ನಮಗೆ ನಾವೇ ಕೇಳಬೇಕಾಗಿದೆ.


0 ವರ್ಷಗಳ ಹಿಂದೆ ಡಬ್ಬಿಂಗ್‌ಗೆ ಅವಕಾಶ ಮಾಡಿದ್ದಲ್ಲಿ ಡಬ್ಬಿಂಗ್ ಚಿತ್ರಗಳೇ ಬರುತ್ತದೆ, ಆಗ ಕನ್ನಡದವರಿಗೆ ಶವಿರುವುದಿಲ್ಲ, ಇಲ್ಲಿಯ ಪ್ರತಿಭೆಗಳು ಅರಳುವುದಿಲ್ಲ ವಾದಿ ಕೂಗು ಕೇಳಿಬಂದಿತ್ತು. ಒಂದು ರೀತಿಯಲ್ಲಿ ಮಾತು ನಿಜ ಕೂಡಾ ಆಗಿದ್ದರಿಂದಲೋ ಏನೋ, ಡಬ್ಬಿಂಗ್ ವಿರೋಧಕ್ಕೆ ಸಹಮತ ವ್ಯಕ್ತಪಡಿಸಿದ್ದರು.

ಆದರೆ ಕನ್ನಡದ ಚಿತ್ರರಂಗದ ಇಂದಿನ ಸ್ಥಿತಿಗತಿ ನೋಡಿದರೆ ನಿಜಕ್ಕೂ ಡಬ್ಬಿಂಗ್ ಚಿತ್ರಗಳಿಗೆ ಅವಕಾಶ ನೀಡುವುದರಿಂದ ಚಿತ್ರರಂಗಕ್ಕೆ ಅಂತಹ ಅಪಾಯವೇನೂ ಆಗಲಾರದು ಎನಿಸುತ್ತದೆ. ಯಾಕೆಂದರೆ ಕನ್ನಡ ಚಿತ್ರರಂಗದಲ್ಲಿ ಈಗ ಕನ್ನಡ ಪ್ರತಿಭೆಗಳಿಗೆ, ಕನ್ನಡದ ತಂತ್ರಜ್ಞರಿಗೆ ಅವಕಾಶ ಸಿಗುತ್ತಿಲ್ಲವೆಂಬುದು ಎಲ್ಲರಿಗೂ ಗೊತ್ತಿರುವ ವಿಷಯವೇ. ಉದಾಹರಣೆಗೆ ಕನ್ನಡ ಚಿತ್ರಗಳಿಗೆ ನಾಯಕಿ ಪರಭಾಷೆಯಿಂದಲೇ ಬರಬೇಕು, ಖಳನಾಯಕ ಮತ್ತು ಪೋಷಕ ನಟರೂ ಮುಂಬೈ ಅಥವಾ ಆಂಧ್ರದವನಾಗಬೇಕು. ಕನ್ನಡದ ಹಾಡನ್ನು ಕನ್ನಡ ಗೊತ್ತಿಲ್ಲದ ಮುಂಬೈ ಗಾಯಕ-ಗಾಯಕಿಯರಿಂದಲೇ ಹಾಡಿಸುತ್ತಿದ್ದಾರೆ. ನೆರೆಯ ಆಂಧ್ರದ ಸಂಗೀತ ನಿರ್ದೇಶಕರಿಗೆ ರತ್ನಗಂಬಳಿ ಹಾಕಿ ಸ್ವಾಗತಿಸುತ್ತಿದ್ದಾರೆ.

ಪರಭಾಷಾ ತಂತ್ರಜ್ಞ(ಛಾಯಾಗ್ರಾಹಕ, ಸಂಕಲನಕಾರ, ಶಬ್ದಗ್ರಾಹಕ)ರಿಗೆ ಗಾಂಧಿನಗರದಲ್ಲಿ ಎಲ್ಲಿಲ್ಲದ ಡಿಮ್ಯಾಂಡ್! ಇಲ್ಲಿಯ ಗೀತರಚನಕಾರರಿಗೆ ಅಲ್ಲಿಯ ಹಾಡುಗಳನ್ನು ಅನುವಾದ ಮಾಡುವುದಷ್ಟೇ ಕೆಲಸ ವಿನಃ ಹೊಸದಾಗಿ ಹಾಡು ಬರೆಯಲು ಅವಕಾಶವೇ ಇಲ್ಲ! ಇಷ್ಟು ಸಾಲದೆಂಬಂತೆ ನಮ್ಮ ನಾಯಕನಟರು ಕೂಡಾ ಪರಭಾಷೆಯ ನಿರ್ಮಾಪಕರುಗಳಿಗೇ ಕಾಲ್‌ಶೀಟ್ ನೀಡಲು ಅತ್ಯುತ್ಸಾಹ ತೋರಿಸುತ್ತಾರೆಯೇ ವಿನಃ ಕನ್ನಡದ ನಿರ್ಮಾಪಕರಿಗಲ್ಲ! ಯಾಕೆಂದರೆ ಪರಭಾಷೆಯ ನಿರ್ಮಾಪಕರು ಹೆಚ್ಚು ಹಣ ನೀಡುತ್ತಾರೆ ಮಾತ್ರವಲ್ಲ, ಒಂದೇ ಕಂತಿನಲ್ಲಿ ಎಲ್ಲವನ್ನೂ ಕೊಟ್ಟು ಹೀರೋಗಳನ್ನು ದಿಲ್‌ಖುಷ್ ಮಾಡುತ್ತಾರೆ. ಇದು ಕನ್ನಡ ಚಿತ್ರರಂಗದ ಸದ್ಯದ ಪರಿಸ್ಥಿತಿ. ಈಗ ನೀವೇ ಹೇಳಿ ಇಂತಹ ವಾತಾವರಣದಲ್ಲಿ ಕನ್ನಡದವರಿಗೆ ಎಲ್ಲಿ ಕೆಲಸ ಸಿಗುತ್ತದೆ?

ಇದು ಒಂದು ವಿಷಯವಾದರೆ, ಇದಕ್ಕಿಂತ ಗಂಭೀರವಾದ ಮತ್ತೊಂದು ತೊಂದರೆಯನ್ನು ಡಬ್ಬಿಂಗ್ ವಿರೋಧಿ ನೀತಿಯಿಂದಾಗಿ ಕನ್ನಡ ಚಿತ್ರರಂಗ ಅನುಭವಿಸುತ್ತಿದೆ. ಉದಾಹರಣೆಗೆ ಈ ಹಿಂದೆ ಚಿಕ್ಕಬಳ್ಳಾಪುರ, ಕೋಲಾರ ಮತ್ತು ರಾಯಚೂರು ಪ್ರದೇಶಗಳಲ್ಲಿ ಮಾತ್ರ ತೆಲುಗು ಚಿತ್ರಗಳು ಪ್ರದರ್ಶನ ಕಾಣುತ್ತಿದ್ದವು. ಅಲ್ಲಿ ತೆಲುಗು ಮಾತನಾಡುವ ಜನರು ಇರುವುದರಿಂದ ಅದು ಸಹಜವಾಗಿತ್ತು. ಆದರೆ ಈಗ ಮಲೆನಾಡು ಪ್ರದೇಶವಾದ ಶಿವಮೊಗ್ಗ ಮತ್ತು ಚಿಕ್ಕಮಗಳೂರು, ಕರಾವಳಿ ಪ್ರದೇಶಗಳಾದ ಮಂಗಳೂರು, ಉಡುಪಿ ಕಡೆಯೂ ಕೂಡಾ ತೆಲುಗು-ತಮಿಳು ಚಿತ್ರಗಳು ಶತದಿನೋತ್ಸವ ಆಚರಿಸುತ್ತಿವೆ. ಇದೊಂದು ಅತ್ಯಂತ ಅಪಾಯಕಾರಿ ಬೆಳವಣಿಗೆ.

ಈಗ ಒಂದು ವೇಳೆ ಡಬ್ಬಿಂಗ್ ಚಿತ್ರಗಳಿಗೆ ಅನುಮತಿ ನೀಡಿದರೆ ಪರಿಸ್ಥಿತಿ ಹೇಗಾಗಬಹುದು ನೀವೇ ಊಹಿಸಿ. ತೆಲುಗು ತಮಿಳು ಚಿತ್ರಗಳು ಶತದಿನೋತ್ಸವ ಆಚರಿಸುವ ಬದಲಿಗೆ ಅದೇ ತೆಲುಗು ತಮಿಳು ನಾಯಕರು ಕನ್ನಡದಲ್ಲಿ ಮಾತನಾಡುವ ಡಬ್ಬಿಂಗ್ ಚಿತ್ರಗಳು ಶತದಿನೋತ್ಸವ ಆಚರಿಸುತ್ತದೆ. ಡಬ್ಬಿಂಗ್ ಚಿತ್ರಗಳ ಪ್ರದರ್ಶನ ನಿರ್ಬಂಧ ಮಾಡಿರುವುದರಿಂದ ಪರೋಕ್ಷವಾಗಿ ಪರಭಾಷೆಗಳು ಈ ಸಿನಿಮಾ ಮಾಧ್ಯಮದ ಮುಖಾಂತರ ಕರ್ನಾಟಕದ ಮೂಲೆಮೂಲೆಗೂ ಪಸರಿಸಿವೆ. ಅದರ ಬದಲಿಗೆ ಕನ್ನಡದ ಪ್ರೇಕ್ಷಕರಿಗೆ ಕನ್ನಡ ಭಾಷೆಯಲ್ಲೇ ಅಮಿತಾಬ್‌ನ 'ಅವತಾರ್', ರಜನೀಕಾಂತ್‌ರ 'ಚಂದ್ರಮುಖಿ', ವಿಕ್ರಮ್-ಅಭಿಷೇಕ್ ಬಚ್ಚನ್‌ನ 'ರಾವಣನ್', ಸೂರ್ಯನ 'ಸಿಂಗಂ'... ಚಿತ್ರಗಳನ್ನು ನೋಡಲು ಅವಕಾಶ ಮಾಡಿಕೊಟ್ಟಂತಾಗುವುದಲ್ಲವೇ? ಆ ತಾರೆಯರುಗಳೆಲ್ಲಾ ಕನ್ನಡ ಭಾಷೆಯನ್ನೇ ಮಾತಾಡುವ ಮೂಲಕ ಕನ್ನಡ ರಾಯಭಾರಿಗಳಂತೆ ವರ್ತಿಸುವ ಅವಕಾಶವನ್ನು ನಾವೇ ಕಟ್ಟಿಹಾಕಿದಂತಾಗಿದೆ. ಹೀಗಾಗಿ ಡಬ್ಬಿಂಗ್ ವಿರೋಧ ಮಾಡಿರುವುದರಿಂದ ಕನ್ನಡ ಭಾಷೆಯ ಪ್ರಸಾರಕ್ಕೆ ಕುತ್ತಾಗಿದೆ; ಮಾತ್ರವಲ್ಲ ಸಿನಿಮಾ ಎಂಬ ದೃಶ್ಯಕಾವ್ಯದ ಮುಖಾಂತರ ಪರಭಾಷೆ ಕನ್ನಡ ಜನರ ನಾಲಿಗೆಯಲ್ಲಿ ನಲಿದಾಡಲು ಈ ಡಬ್ಬಿಂಗ್ ವಿರೋಧಿ ನೀತಿ ಸಹಕಾರಿಯಾಗಿದೆ.



ಅಂದು 1968ರಲ್ಲಿ ಕನ್ನಡ ಚಿತ್ರೋದ್ಯಮ ಇನ್ನೂ ಬಾಲ್ಯಾವಸ್ಥೆಯಲ್ಲಿತ್ತು. ಆಗ ಡಬ್ಬಿಂಗ್‌ಗೆ ಅವಕಾಶ ಮಾಡಿದ್ದರೆ ಉದ್ಯಮ ಗಟ್ಟಿಯಾಗಿ ತಳವೂರಲು ಸ್ವಲ್ಪ ತೊಂದರೆಯಾಗುತ್ತಿದ್ದುದ್ದೇನೋ ನಿಜ. ಆದರೆ ಪರಿಸ್ಥಿತಿ ಈಗ ಸಂಪೂರ್ಣವಾಗಿ ಬದಲಾಗಿದೆ. ಕನ್ನಡ ಚಿತ್ರರಂಗ ಕರ್ನಾಟಕದಲ್ಲಿ ಗಟ್ಟಿಯಾಗಿ ತಳವೂರಿದೆ. ಹೀಗಾಗಿ ಪರಭಾಷಾ ಚಿತ್ರಗಳ ಡಬ್ಬಿಂಗ್‌ಗೆ ಅವಕಾಶ ನೀಡಿದರೆ ನಮ್ಮ ಚಿತ್ರೋದ್ಯಮ ಕುಸಿದುಬೀಳುತ್ತದೆ ಎಂದು ಉದ್ಯಮದವರು ಭಯ ಪಡುವ ಅಗತ್ಯವೇನೂ ಇಲ್ಲ.

ಹಾಗೆ ನೋಡಿದರೆ ಡಬ್ಬಿಂಗ್ ವಿರೋಧಿ ನೀತಿಯಿಂದಾಗಿ ನಿಜವಾದ ಲಾಭ ಪಡೆದವರೆಂದರೆ ಕೆಲವೇ ಕೆಲವು ನಿರ್ಮಾಪಕರು ಮತ್ತು ನಾಯಕ ನಟರುಗಳು ಮಾತ್ರ! ರಿಮೇಕ್ ಚಿತ್ರಗಳನ್ನು ಮಾಡಿ ಕೆಲವು ನಿರ್ಮಾಪಕರು ಕೋಟಿ-ಕೋಟಿ ಹಣ ಸಂಪಾದಿಸಿದರು. ಹಾಗೆಯೇ ಕೆಲವು ನಾಯಕ ನಟರು ತಮ್ಮ ಸಂಭಾವನೆಯನ್ನು ಒಂದೇಸಮನೇ ಏರಿಸುತ್ತಾ ಹೋದರು. ಕನ್ನಡ ಪ್ರೇಕ್ಷಕರು ಮೂಲಚಿತ್ರಕ್ಕಿಂತ ಕಳಪೆ ಚಿತ್ರಗಳನ್ನು ನೋಡಬೇಕಾಗಿ ಬಂತೇ ವಿನಃ ಅದರಿಂದಾಗಿ ಕನ್ನಡ ಭಾಷೆಯ ಉದ್ಧಾರವೇನೂ ಆಗಲಿಲ್ಲ.

ಇನ್ನು ನಮ್ಮ ಕಾರ್ಮಿಕ ಬಂಧುಗಳು ಕೆಲಸವಿಲ್ಲದೇ ನಿರುದ್ಯೋಗಿಗಳಾಗುತ್ತಾರೆಂಬ ಭಯ ಈಗಂತೂ ಇಲ್ಲವೇ ಇಲ್ಲ, ಯಾಕೆಂದರೆ 60ರ ದಶಕದಲ್ಲಿ ಟಿವಿ ಚಾನೆಲ್‌ಗಳು, ಮೆಗಾಸೀರಿಯಲ್‌ಗಳು ಇರಲಿಲ್ಲ, ಆದರೆ ಈಗ ಸುಮಾರು 10 ಚಾನೆಲ್‌ಗಳಿಂದ 100ಕ್ಕೂ ಹೆಚ್ಚು ಮೆಗಾ ಸೀರಿಯಲ್‌ಗಳು ನಡೆಯುತ್ತಿವೆ. ಹೀಗಾಗಿ ಕಾರ್ಮಿಕರಿಗೆ ಮತ್ತು ತಂತ್ರಜ್ಞರಿಗೆ ಈಗ ಕೈತುಂಬಾ ಕೆಲಸವಿದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಕಾರ್ಮಿಕ ಒಕ್ಕೂಟದ ಅಧ್ಯಕ್ಷ ಅಶೋಕ್ ಕೂಡಾ ಡಬ್ಬಿಂಗ್ ನೀತಿಯ ಬಗ್ಗೆ ತಮ್ಮ ಚಿಂತನೆಯನ್ನು ಪುನರ್‌ಪರಿಶೀಲನೆ ಮಾಡಬೇಕಿದೆ. ಡಬ್ಬಿಂಗ್‌ಗೆ ಅವಕಾಶ ನೀಡಿದ್ದೇ ಆದಲ್ಲಿ ಖಂಡಿತ ವಾಗಿಯೂ ಕನ್ನಡದ ಕಥೆಗಾರರು ಮತ್ತು ನಿರ್ದೇಶಕರ ಹೊಸ ಚಿಂತನೆಗಳಿಗೆ ಜೀವ ಬರುವ ಸಾಧ್ಯತೆ ಇದೆ. ಅಂದರೆ ಕನ್ನಡದ ಪ್ರತಿಭಾವಂತ ಹುಡುಗರ ಕ್ರಿಯಾಶೀಲತೆ ಮತ್ತು ಹೊಸತನಗಳಿಗೆ ವೇದಿಕೆಯನ್ನು ನಿರ್ಮಿಸಿದಂತಾಗುತ್ತದೆ. ನಿಜವಾಗಿಯೂ ಹೇಳಬೇಕೆಂದರೆ ಡಬ್ಬಿಂಗ್ ವಿರೋಧಿ ನೀತಿಯಿಂದಾಗಿ ಕನ್ನಡ ಚಿತ್ರರಂಗದವರು ಆಲಸಿಗಳಾಗಿ ತಮಿಳು ಮತ್ತು ತೆಲುಗು ಚಿತ್ರೋದ್ಯಮಿಗಳಿಗೆ ಶರಣಾಗಿದ್ದಾರೆ; ಗುಲಾಮರಾಗಿದ್ದಾರೆ. ಅಲ್ಲಿ ಬಾಕ್ಸಾಫೀಸ್‌ನಲ್ಲಿ ಗೆದ್ದ ಚಿತ್ರವನ್ನು ಇಲ್ಲಿ ರಿಮೇಕ್ ಮಾಡುವುದಕಷ್ಟೇ ಅವರ ಕ್ರಿಯಾಶೀಲತೆ ಸೀಮಿತವಾಗಿದೆ. ದಿಢೀರ್ ಹಣ ಮಾಡುವ ನಿರ್ಮಾಪಕರು ಹೊಸಕಥೆ ಕೇಳುವ ಬದಲು ಪರಭಾಷೆಯ ಸಿಡಿಗಳನ್ನು ತಂದು ಚಿತ್ರ ಮಾಡುವ ದಂಧೆ ಆರಂಭವಾಗಿದ್ದೇ ಈ ಹಿನ್ನೆಲೆಯಲ್ಲಿ.

ಬಹುಶಃ ಡಬ್ಬಿಂಗ್ ವಿರೋಧಿ ನೀತಿಯಿಂದಾಗಿ ನಮ್ಮ ಚಿತ್ರರಂಗ ಕನಿಷ್ಠವೆಂದರೂ ಐವತ್ತು ವರ್ಷ ಹಿಂದೆ ಸರಿದಿದೆ. ನಾವು ಈಗಲೂ ಈ ನೀತಿಯನ್ನು ಪುನರ್‌ಪರಿಶೀಲಿಸದೇ ಸುಮ್ಮನೆ ಕುಳಿತರೆ ಗಾಂಧಿನಗರ ಇನ್ನಷ್ಟು ಕುಸಿಯುವುದಂತೂ ಗ್ಯಾರಂಟಿ. ಪರಭಾಷಾ ಚಿತ್ರಗಳನ್ನು ರಿಮೇಕ್ ಮಾಡಿ, ಕನ್ನಡದ ಪ್ರೇಕ್ಷಕರಿಗೆ ಚಿತ್ರಾನ್ನ ಉಣಿಸುವ ಈ ರೋಗಕ್ಕೆ ಮದ್ದೆಂದರೆ ಡಬ್ಬಿಂಗ್ ಮೇಲಿನ ನಿರ್ಬಂಧವನ್ನು ಸರ್ಕಾರ ತೆಗೆದುಹಾಕುವುದೇ ಆಗಿದೆ.

ಈ ಹಿನ್ನೆಲೆಯಲ್ಲಿ ನಾಗಾಭರಣ ಸರ್ಕಾರಕ್ಕೆ ಸಿನಿಮಾ ಅಕಾಡೆಮಿಯ ಅಧ್ಯಕ್ಷರಾಗಿ ಮಾಡಿರುವ ಶಿಫಾರಸ್ಸು ಒಂದು ರೀತಿಯಲ್ಲಿ ನಿಶ್ಯಕ್ತಿಯಿಂದಿರುವ ಗಾಂಧಿನಗರಕ್ಕೆ ಟಾನಿಕ್ ನೀಡಿದಂತಾಗಿದೆ ಎಂದು ಹೇಳಬಹುದು. ಇಷ್ಟಕ್ಕೂ ಇದು ಅವರು ಸರ್ಕಾರಕ್ಕೆ ನೀಡಿರುವ ವರದಿ. ಅದರ ಸಾಧಕ-ಬಾಧಕವನ್ನು ಚರ್ಚಿಸದೇ ಇದು 'ಕನ್ನಡ ವಿರೋಧಿ ನೀತಿ' ಎಂದು ಅವರ ಮೇಲೆ ಗೂಬೆ ಕೂರಿಸುವುದು ಸರಿಯಲ್ಲ, ಉದ್ಯಮದವರು ಈ ಬಗ್ಗೆ ಅನೇಕ ಚಿಂತಕರ ಜೊತೆ ಚರ್ಚೆ ಮಾಡಲಿ. ಡಬ್ಬಿಂಗ್ ಅನುಮತಿಗೆ ನೀಡಿದರೆ ಕನ್ನಡ ಭಾಷೆಗೆ ಮತ್ತು ಉದ್ಯಮಕ್ಕೆ ತೊಂದರೆಯಿಲ್ಲವೆಂದು ಖಾತ್ರಿಯಾದ ಮೇಲೆ ಅವಕಾಶ ಕೊಟ್ಟರೆ ತಪ್ಪೇನು? ಒಂದುವೇಳೆ ಅದರಿಂದಾಗಿ ಚಿತ್ರದ್ಯೋಮಕ್ಕೆ ಭಾರೀ ತೊಂದರೆಯಾಗುವುದಾದಲ್ಲಿ ಇದನ್ನು ಖಂಡಿತಾ ವಿರೋಧಿಸೋಣ. ಆದರೆ ಸದ್ಯಕ್ಕೆ ಆಗಬೇಕಾಗಿರುವುದು ಇದರ ಸಾಧಕಭಾದಕಗಳ ಕುರಿತಾದ ಒಂದು ಆರೋಗ್ಯಪೂರ್ಣ ಚರ್ಚೆ.....

• ಸದಾಶಿವ ಶೆಣೈ
shenoylankesh@gmail.com

# ಗೋವಿಂದನಿಗೆ ಮುಲುಕೋ ರೋಗ

ಬಡ ಮಕ್ಕಳಿಗೆ ಪುಸ್ತಕ-ಪೆನ್ನು ಹಂಚುವುದೇ ಸೇವೆ, ಬಿಳಿ ಬಟ್ಟೆ ತೊಟ್ಟು ಕೈಲಿ ಬಾವುಟ ಹಿಡಿಯು ಹೋರಾಟ, ಕೈಲಿ ಮೈಕು ಹಿಡಿದ ಕೂಡಲೇ ರು ಎಂದು ತಪ್ಪು ತಪ್ಪೇ ಕಲ್ಪಿಸಿಕೊಂಡು, ಸುಳ್ಳು ಮಾತಾಡಿಕೊಂಡು ತಿರುಗುವ ಸಾ.ರಾ. ಗೋವಿಂದು ಗಾಂಧಿನಗರದ ಹಳೇ ತಲೆಗೆ ತುಕ್ಕು ಹಿಡಿದಂತೆ ತ್ತಿದೆ...

ಮೊನ್ನೆ ನಡೆದದ್ದಿಷ್ಟು:

ಜಗ್ಗೇಶ್ ನಟಿಸಿರುವ 'ಲಿಫ್ಟ್ ಕೊಡ್ಲಾ' ರಾಜ್ಯಾದ್ಯಂತ ಯಶಸ್ವಿಯಾಗಿ ಪ್ರದರ್ಶನ ಕಾಣುತ್ತಿರುವುದರಿಂದ ಜಗ್ಗೇಶ್ ಮತ್ತು ನಿರ್ಮಾಪಕ ಶಂಕರ್ ರೆಡ್ಡಿ ಇತ್ತೀಚೆಗೆ ಪತ್ರಕರ್ತರಿಗಾಗಿ 'ಗ್ರೀನ್ ಹೌಸ್'ನಲ್ಲಿ ಸಂತೋಷ ಕೂಟವೊಂದನ್ನು ಏರ್ಪಡಿಸಿದ್ದರು. ಪತ್ರಿಕಾ ಗೋಷ್ಠಿ ಮುಗಿದನಂತರ ಪತ್ರಕರ್ತರೊಂದಿಗೆ ಲೋಕಾಭಿರಾಮವಾಗಿ ಮಾತಾಡು ಜಗ್ಗೇಶ್ ಮೊಬೈಲಿಗೆ ಫೋನ್ ಬಂತು. ಜಗ್ಗೇಶ್ "ದಯವಿಟ್ಟು ಇಲ್ಲಿ ಬರ್ಬೇಡಿ. ನೀವು ಆರು ಗಂಟೆ ಮೇಲೆ ಹೊರಗೆ ಅದು ಸರಿಹೋಗಲ್ಲ" ಎಂದು ಜಗ್ಗೇಶ್ ಹೇಳಿ ಕಟ್‌ಮಾಡಿದರು. ಇದಾದ ಐದತ್ತು ನಿಮಿಷಕ್ಕೆಲ್ಲಾ ಬಟ್ಟೆ ತೊಟ್ಟ ಆಕಾರವೊಂದು ಗ್ರೀನ್ ಹೌಸ್‌ನ ಇಳಿದು ತಟ್ಟಾಡುತ್ತಾ ಬಂತು.

ವ್ಯಕ್ತಿ ಹತ್ತಿರ ಬಂದಮೇಲಷ್ಟೇ ಗೊತ್ತಾಗಿದ್ದು ಸಾರಾ ಗೋವಿಂದು ಎಂದು...

ಒಳಗೆ ಬಂದ ಗೋವಿಂದು ತಮ್ಮ ಮುಂದಿದ್ದ ಗ್ಲಾಸ್ ಮತ್ತನ್ನು 'ಪರಮಾತ್ಮ'ನನ್ನು ಸುರಿದುಕೊಂಡರು.



ಅದು ಒಳಗೆ ಹೋಗುತ್ತಿದ್ದಂತೆ ಗೋವಿಂದುಗೆ ಎಲ್ಲಿಲ್ಲೋ ಮುಲುಕು ಶುರುವಾಗಿ ಬಾಯಿಗೆಬಂದಂತೆ ಮಾತನಾಡಲು ಶುರುಮಾಡಿದರು.

"ಏನ್ರೀ ಜಗ್ಗೇಶ್, ನಿಮಗೋಸ್ಕರ ಸಿನಿಮಾ ಮಾಡಲು ಯಾವುದೋ ಒಂದು ಸೀಡಿ ತಂದಿದೀನಿ. ಅದನ್ನ ರಿಮೇಕ್ ಮಾಡ್ಬೇಕು. ನೀವು ಮಾಡ್ಲಿಲ್ಲ ಅಂದ್ರೆ ನಿಮ್ ಬ್ರದರ್ ಕೋಮಲ್‌ನ ಹಾಕ್ಕೊಂಡು ಮಾಡ್ತೀನಿ ಅಷ್ಟೇ..." ಎಂದು ಜಗ್ಗೇಶ್ ಮೇಲೆ ಹೇರಿಕೊಂಡು ಹೋದರು. ಸಾರಾ ಗೋವಿಂದು ಟೈಟಾಗಿರುವುದನ್ನು ಕಂಡು ಜಗ್ಗೇಶ್‌ನಂತಹ ಘೋರ ಮಾತುಗಾರನೇ ಸುಮ್ಮನಾದರು ಎಂದರೆ ಗೋವಿಂದುವಿನ ಪರಿಸ್ಥಿತಿ ಹೇಗಿತ್ತೆಂದು ಊಹಿಸಿ.

ಆನಂತರ ಪತ್ರಕರ್ತ ಸಂದೀಪ್ ನಾಯ್ಕರ ಕಡೆ ತಿರುಗಿದ ಗೋವಿಂದು "ಏನ್ರೀ ನನ್ ಬಗ್ಗೆ ಏನೇನೋ ಬರ್ದಿದ್ದೀರ" ಅಂತ ಅವರಿಗೆ ಧಮಕಿ ಹಾಕಿದರು. ಇದನ್ನು ಕೇಳಿ ಕಕ್ಕಾಬಿಕ್ಕಿಯಾದ ಸಂದೀಪ್ "ಪ್ರಜಾವಾಣಿಯಲ್ಲಿ ನಿಮ್ಮ ಬಗ್ಗೆ ಏನೂ ಬರೆದಿಲ್ವಲ್ಲ.." ಎಂದರು. ಅಸಲಿಗೆ ಗೋವಿಂದು ಬಗ್ಗೆ ವರದಿ ಪ್ರಕಟವಾಗಿದ್ದು ಉದಯವಾಣಿಯಲ್ಲಿ. ಆದರೆ ಗೋವಿಂದು "ಯಾವ ವಾಣಿಯಾದರೇನು? ಎಲ್ಲಾ ಒಂದೇ. ಪತ್ರಕರ್ತರು ಬಡ ಕೂಲಿ ಕಾರ್ಮಿಕರಂತೆ. ನಮ್ಮಂಥ ನಿರ್ಮಾಪಕರು ಇಲ್ಲ ಎಂದರೆ ನಿಮ್ಮಂಥ ಪತ್ರಕರ್ತರು ಮಣ್ಣು ತಿನ್ನಬೇಕು" ಎಂದು ಯದ್ವಾತದ್ವಾ ಕೂಗಾಡಲಾರಂಭಿಸಿದರು.


ತಕ್ಷಣ ಸಿಟ್ಟಿಗೆದ್ದ ಪತ್ರಕರ್ತರು ಸಂತೋಷಕೂಟದಿಂದ ಹೊರನಡೆದು ಸಾಮೂಹಿಕವಾಗಿ ಗೋವಿಂದುಗೆ 'ಧಿಕ್ಕಾರ' ಹೇಳಿದರು. ಆದರೆ ಮಧ್ಯ ಪ್ರವೇಶಿಸಿದ ಜಗ್ಗೇಶ್ "ದಯವಿಟ್ಟು ಕ್ಷಮಿಸಿ. ಇದು ನನ್ನ ಚಿತ್ರದ ಪತ್ರಿಕಾಗೋಷ್ಠಿ" ಎಂದು ಗೋಗರೆದರು. ಪರಿಸ್ಥಿತಿಯ ಬಿಸಿ ತಟ್ಟುತ್ತಿದ್ದಂತೇ ಕುಡಿದ ನಶೆ ಇಳಿಸಿಕೊಂಡ ಗೋವಿಂದು ಗಾಬರಿಗೊಂಡು 'ಕ್ಷಮೆ' ಕೇಳಿ ಅಲ್ಲಿಂದ ಓಟ ಕಿತ್ತರು.

ಇತ್ತೀಚಿನ ದಿನಗಳಲ್ಲಿ ಸಾರಾ ಗೋವಿಂದು ಅವರ ಕುಡಿತ ಮಿತಿಮೀರಿದೆ. ಹಗಲೂರಾತ್ರಿಯೆನ್ನದೆ ಗೋವಿಂದು ತೂರಾಡುತ್ತಾ ತಿರುಗುವುದಂತೂ ಮಾಮೂಲಾಗಿದೆ. ಹೀಗಾಗಿ ಅವರ ಆತ್ಮೀಯ ಬಳಗದವರೇ ಅವರಿಗೆ 'ಸಾರಾಯಿ ಗೋವಿಂದು' ಎಂದು ಅಡ್ಡ ಹೆಸರನ್ನೂ ಇಟ್ಟಿದ್ದಾರೆ.

"ಪತ್ರಕರ್ತರು ಬಡ ಕೂಲಿಕಾರ್ಮಿಕರಂತೆ" ಎಂದು ದುರಹಂಕಾರದಿಂದ ಹೇಳಿರುವ ಗೋವಿಂದು ಮೂವತ್ತು ವರ್ಷಗಳ ಹಿಂದೆ ಮಾಡುತ್ತಿದ್ದದ್ದು ಏನು ಕೆಲಸ? ಸಿನಿಮಾ ಯೂನಿಟ್‌ನಲ್ಲಿ ಪಟಾಪಟ್ಟಿ ಪಂಚೆ ಉಟ್ಟು, ಗಲೀಜು ಬನೀನು ಹಾಕಿಕೊಂಡು, ಕೈಲಿ ಸೌಟು ಹಿಡಿದು ಅಡುಗೆ ಮಾಡಿಕೊಂಡು, ಸಿನಿಮಾದವರು ಉಂಡನಂತರ ತಟ್ಟೆ ಲೋಟ ತೊಳೆಯುತ್ತಿದ್ದವರು ಗೋವಿಂದು. ಹಿಂದೊಮ್ಮೆ ತಾನೂ ಒಬ್ಬ ಬಡ ಕೂಲಿಕಾರ್ಮಿಕನಾಗಿ, ನಂತರದ ದಿನಗಳಲ್ಲಿ ತನ್ನ ದಿಕ್ಕು ದೆಸೆ ಬದಲಿಸಿಕೊಂಡ ಗೋವಿಂದುಗೆ ಕಾರ್ಮಿಕರ ಬಗ್ಗೆ ಈಗ ಅದ್ಯಾಕಿಷ್ಟು ತುಚ್ಛ ಭಾವನೆ ಬಂದಿದೆ ಅನ್ನೋದು ಕನ್ನಡಾಂಬೆಗೇ ಗೊತ್ತು!

## ಒಳಗೆ ಸೇರಿದರೆ ಗುಂಡು ಗೋವಿಂದು ಆಗುವರು..!

ಗೋವಿಂದುವನ್ನು ಕುಡಿತವೆಂಬುದು ಅದೆಷ್ಟು ಕೆಡಿಸಿದೆಯೆಂದರೆ ಕೆಲವೊಮ್ಮೆ ಅವರ ಮಾತು ಅವರಿಗೇ ಅರ್ಥವಾಗುವುದಿಲ್ಲ.



ಕೆಲತಿಂಗಳ ಹಿಂದೆ 'ಮುಸ್ಸಂಜೆ ಗೆಳತಿ' ಎನ್ನುವ ಸಿನಿಮಾವೊಂದು ಬಿಡುಗಡೆಯಾಗಿತ್ತು. ಆ ಚಿತ್ರದಲ್ಲಿ ಖಾರದ ಪುಡಿ ಸೀನ ಆಲಿಯಾಸ್ ಶ್ರೀನಿವಾಸ್ ಎಂಬಾತ ತನ್ನ ಮಗಳೊಂದಿಗೇ ಹೀರೋ ಆಗಿ ನಟಿಸಿದ್ದ. ಈ ಸಿನಿಮಾ ಮತ್ತು ಶ್ರೀನಿವಾಸನ ಹುಚ್ಚಾಟವನ್ನು ಇಡೀ ಮಾಧ್ಯಮ ಟೀಕಿಸಿತ್ತು. ಆಗ ಮಧ್ಯಸ್ಥಿಕೆಗೆ ಬಂದು ಶ್ರೀನಿವಾಸನ ಹುಚ್ಚಾಟವನ್ನು ಸಮರ್ಥಿಸಿಕೊಂಡ ಗೋವಿಂದ ಮಹಾಶಯರು "ಪಾಪ ಶ್ರೀನಿವಾಸು. ಏನೋ ಆಸೆಪಟ್ಟು ತಮ್ಮ ಮಗಳೊಂದಿಗೇ ಹೀರೋ ಆಗಿ ನಟಿಸುತ್ತಿದ್ದಾರೆ. ಆದರೆ ಅವರು ಮಗಳೊಂದಿಗೆ ಐಟಂ ಸಾಂಗ್‌ನಲ್ಲೇನೂ ಕುಣಿದಿಲ್ಲ ಬಿಡಿ. ಇಂಥದಕ್ಕೆಲ್ಲಾ ನಮ್ಮ ಮಾಧ್ಯಮದವರು ಕೆಟ್ಟದಾಗಿ ಬರೆಯಬಾರದು. ಅವರಿಗೆ ಬೆಂಬಲ ನೀಡಬೇಕು, ಪಾಪಾ....." ಎಂದೆಲ್ಲ ಅಸಂಬದ್ಧವಾಗಿ ಮಾತನಾಡಿದ್ದರು.

ಚಲನ ಚಿತ್ರ ವಾಣಿಜ್ಯ ಮಂಡಳಿಯಲ್ಲಿ ಜವಾಬ್ದಾರಿಯುತ ಸ್ಥಾನದಲ್ಲಿರುವ ಗೋವಿಂದು ಇನ್ನಾದರೂ ಬಾಯಿಗೆ ಬೀಗ ಬಡಿದುಕೊಂಡು ತೆಪ್ಪಗಿರಬೇಕಿದೆ...

• ಅರುಣೋದಯ

Regd.No.KA/RNP/[illegible]S/2036/2008-10 Posted at : GPO, Bangalore-01. R B P LANKESH, Kannada Weekly Price Rs. 12/- 11-08-2010 RNI No. KARKAN2005/14648

# ಹೆಂಡ್ತಿ ದರ್ಬಾರ್‌ಗೆ ಗಣೇಶನೇ ಡೈರೆಕ್ಟರ್!







ಗಣೇಶನ ಕುತ್ತಿಗೆ ?ದು ಆತನನ್ನು ಮುಳುಗಿಸಲು ಆತನ ಹೆಂಡತಿಯೊಬ್ಬಳೇ ಸಾಕೇನೋ?!

ಗಣೇಶ್ ಮತ್ತು ಆತನ ಪತ್ನಿ ಶಿಲ್ಪಾ ಸಿನಿಮಾ ನಿರ್ಮಾಣ ಆರಂಭಿಸಿದಾಗ ಎಲ್ಲರೂ ಖುಷಿಗೊಂಡಿದ್ದರು. ನಿನ್ನೆ ಮೊನ್ನೆ ಬಂದ ಹುಡುಗ ಸಿನಿಮಾ ನಿರ್ಮಾಣಕ್ಕಿಳಿದಿದ್ದಾನೆ. ಇದರಿಂದ ಕನ್ನಡ ಚಿತ್ರರಂಗದ ಒಂದಷ್ಟು ಕಲಾವಿದ-ತಂತ್ರಜ್ಞರಿಗೆ ಅವಕಾಶಗಳು ಸಿಗುತ್ತವೆ ಎಂದು ಅವರೆಲ್ಲ ಲೆಕ್ಕಿಸಿದ್ದರು.

ಆದರೆ ಈಗ ಆಗಿರುವುದೇ ಬೇರೆ.

ಇತ್ತೀಚೆಗಷ್ಟೇ ಗಣೇಶ್ ಮತ್ತು ಶಿಲ್ಪಾ ತಮ್ಮ ಹೋಮ್ ಬ್ಯಾನರಿನಲ್ಲಿ ನಿರ್ಮಿಸುತ್ತಿರುವ 'ಕೂಲ್' ಎಂಬ ಸಿನಿಮಾ ಆರಂಭವಾಗಿದೆ. ಇದು ತೆಲುಗಿನ 'ರಿಷಿ' ಸಿನಿಮಾದ ರಿಮೇಕು. ಈ ಚಿತ್ರವನ್ನು ಕನ್ನಡದಲ್ಲಿ ಮಾಡಲು ತೀರ್ಮಾನಿಸಿದ ಗಣೇಶ್ ಅದರ ನಿರ್ದೇಶನದ ಜವಾಬ್ದಾರಿಯನ್ನು 'ಮುಸ್ಸಂಜೆ' ಮಹೇಶ್ ಯಾನೆ ದಾಡಿ ಮಹೇಶ್‌ಗೆ ವಹಿಸಿದ್ದರು. ತೆಲುಗಿನಲ್ಲಿ ಪಡಾಲ ಶಿವಸುಬ್ರಮಣ್ಯ ಬರೆದಿದ್ದ ಮೂಲ ಕತೆಯ ಎಳೆಯನ್ನು ಇಟ್ಟುಕೊಂಡ ಮಹೇಶ್ ಹೊಸದಾಗಿ ಚಿತ್ರಕತೆ ಬರೆದರು. ಶಿವಸುಬ್ರಮಣ್ಯ ಅವರ ಮಾರ್ಗದರ್ಶನದಲ್ಲೇ ಹದಿನೈದು ದಿನ ಕೂತು ಸಂಭಾಷಣೆಯನ್ನೂ ಬರೆದರು.

ಈ ಹಿಂದೆ ಗಣೇಶ್ ನಟಿಸಿದ್ದ 'ಗಾಳಿಪಟ' ಚಿತ್ರಕ್ಕೆ ತಮಿಳಿನ ರತ್ನವೇಲುವೇ ಕ್ಯಾಮೆರಾ ಕೆಲಸ ಮಾಡಿದ್ದ ಮತ್ತು ಗಣೇಶನಿಗೆ ಸಿಕ್ಕಾಪಟ್ಟೆ ಆತ್ಮೀಯನೂ ಆಗಿದ್ದ. ಈ ಕಾರಣಕ್ಕೆ ತನ್ನ ಹೊಸ ಸಿನಿಮಾಗೂ ರತ್ನವೇಲುನೇ ಛಾಯಾಗ್ರಾಹಕನಾಗಬೇಕು ಎಂದು ಗಣೇಶ್ ಮತ್ತು ಶಿಲ್ಪಾ ಹಠ ಹಿಡಿದು ಆತನನ್ನೇ ಕರೆತಂದಿದ್ದೂ ಆಯಿತು. ಸಿನಿಮಾ ಕೂಡಾ ಆರಂಭವಾಯಿತು.

ಆದರೆ ಚಿತ್ರೀಕರಣದ ಮೊದಲ ದಿನವೇ ರತ್ನವೇಲು ಮತ್ತು ಮಹೇಶ್ ಮಧ್ಯೆ ಕಿರಿಕಿರಿ ಆರಂಭವಾಗಿದೆ. ಮಹೇಶ್ ಆ ಚಿತ್ರದ ನಿರ್ದೇಶಕ ಎಂಬುದನ್ನೂ ಮರೆತ ರತ್ನವೇಲು ಸೀದಾ ತಾನೇ ಶಾಟ್ ರೆಡಿ ಮಾಡಿ ರೀಲು ಸುತ್ತಲು ಆರಂಭಿಸಿದ್ದಾನೆ. ಇಡೀ ಚಿತ್ರ ತಂಡವನ್ನು ತನ್ನ ಹಿಡಿತದಲ್ಲೇ ಹಿಡಿದಿಟ್ಟುಕೊಂಡು ಡಾಮಿನೇಟ್ ಮಾಡಿದ್ದಾನೆ.

ರತ್ನವೇಲು ದಕ್ಷಿಣ ಭಾರತದ ಪ್ರತಿಭಾವಂತ ಛಾಯಾಗ್ರಾಹಕ ಅನ್ನೋದು ನಿಜ. ಆದರೆ ಆತನಿಗೆ ತಾನೊಬ್ಬನೇ ಸರ್ವಶ್ರೇಷ್ಠ ಎನ್ನುವ ಭ್ರಮೆಯೂ ಇದೆ. ರಜನಿಕಾಂತ್ ನಟಿಸಿರುವ 'ರೋಬೋ' ಚಿತ್ರಕ್ಕೆ ಈತ ಕ್ಯಾಮೆರಾ ಕೆಲಸ ಮಾಡಿದ ನಂತರವಂತೂ ಈತನನ್ನು ಹಿಡಿದು ನಿಲ್ಲಿಸುವುದೇ ಅಸಾಧ್ಯವಾಗಿದೆ. ಇಂಥದ್ದರಲ್ಲಿ ಗಣೇಶ್ ಕರೆದು ಒತ್ತಾಯಪೂರ್ವಕವಾಗಿ ಕೆಲಸ ಕೊಟ್ಟ ಮೇಲಂತೂ ಆತನ ಅಹಂ ಮತ್ತಷ್ಟು ಇಮ್ಮಡಿಗೊಂಡಿದೆ.

ನಿರ್ದೇಶಕನ ಆದೇಶಕ್ಕೆ ಕ್ಯಾರೇ ಅನ್ನದೇ, ತನಗಿಷ್ಟಬಂದಂತೆ ಚಿತ್ರೀಕರಿಸುವುದನ್ನು ಯಾರಿಂದಲೂ ಸಹಿಸುವುದು ಅಸಾಧ್ಯ. ಹೀಗಾಗಿ ರತ್ನವೇಲು ತನ್ನನ್ನು ಮೂಲೆಗುಂಪು ಮಾಡುತ್ತಿರುವ ವಿಚಾರವನ್ನು ಗಣೇಶನಿಗೆ ಮಹೇಶ್ ತಿಳಿಸಿದ್ದಾನೆ. ಆದರೆ ಮಾರನೆ ದಿನ ಗಣೇಶ ಮತ್ತು ಶಿಲ್ಪಾ ಇಬ್ಬರೂ ಶೂಟಿಂಗ್ ಸ್ಪಾಟ್‌ಗೆ ಬಂದ ನಂತರವೂ ವೇಲುನ ವರಸೆ ಮುಂದುವರೆದಿದೆ. ಇದರಿಂದ ಬೇಸರಕ್ಕೊಳಗಾದ ಮಹೇಶ್ ನಿರ್ಮಾಪಕಿ ಶಿಲ್ಪಾ ಅವರ ಬಳಿ ತಮ್ಮ ಅಸಮಾಧಾನವನ್ನು ತೋಡಿಕೊಂಡಿದ್ದಾರೆ.

ಅದಕ್ಕೆ ಸ್ಪಂದಿಸದ ಶಿಲ್ಪಾ "ನಿಮ್ಮಂಥವರಿಗೆಲ್ಲಾ ಸುಂದರನಾಥ ಸುವರ್ಣ, ಪಿ.ಎಚ್. ದಾಸ್‌ರಂಥ ಕನ್ನಡದಲ್ಲಿರುವ ಸಣ್ಣಪುಟ್ಟ ಕ್ಯಾಮೆರಾಮನ್‌ಗಳೇ ಸರಿ. ರತ್ನವೇಲು ಗ್ರೇಟ್ ಕ್ಯಾಮೆರಾಮನ್. ಅವರಿಂದ ಏನೇ ತೊಂದರೆ ಆದರೂ ಸ್ವಲ್ಪ ಅಡ್ಜಸ್ಟ್ ಮಾಡ್ಕೊಳಿ" ಎಂದಿದ್ದಾಳೆ. ಶಿಲ್ಪಾಳ ಈ ಮಾತನ್ನು ಮಹೇಶ್ ಒಪ್ಪದೇ ಇದ್ದಾಗ "ಯೂ ಡರ್ಟಿ ಡೈರೆಕ್ಟರ್, ಗೆಟ್ ಔಟ್ ಫ್ರಂ ಹಿಯರ್" ಎಂದು ದರ್ಪದಿಂದ ಎಗರಾಡಿದ್ದಾಳೆ.

ಮೊದಲೇ ಮಹೇಶ್ ಪಾಪದ ಮನುಷ್ಯ. ತಮ್ಮ ಕೆನ್ನೆ ತುಂಬಾ ಜೇನುಗೂಡಿನಂತೆ ವಿಶಾಲವಾಗಿ ಗಡ್ಡ ಬಿಟ್ಟರೂ ಜೇನಿನಂತೆ ಯಾರಿಗೂ ಕಚ್ಚದೆ, ತಮ್ಮ ಸವಿಸವಿಮಾತಿನಿಂದಲೇ ಎಲ್ಲರನ್ನೂ ಸೆಳೆಯುವ ಯುವಕ. 'ಮುಸ್ಸಂಜೆ ಮಾತು'ನಂಥ ಸೂಪರ್ ಹಿಟ್ ಚಿತ್ರ ಕೊಟ್ಟರೂ ಯಾವತ್ತೂ ಎದೆ ನಿಮಿರಿಸಿಕೊಂಡು ನಡೆದವರಲ್ಲ, 'ಇನಿಯ' ಚಿತ್ರ ಕೆಟ್ಟ ರೀತಿ ಸೋತಾಗಲೂ ಕುಗ್ಗಿ ಕೂತವರಲ್ಲ. ಇಂಥ ಮಹೇಶ್ ಒಬ್ಬ ಹೀರೋನ ಪತ್ನಿ ಕಂ ನಿರ್ಮಾಪಕಿಯಿಂದ ಕೆಟ್ಟ ಮಾತು ಕೇಳಿದ ನಂತರವೂ ಹೇಗೆ ತಾನೆ ಅಲ್ಲಿರಲು ಸಾಧ್ಯ? ಹೀಗಾಗಿ ತಮ್ಮ ಸ್ವಾಭಿಮಾನವನ್ನು ಬಲಿಕೊಡಲು ಇಚ್ಛಿಸದ ಮಹೇಶ್ ಸೀದಾ ಶೂಟಿಂಗ್ ಸ್ಪಾಟ್‌ನಿಂದ ಹೊರಬಂದಿದ್ದಾರೆ.

ಇಷ್ಟೆಲ್ಲಾ ಗಲಾಟೆ ಜರುಗುತ್ತಿರುವಾಗ ಸ್ವತಃ ಗಣೇಶ ಅಲ್ಲೇ ಇದ್ದರೂ ಹೆಂಡತಿಗೆ ಕಮಕ್‌ಕಿಮಕ್ ಎನ್ನದೇ ಏನೂ ಗೊತ್ತಿಲ್ಲದ ಗುಮ್ಮಯ್ಯನಂತೆ ಸುಮ್ಮನಿದ್ದ. ಮಹೇಶ್ ಓರ್ವ ಹೊಸ ನಿರ್ದೇಶಕನಾಗಿದ್ದರೆ ಅದೇನೂ ಅಷ್ಟು ಮಹತ್ವ ಪಡೆಯುತ್ತಿರಲಿಲ್ಲ. ಆದರೆ ಗಣೇಶ್ ನಟಿಸಿರುವ, ಇನ್ನೇನು ಬಿಡುಗಡೆಗೆ ಸಿದ್ಧವಾಗಿರುವ 'ಏನೋ ಒಂಥರಾ' ಸಿನಿಮಾವನ್ನು ನಿರ್ದೇಶಿಸಿರುವುದು ಕೂಡಾ ಇದೇ ಮಹೇಶ್. ಅಷ್ಟೇ ಅಲ್ಲದೆ, ಹಿಂದೆ ಗಣೇಶ ನಟಿಸಿದ್ದ ಧಾರಾವಾಹಿಗಳಲ್ಲೂ ಮಹೇಶ್ ಆತನೊಂದಿಗೆ ಕೆಲಸ ಮಾಡಿದ್ದವರು.

ಈ ಸ್ನೇಹವಿಶ್ವಾಸಗಳನ್ನೆಲ್ಲಾ ಅರೆಗಳಿಗೆಯಲ್ಲೇ ಮರೆತು ತನ್ನ ಹೆಂಡತಿಯನ್ನು ಛೂಬಿಟ್ಟು ಮಹೇಶ್‌ರನ್ನು ಚಿತ್ರತಂಡದಿಂದ ಹೊರಹಾಕಿದ್ದಾನೆ ಗಣೇಶ್. ಮಹೇಶ್ ಮುನಿಸಿಕೊಂಡು ಈಚೆಗೆ ಬರುತ್ತಿದ್ದಂತೆ ಮಾಧ್ಯಮಗಳಿಗೆ ಸುದ್ದಿ ನೀಡಿದ ಶಿಲ್ಪಾ "ಗಣೇಶ್ ಅವರೇ ಈ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ" ಎಂದು ಅನೌನ್ಸ್ ಮಾಡಿದ್ದಾಳೆ. ಯಾವುದೇ ಒಂದು ಚಿತ್ರದಿಂದ ನಿರ್ದೇಶಕ ಹೊರಬಿದ್ದು ಆತನ ಜಾಗದಲ್ಲಿ ಬೇರೆಯವರು ಕೂರಬೇಕೆಂದರೆ, ಅದಕ್ಕೆ ವಾಣಿಜ್ಯ ಮಂಡಳಿಯಿಂದ ಎನ್‌ಓಸಿ ಪಡೆಯಬೇಕು. ಆದರೆ ಈ ಯಾವ ರೀತಿ, ನಿಯಮಗಳನ್ನೂ ಪಾಲಿಸದ ಶಿಲ್ಪಾ ತನ್ನ ಗಂಡನೇ ನಿರ್ದೇಶಕ ಎಂದು ಘೋಷಿಸುವಷ್ಟು ತಿಮಿರು ಮೈಗೂಡಿಸಿಕೊಂಡಿದ್ದಾಳೆ.

ಛೇಂಬರ್ ಅಧಿಕಾರಿಗಳು ಬರುವ ಶನಿವಾರ ಗಣೇಶ್, ಶಿಲ್ಪಾ ಮತ್ತು ಮಹೇಶ್ ಮೂವರನ್ನೂ ಕರೆಸುತ್ತಿದ್ದಾರೆ. ಛೇಂಬರ್ ಕಟೆಕಟೆಯಲ್ಲಿ ಇನ್ನೇನು ತೀರ್ಮಾನವಾಗುತ್ತದೋ? ಗೊತ್ತಿಲ್ಲ.

"ನನಗೆ ಅವಕಾಶ ಕೊಡ್ತೀನಿ ಅಂತ ಹೇಳಿ ಎಷ್ಟೋ ಜನ ನಿರ್ದೇಶಕರು ನನ್ನನ್ನು ಕರೆಸಿಕೊಂಡು ಆನಂತರ ವಾಪಸ್ ಕಳಿಸಿದ್ದರು. ಕಡೇ ಪಕ್ಷ ಊಟ ಮಾಡಿಕೊಂಡು ಹೋಗು ಅಂತಾನೂ ಹೇಳುತ್ತಿರಲಿಲ್ಲ. ನಾನು ನಿರಾಸೆಗೊಂಡು ನೆಲಮಂಗಲಕ್ಕೆ ನಡೆದುಕೊಂಡೇ ವಾಪಸ್ ಹೋಗುತ್ತಿದ್ದೆ..." ಎಂದು ತನ್ನ ಆರಂಭದ ಕಷ್ಟಕರ ದಿನಗಳನ್ನು ರಂಗುರಂಗಾಗಿ ಹೇಳಿ ಸಿಂಪತಿ, ಪ್ರಚಾರಗಳೆರಡನ್ನೂ ಒಟ್ಟೊಟ್ಟಿಗೇ ಪಡೆಯುತ್ತಾ ಬಂದಿರುವ ಗಣೇಶ ಇಷ್ಟು ಕೀಳಾಗಿ ವರ್ತಿಸಿ, ತನ್ನ ಚಿತ್ರದ ನಿರ್ದೇಶಕರನ್ನೇ ಅವಮಾನಿಸಿ ಹೊರದಬ್ಬುತ್ತಾನೆ ಎಂದರೆ ನಂಬಲಿಕ್ಕೆ ಸಾಧ್ಯವಾ?

ಹಣದ ಅಮಲು ಎಂಥವರನ್ನೂ ಬದಲಿಸಿಬಿಡುತ್ತದೆ ಎನ್ನುವುದಕ್ಕೆ ಗಣೇಶನಿಗಿಂತ ಬೇರೆ ನಿದರ್ಶನ ಬೇಕೆ?

● ಅರುಣ್ ಜಿ.
arunodayagc@gmail.com



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44